ಪ್ರಚೋದನೆ


ಲಂಕೇಶ್

14 ಸೆಪ್ಟೆಂಬರ್ 2016 ಪುಟ 20 ರೂ. 15/-

ಮೋದಿ ಓದಲೇ ಬೇಕಾದ ಪುಸ್ತಕಗಳು

ಮತ್ತೆ ಗೋವಿಗೆ ಗಂಟುಬಿದ್ದ






ಸಿದ್ದು ಬಗಲ್ ಮೆ ಚೋರ್ ಜಾಧವ್

ತುಮಕೂರು
ಂಡವಾಳಿಗರ
ಪವರ್‌ಗಾಗಿ
ರೈತರು


ಕೊಡಗು
ಕಾಂಗ್ರೆಸ್ ಪಕ್ಷದ
ಶೋಚನೀಯ
ಸ್ಥಿತಿ

ಬಳ್ಳಾರಿ
ಜನದ್ರೋಹಿ
ಜಿಂದಾಲ್
ಕಂಪೆನಿಯ
ಕಿಡ್ನ್ಯಾಪ್ ತಂತ್ರ

ಉಡುಪಿ ಸರ್ಕಾರೀ ಆಸ್ಪತ್ರೆ ಏಕೆ ಹಸ್ತಾಂತರವಾಗಬಾರದು



ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದೊಳಗೆ ಇರುವ 'ಒಳ್ಳೆಯವರ' ಕಥೆಯೂ ಇಷ್ಟು ಕೆಟ್ಟದಾಗಿರುವುದು ಸಾಧ್ಯ. ಆರ್ಥಿಕ ನೀತಿಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಕ್ಕೆ ಅಷ್ಟೊಂದು ದೊಡ್ಡ ವ್ಯತ್ಯಾಸವಿಲ್ಲ ಎಂದು ಕೆಲವರು ಹೇಳುತ್ತಾರೆ. ಅದು ವಾಸ್ತವವಲ್ಲ, ಎರಡು ಪಕ್ಷಗಳೂ ಕಾರ್ಪೊರೇಟ್ ಹಿತಾಸಕ್ತಿಯನ್ನೇ ಪ್ರತಿನಿಧಿಸುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ, ಅದನ್ನು ಬಿಜೆಪಿಯು ಅಗ್ರೆಸಿವ್ ಆಗಿ ಪ್ರತಿಪಾದಿಸುತ್ತದೆ ಮತ್ತು ಅಗ್ರೆಸಿವ್ ಆಗಿ ಜಾರಿಗೆ ತರುತ್ತದೆ. ಕಾಂಗ್ರೆಸ್‌ನೊಳಗೆ ಇದನ್ನು ಹೇಗೆ ಮಾಡಬೇಕು ಎಂಬುದರ ಕುರಿತು ಭಿನ್ನವಾದ ಅಭಿಪ್ರಾಯಗಳಿವೆ. ಈ ಹಿಂದಿನ ಯುಪಿಎ ಸರ್ಕಾರದ ಒಳಗೇ ಎರಡು ಸ್ಪಷ್ಟ ಭಿನ್ನಬಣಗಳಿದ್ದವು. ಒಂದು ಕಡೆ ಪಿ.ಚಿದಂಬರಂ, ಕಪಿಲ್ ಸಿಬಲ್, ದೇವ್ರಾ, ಕಮಲನಾಥ್ ಥರದವರಿದ್ದರೆ, ಇನ್ನೊಂದು ಕಡೆಗೆ ಎ.ಕೆ.ಆಂಟನಿ, ಜೈರಾಂ ರಮೇಶ್, ಜೈಪಾಲ ರೆಡ್ಡಿ, ಮಲ್ಲಿಕಾರ್ಜುನ ಖರ್ಗೆ ಮತ್ತಿತರರಿದ್ದರು. ಮನಮೋಹನಸಿಂಗ್ ಮತ್ತು ಸೋನಿಯಾ ಗಾಂಧಿ ಎರಡರ ಮಧ್ಯೆ ಇದ್ದಂತೆ ತೋರಿಸಿಕೊಳ್ಳುತ್ತಿದ್ದರು. ಆದರೆ, ಪ್ರಧಾನಿ ಮೊದಲನೆಯ ಬಣದ ಕಡೆಗೂ, ಸೋನಿಯಾ ಗಾಂಧಿ ಎರಡನೆಯ ಬಣದ ಕಡೆಗೂ ಹೆಚ್ಚು ವಾಲುತ್ತಿದ್ದರು. ಮೊದಲ ಬಣ ಇನ್ನಷ್ಟು ಕಾರ್ಪೊರೇಟ್‌ಗಳ ಪರ ನೀತಿಗಳನ್ನು ಜಾರಿಗೆ ತರಬೇಕೆಂದು ಪ್ರತಿಪಾದಿಸುತ್ತಿದ್ದರೆ, ಎರಡನೆಯ ಬಣ ಅದಕ್ಕೆ ಒಂದಷ್ಟು ಮಾನವೀಯ ಮುಖವಾಡ ಇರಬೇಕೆಂದು ಹೇಳುತ್ತಿತ್ತು. ಒಟ್ಟಾರೆ ಇವೆರಡು ಬಣಗಳ ಗುದ್ದಾಟದ ನಡುವೆ ವಿಶ್ವಬ್ಯಾಂಕ್ ಪ್ರೇರಿತ 'ಮಾನವೀಯ ಮುಖವಾಡ ಹಾಗೂ ಜನರ ಸಹಭಾಗಿತ್ವ'ದ ಹೆಸರಿನ ನೀತಿಗಳು ಜಾರಿಯಾಗುತ್ತಿದ್ದವು. ಇನ್ನು ಸಿದ್ದರಾಮಯ್ಯ, ಕಾಗೋಡು ತಿಮ್ಮಪ್ಪ ರಮೇಶ್ ಕುಮಾರ್ ಥರದ ರಾಜಕಾರಣಿಗಳ ವಿಚಾರಕ್ಕೆ ಬರುವುದಾದರೆ ಇವರು ಇನ್ನೂ ಸ್ವಲ್ಪ ಭಿನ್ನ. ಇವರುಗಳು ಸುದೀರ್ಘ ಕಾಲ ತಳಮಟ್ಟದ ಜನರ ಒಡನಾಟವನ್ನು ಹೊಂದಿದ್ದು, ಆಡಳಿತ ಯಂತ್ರಾಂಗ ಮತ್ತು ಸಾಮಾಜಿಕ ವ್ಯವಸ್ಥೆಗಳು ಹೇಗೆ ಜನರ ವಿರುದ್ಧ ಕೆಲಸ ಮಾಡುತ್ತದೆ ಎಂಬುದರ ಕುರಿತು ಸ್ವಲ್ಪವಾದರೂ ಒಳನೋಟ ಹೊಂದಿರುವವರು. ಆದರೆ, ಇಂಥವರ ನೇತೃತ್ವದಲ್ಲೂ ಹಸಿಹಸಿಯಾಗಿ ಜನವಿರೋಧಿ ನೀತಿಗಳು ಜಾರಿಗೆ ಬರುತ್ತವೆ ಮತ್ತು ಬರುತ್ತಿವೆ ಎಂಬುದನ್ನು ತೋರಿಸುವ ಹಲವಾರು ನಿದರ್ಶನಗಳಿವೆ. ಇದು ಕೇವಲ ಸ್ಥಾಪಿತ ವ್ಯವಸ್ಥೆಯ ಶಕ್ತಿಯನ್ನು ಮಾತ್ರವಲ್ಲದೇ, ಇರುತಹ ಪಕ್ಷಗಳೊಳಗಿನ ಇಂತಹ ಸದಾಶಯದ ವ್ಯಕ್ತಿಗಳ ದೃಷ್ಟಿಕೋನದ ದೌರ್ಬಲ್ಯವನ್ನೂ ತೋರುತ್ತದೆ.


ಕೆ.ಆರ್.ರಮೇಶ್ ಕುಮಾರ್


ಉಡುಪಿ ಸರ್ಕಾರೀ ಆಸ್ಪತ್ರೆಯನ್ನು ಖಾಸಗಿ ಉದ್ಯಮಿಯೊಬ್ಬರಿಗೆ ಹಸ್ತಾಂತರಿಸುವ ರಾಜ್ಯ ಸರ್ಕಾರದ ಆಲೋಚನೆಯು ಇದಕ್ಕೊಂದು ನಿದರ್ಶನ. ಉಡುಪಿ ಜಿಲ್ಲಾಸ್ಪತ್ರೆಯನ್ನು ಅಬುಧಾಬಿ ಮೂಲದ ಉದ್ಯಮಿ ಬಿ.ಆರ್.ಶೆಟ್ಟಿಯವರ ಸಂಸ್ಥೆಗೆ ಹಸ್ತಾಂತರಿಸಲಾಗುವುದೆಂದೂ, ಈ ಆಸ್ಪತ್ರೆಯನ್ನು ಅವರು ಸಂಪೂರ್ಣ ಉಚಿತವಾಗಿಯೇ ನಡೆಸುತ್ತಾರೆಂದೂ ಹೇಳಲಾಗುತ್ತಿದೆ. ಇದಲ್ಲದೇ, ಇನ್ನೂ ಪೂರಾ ಹೊರಬಿದ್ದಿರದ ಮಾಹಿತಿಯ ಪ್ರಕಾರ, ಈ 'ಸರ್ಕಾರೀ ಖಾಸಗಿ ಸಹಭಾಗಿತ್ವದ ಉಚಿತ ಆಸ್ಪತ್ರೆ'ಯ ಪಕ್ಕದಲ್ಲೇ ಆತನ ತಂದೆ-ತಾಯಿ ಹೆಸರಿನಲ್ಲಿ ಇನ್ನೊಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬರುತ್ತದಂತೆ. ಅದು ಕಮರ್ಷಿಯಲ್ ಆಸ್ಪತ್ರೆ ಆಗಿರುತ್ತದೆ! ಇನ್ನೂ ಪೂರ್ಣ ವಿವರಗಳು ಸಿಕ್ಕಿಲ್ಲವಾದರೂ, ಸರ್ಕಾರೀ ಆಸ್ಪತ್ರೆಯ ರೋಗಿಗಳಿಗೆ ಈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲೂ ಉಚಿತ ಚಿಕಿತ್ಸೆಯೋ, ರಿಯಾಯಿತಿ ದರದ ಚಿಕಿತ್ಸೆಯೋ ದೊರೆಯುವ ಏರ್ಪಾಡೂ ನಡೆಯುತ್ತದಂತೆ. ಈ ಉಳಿದ ವಿವರಗಳ ಸತ್ಯಾಸತ್ಯತೆ ಇನ್ನೂ ಸಾರ್ವಜನಿಕವಾಗಬೇಕಿದೆ. ಆದರೆ, ಒಂದಂತೂ ಸತ್ಯ. ಯಾವುದೇ ರೀತಿಯಲ್ಲಿ ನಡೆಯಬಹುದಾದ ಇಂತಹ ಹಸ್ತಾಂತರವು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ದೃಷ್ಟಿಯಿಂದ ಒಂದು ಗಂಭೀರ ಹಿನ್ನಡೆಯಲ್ಲದೇ ಇನ್ನೇನೂ ಅಲ್ಲ ಮತ್ತು ಇದರ ಹೊಣೆಯನ್ನು ಆರೋಗ್ಯ ಸಚಿವ ರಮೇಶ್ ಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊರಲೇಬೇಕಾಗುತ್ತದೆ. ಈ ಹೊಣೆಯನ್ನು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಮೇಲೆ ಮಾತ್ರ ಹಾಕಿಬಿಡುವುದು ಸಮಂಜಸವಲ್ಲ. ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ಇದಕ್ಕೆ ಅವರನ್ನು ಮಾತ್ರ ಹೊಣೆಗಾರರನ್ನಾಗಿ ಮಾಡಿ ಟೀಕಿಸುತ್ತಿರುವುದರಿಂದ ಈ ಮಾತನ್ನು ಹೇಳಬೇಕಾಗಿದೆ.

ಉಳಿದ ತಾತ್ವಿಕ ವಾದಗಳನ್ನು ನಂತರ ಚರ್ಚಿಸೋಣ. ಪೂರಾ ಪೂರಾ 'ಪ್ರಾಕ್ಟಿಕಲ್' ಅಥವಾ 'ಪ್ರಾಗ್ಮಾಟಿಕ್' ಸಂಗತಿಗಳನ್ನು ಮಾತ್ರ ನೋಡೋಣ. ಖಾಸಗಿಯವರಿಗೆ ಆಸ್ಪತ್ರೆಗಳನ್ನು ಹಸ್ತಾಂತರಿಸುವುದು ಹೊಸದೇನಲ್ಲ. ಈ ಹಿಂದೆಯೂ ಅವನ್ನು ಮಾಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಾತ್ರವಲ್ಲದೇ, ಜಿಲ್ಲಾ ಮಟ್ಟದಲ್ಲಿದ್ದ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನೂ ಸೂಪರ್ ಸ್ಪೆಷಲ್ ಖಾಸಗಿಯವರಿಗೆ ವಹಿಸಲಾಗಿತ್ತು. ಆ ಅನುಭವ ಏನು ಹೇಳುತ್ತದೆ? ಇದರ ಕುರಿತು ಸರ್ಕಾರದ್ದೇ ಅಧ್ಯಯನಗಳಿವೆ. ಸೇವೆಯೇ ತಮ್ಮ ಪರಮೋಚ್ಚ ಗುರಿ, ತಾವು ಅವತಾರವೆತ್ತಿರುವುದೇ ಜನರ ಸೇವೆಗೆಂದು ಎಂದು



ಬಿಂಬಿಸಿಕೊಳ್ಳುವ ಮಹಾನುಭಾವರ ನೇತೃತ್ವದ ಎನ್‌ಜಿಓಗಳಿಗೆ ರಾಜ್ಯದ ವಿವಿಧ ವಿಭಾಗಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 'ಆರೋಗ್ಯ ಬಂಧು' ಯೋಜನೆಯಡಿ ವಹಿಸಿಕೊಡಲಾಗಿತ್ತು. ಅಂತಿಮವಾಗಿ ನಡೆದ ಸಮೀಕ್ಷೆಯಲ್ಲಿ, ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸರ್ಕಾರದ ನೇರ ಸುಪರ್ದಿನಲ್ಲಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗಿಂತ ಹೆಚ್ಚಿನ ಅಂಶಗಳಲ್ಲಿ ಯಾವ ರೀತಿಯಲ್ಲೂ ಉತ್ತಮವಾಗೇನೂ ಇರಲಿಲ್ಲ. ಕೆಲವು ಅಂಶಗಳಲ್ಲಿ ಇನ್ನೂ ಕಳಪೆಯಾಗಿದ್ದವು. ಸದರಿ ಎನ್‌ಜಿಓ ಯಾರೇ ಬಂದರೂ ತೋರಿಸಿ ಮೆಚ್ಚುಗೆ ಗಳಿಸಲು ಒಂದು 'ಮಾದರಿ ಆಸ್ಪತ್ರೆ'ಯನ್ನು ಮಾತ್ರ ಚೆನ್ನಾಗಿ ನಡೆಸುತ್ತಾ, ಉಳಿದವನ್ನು ಕಳಪೆಯಾಗಿಯೇ ನಡೆಸುತ್ತಿತ್ತು. ಇವೆಲ್ಲಕ್ಕೂ ಸರ್ಕಾರದ ಹಣ ಮತ್ತು ಮೂಲಸೌಕರ್ಯಗಳು ಬಳಕೆಯಾಗುತ್ತಿತ್ತು. ಇದೇ ಸಂಸ್ಥೆಯು ನಡೆಸುತ್ತಿದ್ದ ಒಂದು ಆರೋಗ್ಯ ಕೇಂದ್ರದ ಸ್ಥಿತಿ ಇಡೀ ರಾಜ್ಯದ ಗಮನ ಸೆಳೆಯುವ ಸಂದರ್ಭ ಬಂದಿದ್ದರೂ, ಅದನ್ನು ವ್ಯವಸ್ಥಿತವಾಗಿ ಮುಚ್ಚಿಹಾಕಲಾಯಿತು. ಅದು ಬೆಂಗಳೂರಿನ ಭಿಕ್ಷುಕರ ಪುನರ್ವಸತಿ ಕೇಂದ್ರದ ಆಸ್ಪತ್ರೆ. ಹೌದು ಕೆಲವು ವರ್ಷಗಳ ಕೆಳಗೆ ಪ್ರತಿನಿತ್ಯ ಸಾಲುಸಾಲು ಹೆಣಗಳು ಬಿದ್ದ ಅದೇ ಕೇಂದ್ರದಲ್ಲಿ ಸರ್ಕಾರೀ ಆಸ್ಪತ್ರೆಯನ್ನು ನಡೆಸುತ್ತಿದ್ದದ್ದು, ಕರುಣೆಯನ್ನೇ ಹೆಸರಿನಲ್ಲೂ ಹೊಂದಿದ್ದ ಇದೇ ಖಾಸಗಿ 'ಸೇವಾಸಂಸ್ಥೆ'!

ಇಂತಹ ಸರ್ಕಾರೀ ಆಸ್ಪತ್ರೆಗಳ ಹೊಣೆಗಾರಿಕೆ ವಾಂತಿ, ಬೇಧಿ, ಜ್ವರ ಬಂದವರಿಗೆ ಮಾತ್ರ ಕೊಡುವುದು ಮಾತ್ರವಲ್ಲ. (ಅದನ್ನೂ ಇವರು ಸರಿಯಾಗಿ ಮಾಡಲಿಲ್ಲ ಎಂಬುದು ಬೇರೆ ಪ್ರಶ್ನೆ. ವಾಂತಿ-ಬೇಧಿಯಿಂದಲೇ ಪುನರ್ವಸತಿ ಕೇಂದ್ರದಲ್ಲಿ ಸಾಲುಸಾಲು ಹೆಣಗಳುರುಳಿದ್ದದ್ದು.) ತನ್ನ ವ್ಯಾಪ್ತಿಯ ಒಟ್ಟಾರೆ ಪ್ರದೇಶದಲ್ಲಿ ನೈರ್ಮಲ್ಯ ಹೇಗಿದೆ, ವಿವಿಧ ಸರ್ಕಾರೀ ಆರೋಗ್ಯ ಯೋಜನೆಗಳು ಹೇಗೆ ಜಾರಿಯಾಗುತ್ತಿವೆ, ಏನಾದರೂ ಸಾಂಕ್ರಾಮಿಕ ರೋಗಗಳು ಹಬ್ಬುವ ಸಾಧ್ಯತೆಯಿದೆಯಾ, ಸಾಮುದಾಯಿಕ ಆರೋಗ್ಯದ ದೃಷ್ಟಿಯಿಂದ ಏನೇನು ಮಾಡಬಹುದು? ಇವೆಲ್ಲದರ ಜವಾಬ್ದಾರಿ ಅವರದ್ದಾಗಿರುತ್ತದೆ. ಈ ಅಂಕಣಕಾರನ ಇತ್ತೀಚಿನ ನೇರ ಅನುಭವದ್ದೇ ಉದಾಹರಣೆ ಹೇಳುವುದಾದರೆ - ಮಂಡ್ಯದ ಒಂದು ಶ್ರಮಿಕನಗರದಲ್ಲಿ (ಸ್ಲಂ) ಈಚೆಗೆ 20ಕ್ಕೂ ಹೆಚ್ಚು ಜನರಿಗೆ ಜ್ವರ ಬಂದಿತು ಹಾಗೂ ಅವರಲ್ಲಿ ಕೆಲವರಿಗೆ ಡೆಂಗ್ಯೂ ಜ್ವರ ಬಂದಿತ್ತು. ಕಳಪೆಯಾಗಿ ಕೆಲಸ ಮಾಡುತ್ತವೆ ಎಂದು ನಾವು ಆರೋಪಿಸುವ ಸರ್ಕಾರೀ ಆರೋಗ್ಯ ವ್ಯವಸ್ಥೆಯ ಇಡೀ ಜಿಲ್ಲಾ ಯಂತ್ರಾಂಗವೇ ಆ ಪ್ರದೇಶಕ್ಕೆ ಭೇಟಿ ಕೊಟ್ಟರು. ಮನೆಮನೆಗಳ ಒಳಹೊಕ್ಕರು. ಸೊಳ್ಳೆ ಉತ್ಪತ್ತಿಯಾಗುವ ಜಾಗಗಳನ್ನು ಪರಿಶೀಲಿಸಿದರು, ಸಾರ್ವಜನಿಕ ಸಭೆ ನಡೆಸಿ ಜಾಗೃತಿ ಮೂಡಿಸಿದರು. ಇವೆಲ್ಲವನ್ನೂ ಮಾಡದಿದ್ದರೆ, ಮಂಡ್ಯದ ಶ್ರಮಿಕನಗರಗಳ ಒಕ್ಕೂಟದ ಸಿದ್ದರಾಜು ಅವರಿಂದ ಹಿಡಿದು ಟಿವಿ ಚಾನೆಲ್‌ಗಳ ಆಂಕರ್‌ಗಳವರೆಗೆ ಎಲ್ಲರೂ ಇವರ ಜನ್ಮ ಜಾಲಾಡುತ್ತಿದ್ದರು. ಭಿಕ್ಷುಕರ ಪುನರ್ವಸತಿ ಕೇಂದ್ರದಲ್ಲಿ ಮಾತ್ರ, ಅಲ್ಲಿನ ಸರಣಿ ಸಾವುಗಳಿಗೆ ಈ ಸಂಸ್ಥೆಯನ್ನು ಯಾರೂ ಹೊಣೆಗಾರರನ್ನಾಗಿಸಲಿಲ್ಲ. ಕನಿಷ್ಠ ಅವರ ಹೆಸರನ್ನೂ ಯಾವ ಮಾಧ್ಯಮವೂ ಹೇಳಲಿಲ್ಲ.



ಇರಲಿ, ಇದು ಕೇವಲ ಒಂದು ಕೇಂದ್ರದ ಕಥೆಯಲ್ಲ. ಬಹುತೇಕ ಖಾಸಗಿ ಸಾರ್ವಜನಿಕ ಸ್ಕೀಮ್‌ಗಳ ಕಥೆ ಇದೇ ಆಗಿದೆ. ಇವೆಲ್ಲವನ್ನು ಕಂಡೇ ಇದೇ ಸರ್ಕಾರವು 'ಆರೋಗ್ಯ ಬಂಧು' ಯೋಜನೆಯನ್ನು ಹಿಂತೆಗೆದುಕೊಂಡಿತು. ಕಳಪೆಯಾಗಿ ಪಿಎಚ್‌ಸಿಗಳನ್ನು ನಡೆಸುತ್ತಿದ್ದ ಖಾಸಗಿ ಸೇವಾಕೇಂದ್ರಗಳು ಹೈಕೋರ್ಟಿಗೆ ಹೋದರು. ಹೈಕೋರ್ಟ್ ಅದಕ್ಕೆ ತಡೆಯನ್ನು ನೀಡಲಿಲ್ಲ. ಈಗ ಇದೇ ಸರ್ಕಾರವು ಮತ್ತೊಂದು ಆಸ್ಪತ್ರೆಯನ್ನು ಖಾಸಗಿಯವರಿಗೆ ವಹಿಸಲು ಹೊರಟಿರುವುದು ಏತಕ್ಕಾಗಿ? ಒಂದು ವೇಳೆ ಪಿಎಚ್‌ಸಿಗಳ ಕಥೆ ಬೇರೆ, ನಾವು ವಹಿಸುತ್ತಿರುವುದು ಜಿಲ್ಲಾ ಮಟ್ಟದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಎಂದು ಅವರು ಹೇಳಬಹುದು. ರಾಯಚೂರಿನ ಒಪೆಕ್ ಆಸ್ಪತ್ರೆಯನ್ನು ದೇಶದ ಅತೀದೊಡ್ಡ ಕಾರ್ಪೊರೇಟ್ ವೈದ್ಯಕೀಯ ಸಂಸ್ಥೆಗಳಲ್ಲೊಂದಾದ ಅಪೋಲೋದವರಿಗೇ ವಹಿಸಿಕೊಡಲಾಗಿತ್ತು. ಅವರು ಅದನ್ನು ಯಾವುದೇ ಜಿಲ್ಲಾಸ್ಪತ್ರೆಗಿಂತ ಕಳಪೆಯಾಗಿ ನಿರ್ವಹಿಸಿದರು ಮಾತ್ರವಲ್ಲ, ಇರುವ ವ್ಯವಸ್ಥೆಯನ್ನೂ ಕೆಡಿಸಿದರು. ಇಡೀ ರಾಯಚೂರು ಜಿಲ್ಲೆಯ ಜನರಷ್ಟೇ ಅಲ್ಲದೇ, ಸರ್ಕಾರೀ ಕಡತಗಳೂ ಇದನ್ನು ಸ್ಪಷ್ಟಪಡಿಸುತ್ತವೆ. ಖಾಸಗಿಯವರ ಸಾಮರ್ಥ್ಯ ಈ ರೀತಿ ಪದೇಪದೇ ಸಾಬೀತಾದ ನಂತರವೂ ಖಾಸಗಿಯವರಿಗೆ ಸರ್ಕಾರೀ ಆಸ್ಪತ್ರೆಯನ್ನು ವಹಿಸುವ ಉಮೇದು ನಮ್ಮ ಆಳುವವರಲ್ಲಿ ಏಕಿದೆ?


ಶಾಲಿನಿ ರಜನೀಶ್

ಗಮನಿಸಿ, ಇವ್ಯಾವುವೂ ತಾತ್ವಿಕ ಸ...
Purely empirical. ಇಲ್ಲೇ ...
empirical ಸಂಗ...
ಹೇಳಬೇಕು. ಬೆಂಗಳೂರಿನ...
ಎಂ.ಎಸ್.ರಾಮಯ್ಯ ಅ...
ಅವರದ್ದೇ ಖಾಸಗಿ ...
ಕಾಲೇಜಿಗೆ ಹೊಂದಿಕೊಂ...
ಆಸ್ಪತ್ರೆಗೆ ದಾರಿ ತೋ...
ನಾಮಫಲಕಗಳನ್ನು 25 ...
ಕೆಳಗೆ, ಬೆಂಗಳೂರಿನ ಸ...
ಕಿ.ಮೀ. ದೂರ...
ದಶದಿಕ್ಕುಗಳಲ್ಲೂ ಹಾಕಲಾ...
ಆಸ್ಪತ್ರೆಗೆ ರೋಗಿಗಳು ಬಂದಷ್ಟೂ ಮೆಡಿಕಲ್ ...
ಲಾಭ ಎಂಬುದು ಒಂದು ಲೆಕ್ಕಾಚಾರವಾಗಿದ್ದರೆ, ...
ಲೆಕ್ಕಾಚಾರ ಆಸ್ಪತ್ರೆಗೆ ನೇರ ಆರ್ಥಿಕ ಲಾಭದ ...
ಇದ್ದಿರಬಹುದು. ಆಸ್ಪತ್ರೆಯ ಚಿಕಿತ್ಸಾ ವೆಚ್ಚವು ...
ನರ್ಸಿಂಗ್ ಹೋಂಗಳಿಗಿಂತ ಕಡಿಮೆ ಇರುತ್ತಿ...
10 ವರ್ಷಗಳಿಗೂ ಹಿಂದೆ, ಈ ಎಂ.ಎಸ್....
ಆಸ್ಪತ್ರೆಯ ಪಕ್ಕ 'ಎಂ.ಎಸ್.ರಾಮಯ್ಯ ಮೆಮೋ...
ಆಸ್ಪತ್ರೆ'ಯೆಂಬ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ...
ಆರಂಭಿಸಿದರು. ಮೊದಲನೆಯದ್ದೂ ಸೂಪರ್ ಸ್ಪೆ...
ಆಗಿತ್ತು! ಆದರೆ, ಎರಡನೆಯ ಆಸ್ಪತ್ರೆ ಆರಂಭವಾ...
ಮೊದಲನೆಯ ಆಸ್ಪತ್ರೆಯ ಮಾಮೂಲಿ ಸ್ಪೆಷಾಲಿ...
ನಾಮಕಾವಸ್ತೆಗೊಳಿಸಲಾಯಿತು! ಅಂತಹ...
ರೋಗಿಗಳನ್ನೂ ಇಲ್ಲಿಂದ ಪಕ್ಕದ ...
ಕಳಿಸಲಾರಂಭಿಸಿದರು. ಈ ಮೆಮೋರಿಯಲ್...
ಬೆಂಗಳೂರಿನ ಅತ್ಯಂತ ದುಬಾರಿ ಆಸ್ಪತ್ರೆಗಳಲ್ಲೊಂ...

ಈ ಬದಲಾವಣೆಯು ಜಾಗತೀಕರಣೋತ್ತ...
'ಧರ್ಮಾರ್ಥ ಸೇವೆ'ಯ ಇನ್ನೊಂದು ನಿದರ್ಶ...
ಈ ದೇಶದಲ್ಲಿ ಹಿಂದಿನಿಂದಲೂ ಧರ್ಮಾರ್ಥ ಆ...
ಇದ್ದವು, ಧರ್ಮಾರ್ಥ ಶಾಲೆಗಳೂ ಇದ್ದವು. ಹಿ...
ಇಂದಿಗೂ ದೊಡ್ಡ ವ್ಯತ್ಯಾಸವಿದೆ ಅಥವಾ ಅಂಥವ...
ಬೆರಳೆಣಿಕೆಗೆ ಇಳಿದಿದೆ. ಈ ಹಿಂದೆ ಇದೇ ಅಂ...
ದೊಡ್ಡಬಳ್ಳಾಪುರದ ಡಾ.ವೆಂಕಟರೆಡ್ಡಿ, ಶ್ರೀರಂಗ...
ಡಾ.ಸಿ.ಬಂಡೀಸಿದ್ದೇಗೌಡರ ಬಗ್ಗೆ ಬರೆಯ...
ಅವರಿಬ್ಬರೂ ಹೆಚ್ಚು ಕಡಿಮೆ ಒಂದೇ ...
ತೀರಿಕೊಂಡಿದ್ದರು. ಇಂದಿಗೂ ಈ ಇಬ್ಬರು ವೈ...
ಮಕ್ಕಳು ಅವೇ ಆಸ್ಪತ್ರೆಗಳನ್ನು ಹಾ...
ಮುಂದುವರೆಸಿಕೊಂಡೂ ಹೋಗುತ್ತಿದ್ದಾರೆ. ...
ಇಂಥವರು ಇನ್ನೂ ಹಲವರು ಈಗಲೂ ಇರಬ...
ಅಂಥ ಬೆರಳೆಣಿಕೆಯ ಜನರಲ್ಲಿ ಡಾ.ಶ್ರೀನಿವಾಸ ಕ...
ಡಾ.ಎಚ್.ಎಸ್.ಅನುಪಮಾ, ಡಾ.ಅನಿಲ್‌ಕು...
ಥರದವರೂ ಇದ್ದಾರೆ. ಆದರೆ, ಈ ಮಹನೀಯ...
ಸಾಮಾಜಿಕ ಬದ್ಧತೆ, ಬದುಕಿನ ದೃಷ್ಟಿಕೋನವೇ...
ಇದೀಗ ದತ್ತು ಪಡೆಯಲು ಬರುತ್ತಿರುವ ಸಂಸ್ಥೆಗಳ ...
ಬೇರೆ. ಒಂದಕ್ಕೊಂದು ಅರ್ಥಾತ್ ಸಂಬಂಧವಿಲ್ಲ. ...
ಕೆಲವು ವೈದ್ಯರ ಉದಾಹರಣೆಗಳನ್ನಿಟ್ಟುಕೊ...
ಎನ್‌ಜಿಓಗಳು ಅಥವಾ ಉದ್ದಿಮೆದಾರರಿಗೆ ಆಸ್ಪತ್ರೆ...
ದತ್ತು ನೀಡುವುದೆಂದರೆ ಅದು ಖಾಸಗೀಕರಣದ...
'ವಿಶ್ವಬ್ಯಾಂಕ್ ಮಾದರಿ'ಯಲ್ಲಿ ಒಂದೆ...
ಹೆಜ್ಜೆಗಳನ್ನಿಡುವುದೆಂದೇ ಅರ್ಥ.

ಖಾಸಗಿ ಉದ್ದಿಮೆಂ...
ಧರ್ಮಾರ್ಥ ಸೇವೆಯ ಮಜ...
ಜನಸಾಮಾನ್ಯರನ್ನಿಡುವುದು, ...
ಗೌಡರ Benevolen...
ಮರ್ಜಿಯಲ್ಲಿ ಹಳ್ಳಿಯ ...
ವರ್ಗಗಳನ್ನಿಡುವುದಕ್ಕಿಂತ ಹೇಗ...
ಸ್ವಲ್ಪ ಭಿನ್ನವೇ. ದೊಡ್ಡ ಗ...
ಆರ್ಥಿಕ ಲಾಭಕ್ಕಿಂತ ಸಾಮ...
ಪ್ರತಿಷ್ಠೆ ಉಳಿಸಿಕೊಳ್ಳುವುದು ...
ಮುಖ್ಯವಾಗಿರುತ್ತದೆ. ಕಾರ್ಪೊ...
ಸಂಸ್ಥೆಗಳಿಗೆ ಆರ್ಥಿಕ ಲಾ...
ಎಲ್ಲಕ್ಕಿಂತ ಮುಖ್ಯವಾಗಿರುತ್ತದೆ. ಆದಕ್ಕಾಗಿ ...
Corporate Social Responsib...
ಎಂಬಿತ್ಯಾದಿ ವಿಶೇಷಣಗಳಡಿ ನಡೆಸುವ ಧರ್ಮಾ...
ಕಾರ್ಯಗಳು ಪರೋಕ್ಷವಾಗಿ ಮಾತ್ರವಲ್ಲದೇ ಪ್ರತ್ಯಕ್ಷವಾ...
ಜನರ ಹಿತಾಸಕ್ತಿಗೆ ಮಾರಕ. ಅದಕ್ಕೆ ಕರ್ನಾಟಕದ ಸ...
ಆರೋಗ್ಯ ಇಲಾಖೆಯ ನೇರ ಅನುಭವಗಳೇ ಸಾಕ್ಷಿಯ...
ಹೀಗಿದ್ದೂ ಉಡುಪಿ ಆಸ್ಪತ್ರೆಯನ್ನು ಹಸ್ತಾಂತರಿಸುವ ...
ಸರ್ಕಾರವು ಮುಂದಾಗುತ್ತದಾದರೆ, ಅದರ ...
ಹೋರಾಡುವುದು ಈ ಹೊತ್ತಿನ ತುರ್ತಿನ ಸಂಗ...
ಲ್ಲೊಂದಾಗಿರುತ್ತದೆ.

ಢೋಂಗಿ ದೇಶಭಕ್ತರ ಬೀಡಾದ ಆರ್‌ಎಸ್‌ಎಸ್

ಟಿಆರ್‌ಪಿ ಸ್ಪರ್ಧೆಗೆ ಬಿದ್ದಿರುವ 24X7 ಟಿವಿ ನೆಲ್‌ಗಳ ಕಿರಾತಕ ಜೀವಿಗಳ ತಲೆಕೆಟ್ಟು ಕೆರ ಹಿಡಿದಿದೆ ನ್ನಿಸುತ್ತದೆ ಅವುಗಳ ಕಾರ್ಯವೈಖರಿಯನ್ನು ನೋಡಿದರೆ. ದ ವಾರ ನಟಿ ಕಂ ರಾಜಕಾರಣಿ ರಮ್ಯಾ ಅವರು ಾಕಿಸ್ತಾನ ನರಕವೇನಲ್ಲ, ಅಲ್ಲೂ ಜನ ನಮ್ಮ ತರಹ ದ್ದಾರೆ" ಎಂದಿದ್ದಕ್ಕೆ ಆಕೆ 'ಪಾಕಿಸ್ತಾನ ಪ್ರಿಯೆ' ಎಂದೂ, ೇಶದ್ರೋಹಿ ಎಂದೂ ಬೇಕುಬೇಕಂತಲೇ ತಿರುಚಿ ಟೆಗಟ್ಟಲೆ ಕೆಂಡ ಕಾರಿದರು. ಆಮೇಲೆ ಆಕೆ ಪ್ರಶಾಂತ್ ಜಾರಿಯ ಕೊಲೆಯ ಹಿನ್ನೆಲೆಯಲ್ಲಿ "ನರಕ ಎಲ್ಲಿಲ್ಲ ೇಳಿ? ಮಂಗಳೂರಿನಲ್ಲಿಲ್ಲವಾ?" ಎಂದಿದ್ದನ್ನು ಂಗಳೂರು ನರಕ' ಎಂದು ರಮ್ಯಾ ಕರೆದಿದ್ದಾಳೆಂದು ಯಿಲೆಬ್ಬಿಸಿದರು. ನಿನ್ನೆ ಮತ್ತೊಮ್ಮೆ ಹಾಗೆಯೇ ಾಡಿದರು. "ಆರೆಸ್ಸೆಸ್ ಮತ್ತು ಬಿಜೆಪಿ ಸ್ವಾತಂತ್ರ ಂಗ್ರಾಮದಲ್ಲಿ ಭಾಗವಹಿಸಲಿಲ್ಲ, ಅವರು ಬ್ರಿಟಿಷರ ಜೊತೆ ಜೋಡಿಸಿದ್ದರು" ಎಂದು ರಮ್ಯಾ ಹೇಳಿದ್ದನ್ನು 'ರಮ್ಯ ದ್ವಿ ಅಜ್ಞಾನಿ, ಇತಿಹಾಸ ಗೊತ್ತಿಲ್ಲದವಳು, ಪುಕ್ಕಟೆ ಪ್ರಚಾರ ಯ' ಎಂದೆಲ್ಲ ಸ್ವತಃ ವ್ಯಾಖ್ಯಾನಿಸಿದರು ಮತ್ತು ಚೆಡ್ಡಿ ಯಕರನ್ನು ಕರೆತಂದು ಅವರಿಂದ ಹಿಗ್ಗಾಮುಗ್ಗಾ ರಮ್ಯಾಳ ಜೋವಧೆ ಮಾಡಿಸಿದರು.

ತಮ್ಮ ಈ ಕುತಂತ್ರ ಕಾರ್ಯಾಚರಣೆಗೆ ಟಿವಿ ಾನೆಲ್‌ನವರು ಸ್ವಾತಂತ್ರ್ಯ ಹೋರಾಟಗಾರ ಚ್.ಎಸ್.ದೊರೆಸ್ವಾಮಿಯವರನ್ನೂ ದುರುಪಯೋಗ ಾಡಿಕೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಆರೆಸ್ಸೆಸ್ ಾತ್ರದ ಬಗ್ಗೆ ಟಿವಿ ಚಾನೆಲ್‌ನವರು ದೊರೆಸ್ವಾಮಿಯವರ ಭಿಪ್ರಾಯವನ್ನು ಕೇಳಿದಾಗ ಅವರು ಉತ್ತರಿಸಿದ್ದು ಹೀಗೆ:

"ಪಾಕಿಸ್ತಾನದ ಜನರ ಬಗ್ಗೆ ರಮ್ಯಾ ಕೊಟ್ಟ ಹೇಳಿಕೆಯಲ್ಲಿ ಾವ ತಪ್ಪೂ ಇಲ್ಲ. ಸ್ವಾತಂತ್ರ ಸಂಗ್ರಾಮದಲ್ಲಿ ಆರೆಸ್ಸೆಸ್ ಾತ್ರ ಕುರಿತ ಆಕೆಯ ಹೇಳಿಕೆಯಲ್ಲೂ ಯಾವ ತಪ್ಪೂ ಲ್ಲ. ಆದರೆ ಆರಂಭದಲ್ಲಿ ಸಾವರ್ಕರ್ ಅವರು ಸ್ವಾತಂತ್ರ ೋರಾಟದಲ್ಲಿದ್ದರು. ಅವರು ಇಂಗ್ಲೆಂಡಿಗೆ ಹತ್ತು ಂದೂಕುಗಳನ್ನು ಕಳುಹಿಸಿ ಬ್ರಿಟಿಷರ ವಿರುದ್ಧ ೋರಾಡಿದ್ದರು. ಆದರೆ ಸಿಕ್ಕಿಬಿದ್ದರು. ಆಗ ಅವರನ್ನು ಂಗ್ಲೆಂಡಿನಿಂದ ಭಾರತಕ್ಕೆ ತರುತ್ತಿದ್ದಾಗ ಅವರು ಮರ್ಸೈಲ್ಸ್‌ನಲ್ಲಿ ಡಗಿನಿಂದ ಹಾರಿ ತಪ್ಪಿಸಿಕೊಂಡರು. ಅವರನ್ನು ಮತ್ತೆ ಡಿದು ಅಂಡಮಾನ್ ಜೈಲಿನಲ್ಲಿ ಇಡಲಾಯಿತು. ಅವರ ಮ್ಮನಿಗೆ ಶಿಕ್ಷೆಯೂ ಆಯಿತು. ಆದರೆ ಜೈಲು ಸೇರಿದ ಂತರ ಸಾವರ್ಕರ್ ಬ್ರಿಟಿಷರಿಗೆ ಶರಣಾಗಿ ಜೈಲಿನಿಂದ ಡುಗಡೆ ಪಡೆದರು. ಆಮೇಲೆ ಅವರು ಸ್ವಾತಂತ್ರ ಂಗ್ರಾಮದಲ್ಲಿ ಭಾಗವಹಿಸಲಿಲ್ಲ, ಆರೆಸ್ಸೆಸ್ ಕೂಡ ಸ್ವಾತಂತ್ರ ಂಗ್ರಾಮದಲ್ಲಿ ಭಾಗವಹಿಸಲಿಲ್ಲ, ಹಿಂದೂ ಮಹಾಸಭಾದ ವರು ಮೊದಮೊದಲು ಭಾಗವಹಿಸಿದ್ದರು."


ಆದರೆ ಟಿವಿಯವರು ತೋರಿಸಿದ್ದು ಎಷ್ಟನ್ನು ಗೊತ್ತಾ?

"ಸಾವರ್ಕರ್ ಅವರು ಸ್ವಾತಂತ್ರ ಹೋರಾಟದಲ್ಲಿದ್ದರು. ವರು ಇಂಗ್ಲೆಂಡಿಗೆ ಹತ್ತು ಬಂದೂಕುಗಳನ್ನು ಕಳುಹಿಸಿ ಟಿಷರ ವಿರುದ್ಧ ಹೋರಾಡಿದ್ದರು. ಆದರೆ ಸಿಕ್ಕಿಬಿದ್ದರು. ಗ ಅವರನ್ನು ಇಂಗ್ಲೆಂಡಿನಿಂದ ಭಾರತಕ್ಕೆ ತರುತ್ತಿದ್ದಾಗ ವರು ಮರ್ಸೈಲ್ಸ್‌ನಲ್ಲಿ ಹಡಗಿನಿಂದ ಹಾರಿ ತಪ್ಪಿಸಿಕೊಂಡರು. ವರನ್ನು ಮತ್ತೆ ಹಿಡಿದು ಅಂಡಮಾನ್ ಜೈಲಿನಲ್ಲಿ ಡಲಾಯಿತು. ಅವರ ತಮ್ಮನಿಗೆ ಶಿಕ್ಷೆಯೂ ಆಯಿತು."

ಇಷ್ಟನ್ನು ಮಾತ್ರ. ಇದು ಟಿವಿ ಚಾನೆಲ್‌ನವರ ಕಂತ್ರಿ ುದ್ಧಿಯನ್ನು ತೋರಿಸುತ್ತದಲ್ಲವೆ. ನಾನು ಯಾವ ಕನ್ನಡ ಾನೆಲ್‌ಗಳನ್ನೂ ನೋಡುವುದಿಲ್ಲ. ಅವು ತೋರಿಸುವ ಬ್ರೇಕಿಂಗ್ ನ್ಯೂಸ್' ಯಾವ ರೀತಿಯಲ್ಲೂ 'ಬ್ರೇಕಿಂಗ್ ನ್ಯೂಸ್' ಆಗಿರುವುದಿಲ್ಲ ಎಂದು ಗೊತ್ತಿದ್ದರೂ, ನಾನು ತ್ರಿಕೆಯ ಸಂಪಾದಕಿ ಆಗಿರುವುದರಿಂದ ಮಂಗಳವಾರ ುತ್ತು ಬುಧವಾರ ಮಾತ್ರ ಯಾವುದಾದರೂ ಒಂದು ಾನೆಲ್ ಅನ್ನು ಮ್ಯೂಟ್ ಮೋಡ್‌ನಲ್ಲಿ ಹಾಕಿರುತ್ತೇನೆ. ಾಗ ಅದರತ್ತ ನೋಡಿ ನಿಜವಾಗಲೂ ಯಾವುದಾದರೂ ುಖ್ಯ ಸುದ್ದಿ 'ಬ್ರೇಕ್' ಆಗುತ್ತಿದೆಯಾ ಎಂದಷ್ಟೇ ಮನಿಸುತ್ತಿರುತ್ತೇನೆ. ಹಾಗೆ ನಿನ್ನೆ ಮಾಡಿದಾಗ ನನ್ನ ಕಣ್ಣಿಗೆ ದ್ದದ್ದು ದೊರೆಸ್ವಾಮಿಯವರ ಹೇಳಿಕೆ. ಇದೇನಿದು, ಿಯರಾದ ದೊರೆಸ್ವಾಮಿಯವರು ಹೀಗೆ ಹೇಳಿದ್ದಾರಲ್ಲ ುದು ಅವರಿಗೆ ಫೋನ್ ಮಾಡಿದೆ. ಆಗ ಅವರು ಲ್ಲ ತಾಯಿ, ನನಗೆ ಆರೆಸ್ಸೆಸ್ ಚರಿತ್ರೆ ಗೊತ್ತಿಲ್ಲವಾ? . ಚನ್ನಬಸಪ್ಪ ಅವರು ಬರೆದಿರುವ ಪುಸ್ತಕವನ್ನು ನಾನು ದಿಲ್ಲವಾ? ನನ್ನ ಪುಸ್ತಕದಲ್ಲೇ ಹೇಗೆ ಬೆಂಗಳೂರಿನಲ್ಲಿ ಪ್ರಮುಖ ಆರೆಸ್ಸೆಸ್ ನಾಯಕನ ಮನೆಯಲ್ಲಿ ಥೂರಾವ್ ಗೋಡ್ಸೆಗೆ - ಆತ ಮಹಾತ್ಮ ಾಂಧಿಯವರನ್ನು ಕೊಲ್ಲುವ ಕೆಲ ದಿನಗಳ ಹಿಂದೆ - ಶ್ರಯ ನೀಡಲಾಗಿತ್ತು ಎಂದು ನಾನು ಬರೆದಿಲ್ಲವಾ? ಆರೆಸ್ಸೆಸ್ ತಂತ್ರ ಸಂಗ್ರಾಮದಲ್ಲಿ ಭಾಗವಹಿಸಿತ್ತು ಎಂದು ಹೇಳುವಷ್ಟು ಜ್ಞಾನಿಯಾ ನಾನು? ಟಿವಿ ಅವರಿಗೆ ನಾನು ಎಲ್ಲವನ್ನೂ ಳಿದೆ. ಆದರೆ ಅವರು ನಾನು ಹೇಳಿದ್ದನ್ನು ಕಟ್ ಮಾಡಿ ತಮಗೆ ಇಷ್ಟಬಂದಂತೆ ತೋರಿಸಿದರೆ ನಾನೇನು ಮಾಡಲಿ?" ಎಂದು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು.

ಬಿಜೆಪಿ ಸಂಸದ ಪ್ರತಾಪ್ ಸಿಂಹ ಪ್ರತಿಕ್ರಿಯಿಸುತ್ತಾ ರಮ್ಯಾಗೆ ಇತಿಹಾಸ ಗೊತ್ತಿಲ್ಲ, ಪೆದ್ದುತನ ಮೆರೆದಿದ್ದಾರೆ ಎಂದೆಲ್ಲಾ ಆರೋಪಿಸಿ "ನಂಬೂದರಿಪಾದ್ ಅವರು ಬರೆದಿರುವ ಪುಸ್ತಕದಲ್ಲಿ ಆರೆಸ್ಸೆಸ್ ಸ್ಥಾಪಕ ಹೆಡ್ಗೇವಾರ್ ಅವರು 1930ರಲ್ಲಿ ಒಂದು ದಶಕದ ಕಾಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು ಎಂದೂ, ಅವರು ಗಾಂಧಿಯವರ ದಂಡಿ ಸತ್ಯಾಗ್ರಹದಲ್ಲೂ ಪಾಲ್ಗೊಂಡಿದ್ದರು ಎಂದೂ ಹೇಳಿದ್ದಾರೆ" ಎಂದಿದ್ದಾನೆ.

ಆದರೆ ಪ್ರತಾಪ ಸಿಂಹನ ಬಾಯಿ ಮತ್ತು ಪೆನ್ನಿನಿಂದ ಹೊರಬೀಳುವ ಪ್ರತಿ ಪದದಂತೆ ಇದೂ ಕೂಡ ಶುದ್ಧ ಸುಳ್ಳು. ಸತ್ಯ ಏನೆಂದರೆ ಹೆಡ್ಗೇವಾರ್ 1920ರಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಸೇರಿಕೊಂಡಿದ್ದರು ನಿಜ. ಆದರೆ 1923ರಲ್ಲಿ ಸಂಭವಿಸಿದ ಹಿಂದೂ-ಮುಸ್ಲಿಮ್ ಗಲಭೆಯಿಂದ ಅವರ ವಿಚಾರಗಳು ಬದಲಾದವು. ಬಾಲಗಂಗಾಧರ ತಿಲಕ್ ಮತ್ತು ವಿ.ಡಿ.ಸಾವರ್ಕರ್ ಅವರ ಪ್ರಭಾವಕ್ಕೆ ಒಳಗಾದ ಹೆಡ್ಗೇವಾರ್



ಕಾಂಗ್ರೆಸ್ ನಿಲುವುಗಳನ್ನು ವಿರೋಧಿಸಿ ಮೂರು ವರ್ಷಗಳಲ್ಲೇ ಆ ಸಂಘಟನೆಯನ್ನು ತೊರೆದು ಹಿಂದೂ ರಾಷ್ಟ್ರಕ್ಕಾಗಿ ಆರೆಸ್ಸೆಸ್ ಅನ್ನು ಸ್ಥಾಪಿಸಲು ಮುಂದಾದರು. ಮಾತ್ರವಲ್ಲ, ಆರೆಸ್ಸೆಸ್ ಎಂದೂ ಬ್ರಿಟಿಷರ ವಿರುದ್ಧ ಹೋರಾಡದಂತೆ, ಬ್ರಿಟಿಷ್ ಸರ್ಕಾರದ ವಿರುದ್ಧ ತುಟಿಪಿಟಿಕ್ ಎನ್ನದಂತೆ ಹೆಡ್ಗೇವಾರ್ ನೋಡಿಕೊಂಡರು. ಅವರ ಆರೆಸ್ಸೆಸ್ 'ಪೂರ್ಣ ಸ್ವರಾಜ್' ಕರೆಯನ್ನು ವಿರೋಧಿಸಿತ್ತು ಕೂಡ. ದಂಡಿ ಮಾರ್ಚ್‌ನಲ್ಲಿ ಹೆಡ್ಗೇವಾರ್ ವೈಯಕ್ತಿಕ ಮಟ್ಟದಲ್ಲಿ ಭಾಗವಹಿಸಿದ್ದರೆ ಹೊರತು, ತಮ್ಮ ಆರೆಸ್ಸೆಸ್ ಸಂಘಟನೆಯ ಬೆಂಬಲವನ್ನು ಅದಕ್ಕೆ ನೀಡಿರಲಿಲ್ಲ. ಹಾಗಾಗಿ ಅವರ ಹೊರತಾಗಿ ಯಾವ ಚೆಡ್ಡಿಯೂ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿರಲಿಲ್ಲ.

ಇನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಬಿಜೆಪಿಯ ಕೊಡುಗೆ ಬಗ್ಗೆ ರಮ್ಯಾ ಹೇಳಿರುವುದನ್ನು ಗೇಲಿ ಮಾಡಿರುವ ಪ್ರತಾಪ್ ಸಿಂಹ "1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಂಗ್ರೆಸ್ ಪಾತ್ರ ಏನಿತ್ತು? ಆಗ ಕಾಂಗ್ರೆಸ್ ಅಸ್ತಿತ್ವದಲ್ಲೇ ಇರಲಿಲ್ಲ" ಎಂದಿದ್ದಾನೆ. ಮಾರಾಯ, ಇವತ್ತು ತಮ್ಮದೇ 'ದೇಶಭಕ್ತರ ಪಕ್ಷ' ಎಂದು ಬೊಬ್ಬೆಹಾಕುತ್ತಿರುವ ಬಿಜೆಪಿಯವರೂ ಅವತ್ತು ಅಸ್ತಿತ್ವದಲ್ಲಿ ಇರದಿದ್ದರಿಂದ ಅವರು ತಾವೇ ದೇಶಭಕ್ತರು, ದೇಶಕ್ಕಾಗಿ ತ್ಯಾಗ ಮಾಡಿರುವವರು ಎಂದು ಹೇಳುತ್ತಿರುವುದೂ ಹಾಸ್ಯಾಸ್ಪದ ಎಂದು ಮಾತ್ರ ರಮ್ಯಾ ಹೇಳಿರುವುದು. ಅಷ್ಟನ್ನಾದರೂ ಅರ್ಥ ಮಾಡಿಕೊಳ್ಳಷ್ಟ ಬುದ್ಧಿವಂತನೆ.

ಬಿಜೆಪಿಯ ಬಾಯಿಬಡುಕಿ ಸಂಸದೆ ಶೋಭಾ ಕರಂದ್ಲಾಜೆ "ರಮ್ಯಾಗೆ ಪಾಕಿಸ್ತಾನದ ಗಾಳಿ ಹೊಡೆದಿದೆ. ಆಕೆ ಇವತ್ತು ಆರೆಸ್ಸೆಸ್ ವಿರುದ್ಧ ಮಾತನಾಡುವಷ್ಟು ಧೈರ್ಯ ತೋರಿದ್ದಾಳೆ. ಆಕೆ ಚರಿತ್ರೆ ಓದಬೇಕು. ನಾಲಿಗೆ ಬಿಗಿಹಿಡಿದು ಮಾತನಾಡಬೇಕು" ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

ಅಷ್ಟೇ ಅಲ್ಲ, "ಆಗ ಕಾಂಗ್ರೆಸ್ ಒಂದು ಪಕ್ಷವಾಗಿರಲಿಲ್ಲ ಅದು ಒಂದು ಸಂಗ್ರಾಮವಾಗಿತ್ತು. ಆದ್ದರಿಂದ ಆಗ ಎಲ್ಲಾ ಜನರೂ ಕಾಂಗ್ರೆಸ್‌ನಲ್ಲಿದ್ದರು. ನಮ್ಮ ಭಾರತೀಯ ಜನತಾ ಪಕ್ಷದ ಮೊದಲಿನ ಸ್ವರೂಪವಾಗಿದ್ದ ಭಾರತೀಯ ಜನ ಸಂಘವನ್ನು ಸ್ಥಾಪಿಸಿದ ಶ್ಯಾಮಪ್ರಸಾದ್ ಮುಖರ್ಜಿ ಅವರೂ ಕಾಂಗ್ರೆಸ್‌ನಲ್ಲಿದ್ದು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು" ಎಂದಿದ್ದಾರೆ. ವಾಸ್ತವ ಏನೆಂದರೆ, ರಮ್ಯಾ ಬದಲು ಸ್ವತಃ ಶೋಭಾ ಮೇಡಂ ಅವರೇ ಮೊದಲು ಚರಿತ್ರೆಯನ್ನು ಓದಬೇಕಿದೆ.


ಯಾಕೆಂದರೆ ಮುಖರ್ಜಿ ಕಾಂಗ್ರೆಸ್ ಪಕ್ಷದಲ್ಲಿ ಇದ್ದದ್ದು ಒಂದೆರಡು ವರ್ಷಗಳ ಕಾಲ ಮಾತ್ರ. 1929ರಲ್ಲಿ ರಾಜಕೀಯವನ್ನು ಪ್ರವೇಶಿಸಿದ ಮುಖರ್ಜಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದರು (ಶೋಭಾ ಅವರೆ, ಆಗಲೇ ಕಾಂಗ್ರೆಸ್ ಪಕ್ಷವಾಗಿದ್ದರಿಂದ ಚುನಾವಣೆಯಲ್ಲಿ ಮುಖರ್ಜಿ ಅವರಿಗೆ ಸ್ಪರ್ಧಿಸಲು ಸಾಧ್ಯವಾಗಿದ್ದು, ಅದು ಸಂಗ್ರಾಮ ಮಾತ್ರ ಆಗಿದ್ದರೆ ಹೇಗೆ ಸ್ಪರ್ಧಿಸುತ್ತಿದ್ದರು?!). ಇರಲಿ, ಮುಖರ್ಜಿ ಕೊಲ್ಕತ್ತಾ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಆಗಿನ ಬ್ರಿಟಿಷ್ ಸರ್ಕಾರದ ಬಾಂಗ್ಲಾ ವಿಧಾನಸಭೆಯನ್ನು ಪ್ರವೇಶಿಸಿದ್ದರು. ಆದರೆ ಮರುವರ್ಷವೇ ಕಾಂಗ್ರೆಸ್ ಚುನಾವಣೆಯನ್ನು ಬಹಿಷ್ಕರಿಸಿದ್ದರಿಂದ ಅವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. 1939ರಲ್ಲಿ ಹಿಂದೂ ಮಹಾಸಭಾ ಸೇರಿಕೊಂಡ ಮುಖರ್ಜಿ 1940-41ರಲ್ಲಿ ಆರ್ಥಿಕ ಮಂತ್ರಿಯೂ ಆಗಿದ್ದರು. 1942ರಲ್ಲಿ ಮಹಾತ್ಮ ಗಾಂಧಿ ಕರೆಗೆ ಓಗೊಟ್ಟು ಕಾಂಗ್ರೆಸ್ 'ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ಪ್ರಾರಂಭಿಸಿದಾಗ ಇದೇ ಶೋಭಾ ಅವರ ಪ್ರೀತಿಯ ನಾಯಕ ಆ ಚಳವಳಿಯನ್ನು ವಿರೋಧಿಸಿದ್ದರು. ಅಷ್ಟೇ ಅಲ್ಲ, ಜುಲೈ 26, 1942 ರಲ್ಲಿ ಮುಖರ್ಜಿ ಅವರು ಬ್ರಿಟಿಷ್ ಸರ್ಕಾರಕ್ಕೆ ಒಂದು ಪತ್ರ ರವಾನಿಸಿದ್ದರು. ಆ ಪತ್ರದಲ್ಲಿ ಅವರು ಹೀಗೆ ಬರೆದಿದ್ದರು:

"ಬಾಂಗ್ಲಾದಲ್ಲಿ ಈ (ಭಾರತ ಬಿಟ್ಟು ತೊಲಗಿ) ಚಳವಳಿಯನ್ನು ಹೇಗೆ ಎದುರಿಸುವುದು ಎಂಬುದೇ ಈಗ ಇರುವ ಪ್ರಶ್ನೆ. ಈ ಪ್ರದೇಶದಲ್ಲಿ ಆಡಳಿತವನ್ನು ಹೇಗೆ ನಡೆಸಬೇಕೆಂದರೆ ಕಾಂಗ್ರೆಸ್‌ನವರು ತಮ್ಮ ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ಇದು ಇಲ್ಲಿ ಬೇರು ಬಿಡದಂತೆ, ಸೋಲುವಂತೆ ನಾವೆಲ್ಲರೂ ನೋಡಿಕೊಳ್ಳಬೇಕು. ಕಾಂಗ್ರೆಸ್ ಪ್ರಾರಂಭಿಸಿರುವ ಸ್ವಾತಂತ್ರ್ಯ ಚಳವಳಿ ಈಗಾಗಲೇ ಜನಪ್ರತಿನಿಧಿಗಳಿಗೆ ಸಿಕ್ಕಿದೆ ಎಂದು ನಮ್ಮಂಥ ಮಂತ್ರಿಗಳು ಜನರಿಗೆ ಮನದಟ್ಟು ಮಾಡಿಕೊಡಬೇಕು. ಈ ಪ್ರದೇಶದಲ್ಲಿ ಸ್ವಾತಂತ್ರ್ಯ ಇರಬೇಕಾದರೆ ಭಾರತೀಯರು ಬ್ರಿಟಿಷರಲ್ಲಿ ವಿಶ್ವಾಸ ಇಡಬೇಕು."

ಇಂತಹ ಮುಖರ್ಜಿಯನ್ನು 1947ರಲ್ಲಿ ನೆಹರು ತಮ್ಮ ಹಂಗಾಮಿ ಸರ್ಕಾರದಲ್ಲಿ ಸಚಿವನಾಗಿ ಸೇರಿಸಿಕೊಂಡರು. ಆದರೆ ಪಾಕಿಸ್ತಾನದ ಪ್ರಧಾನಿ ಜೊತೆ ನೆಹರು ಮಾಡಿಕೊಂಡ ದೆಹಲಿ ಒಪ್ಪಂದವನ್ನು ವಿರೋಧಿಸಿದ ಮುಖರ್ಜಿ 1950ರಲ್ಲಿ ತನ್ನ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟ. ಆಗ ಆರೆಸ್ಸೆಸ್‌ನ ಸರಸಂಘಚಾಲಕನಾಗಿದ್ದ ಗೋಳ್ವಾಲ್ಕರ್ ಜೊತೆ ಚರ್ಚಿಸಿ 1951ರಲ್ಲಿ ಭಾರತೀಯ ಜನಸಂಘವನ್ನು ಹುಟ್ಟುಹಾಕಿದ.

ಈ ಮುಖರ್ಜಿ ಎಂಬ ಮೂರ್ಖ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರನ್ನು ಬೆಂಬಲಿಸಿದ್ದಲ್ಲದೆ, ಸ್ವಾತಂತ್ರ್ಯ ಬಂದನಂತರ ಕಾಶ್ಮೀರಿ ಸಮಸ್ಯೆಯನ್ನು ಹುಟ್ಟುಹಾಕಿದ ಪಾಪಿಗಳಲ್ಲಿ ಪ್ರಮುಖ. ಆರ್ಟಿಕಲ್ 370ಯನ್ನು ವಿರೋಧಿಸಿದ ಮುಖರ್ಜಿ ಬೇಡಬೇಡವೆಂದರೂ, ಅನುಮತಿ ಇಲ್ಲದಿದ್ದರೂ ಕಾಶ್ಮೀರಕ್ಕೆ ಹೋಗಿ ಅಲ್ಲಿ ಕೋಮುಗಲಭೆ ಸೃಷ್ಟಿಸಲು ಯತ್ನಿಸಿದ. ಆಗ ವಿಧಿ ಇಲ್ಲದೆ ಆಗಿನ ಕಾಶ್ಮೀರದ ಪ್ರಧಾನಿ ಶೇಕ್ ಅಬ್ದುಲ್ಲಾ ಆತನನ್ನು ಬಂಧಿಸಿದರು.

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಹಲವಾರು ಕಾಯಿಲೆಗಳಿಂದ ಬಳಲುತ್ತಿದ್ದ ಮುಖರ್ಜಿ ಬಂಧನದಲ್ಲಿದ್ದಾಲೇ ತೀರಿಕೊಂಡ.

ಇದು ಬಿಜೆಪಿಯ ಸಂಸ್ಥಾಪಕ ಮುಖರ್ಜಿಯವರ ಸ್ವಾತಂತ್ರ್ಯ ಸಂಗ್ರಾಮದ ಪರಿ! ಕೋಮು ಕಿಚ್ಚು ಹಚ್ಚುವ ಹುಚ್ಚಾಟ!! ಶೋಭಕ್ಕಾ, ಬಿಜೆಪಿ ಇತಿಹಾಸ ಕುರಿತ ನಿಮ್ಮ ಅಜ್ಞಾನಕ್ಕೆ ಒಂದು ದೊಡ್ಡ ಸಲಾಂ!!

ಇನ್ನು ಆರೆಸ್ಸೆಸ್‌ನ ಎಲ್ಲಾ ದಂಡಪಿಂಡಗಳಿಗೆ ಪಿತಾಮಹನಾದ ಸಾವರ್ಕರ್ ಬಗ್ಗೆ ನಮ್ಮ ಓದುಗರಿಗೆ ಹೆಚ್ಚು ಹೇಳುವ ಅವಶ್ಯಕತೆ ಇಲ್ಲ. ಆದರೆ ಚೆಡ್ಡಿಗಳಿಗೆ ಇಲ್ಲೊಂದು ಮನವಿ. 50 ವರ್ಷ ಸೆರೆವಾಸಕ್ಕೆ ಗುರಿಯಾಗಿದ್ದ ಸಾವರ್ಕರ್ ಬ್ರಿಟಿಷರ ಮುಂದೆ ಅಂಗಲಾಚಿ, ಬ್ರಿಟಿಷ್ ರಾಜನಿಗೆ ನಿಷ್ಠಾವಂತ ಪ್ರಜೆ ಆಗಿರುತ್ತೇನೆಂದು ಗೋಳು ಹೊಯ್ದುಕೊಂಡಿದ್ದರಿಂದ, 14 ವರ್ಷಗಳಲ್ಲಿ ಬಿಡುಗಡೆ ಹೊಂದಿದ. ಆನಂತರ ಆತ ಎಲ್ಲಿಯಾದರೂ ಬ್ರಿಟಿಷರ ವಿರುದ್ಧ ಒಂದೇಒಂದು ಹೇಳಿಕೆಯನ್ನು ಕೊಟ್ಟದ್ದನ್ನು ತೋರಿಸಿ ನೋಡೋಣ. ಹಾಗೆಯೇ 1923ರ ನಂತರ ಆರೆಸ್ಸೆಸ್ ಸ್ಥಾಪಕ ಹೆಡಗೆವಾರ್, 1941ರ ನಂತರ ಭಾರತೀಯ ಜನಸಂಘದ ಸ್ಥಾಪಕ ಮುಖರ್ಜಿಯಾಗಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವುದಿರಲಿ, ಅದರ ಪರವಾಗಿ ಆಡಿದ ಒಂದೇಒಂದು ಮಾತನ್ನಾದರೂ ತೋರಿಸಿ ನೋಡೋಣ!!

ಸಾವರ್ಕರ್, ಹೆಡಗೆವಾರ್, ಗೋಳ್ವಾಲ್ಕರ್, ಮುಖರ್ಜಿ ತರಹದ ಎಲ್ಲಾ ಚೆಡ್ಡಿ ನಾಯಕರು ಬ್ರಿಟಿಷರಿಗೆ ಬಕೆಟ್ ಹಿಡಿದವರೆ... ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸದೆ ಎಲ್ಲೆಲ್ಲಿ ಕೋಮು ಕಿತಾಪತಿ ಮಾಡಬೇಕೆಂದು ಸದಾ ಸಂಚು ಹೂಡಿದವರೆ... ಮಹಾತ್ಮ ಗಾಂಧಿಯ ಕೊಲೆಗೆ ಕಾರಣರಾದವರೇ.... ಇವರೆಲ್ಲರ ಬಗ್ಗೆ ರಮ್ಯಾ ಸತ್ಯ ಹೇಳಿದ್ದಾಳೆ ಅಷ್ಟೇ.

■


ಗಣೇಶ ಹಬ್ಬಕ್ಕೆ ಬಾರದಿರು ಗೆಳೆಯ...

ಗೆಳೆಯ ಇಕ್ಬಾಲ್‌ಗೆ ನೆನಪುಗಳು.

ನೀನು ಗಣೇಶ ಹಬ್ಬಕ್ಕೆ ಅಷ್ಟು ದೂರದ ಪಾಕಿಸ್ತಾನದಿಂದ ಹಲವು ವರ್ಷಗಳ ನಂತರ ನಮ್ಮೂರಿಗೆ ಬರುವ ವಿಚಾರ ತಿಳಿದು ನಮ್ಮ ಕುಟುಂಬ ಸಂಭ್ರಮದಲ್ಲಿತ್ತು. ಆದರೆ ಇಂದಿನ ಜಾತಿ, ಧರ್ಮಗಳ ಅಂಧಕಾರದ ಪರಿಸ್ಥಿತಿಯಲ್ಲಿ ಸದ್ಯಕ್ಕೆ ನೀವುಗಳೆಲ್ಲ ಬರದಿರುವುದೇ ಒಳಿತೆಂದು ನೋವಿನಿಂದ ತಿಳಿಸುತ್ತಿದ್ದೇನೆ.

ಅನ್ಯಥಾ ಭಾವಿಸಬೇಡ. ನಮ್ಮೂರು, ನನ್ನ ಜನ, ಕಾಡು, ಬೆಟ್ಟ, ನದಿ ತನ್ನ ಮನಸ್ಥಿತಿಯಲ್ಲಿ ಬದಲಾವಣೆ ಕಂಡುಕೊಳ್ಳದಿದ್ದರೂ ಜಾತಿ, ಧರ್ಮಗಳ ಕೆಲವು ದುಷ್ಟ ಶಕ್ತಿಗಳು ಮನಸ್ಸುಗಳನ್ನ ಅಂಧಕಾರದಲ್ಲಿ ಹುದುಗಿಸಿಟ್ಟಿದ್ದಾರೆ. ಮನಸ್ಸು-ಮನಸ್ಸುಗಳ ನಡುವೆ ಗುಡಿ ಕಟ್ಟಬೇಕಾದ ಜಾಗದಲ್ಲಿ ಸ್ಮಶಾನ-ಗೋರಿಗಳನ್ನು ನಿರ್ಮಿಸುತ್ತಿದ್ದಾರೆ. ವಿದ್ಯಾವಂತರಾದಂತೆ ಜಾತಿ, ಧರ್ಮಗಳ ವಿಷಚಕ್ರ ಛಿದ್ರವಾಗಬಹುದೆಂದು ಎಣಿಸಿದ್ದೆವು. ಆದರೆ ಅದು ಮತ್ತಷ್ಟೂ ಜಟಿಲವಾಗುತ್ತಿದೆ. ಆ ಬಂಡಿಯಲ್ಲಿ ಸಂಚರಿಸುವ ಅದೆಷ್ಟೋ ಕುಟುಂಬಗಳು ತಮ್ಮ ಮಕ್ಕಳಿಗೆ ಹೇಳಲಾಗದೇ ನೋವನ್ನು ಅನುಭವಿಸುತ್ತಿದ್ದಾರೆ.


ಗೆಳೆಯ ಈ ಪೀಠಿಕೆ ಏಕೆಂದರೆ, ಗಣೇಶೋತ್ಸವದ ಸಂದರ್ಭದಲ್ಲಿ ಬಂದ ನಿನ್ನನ್ನು ವೇದಿಕೆಗೂ ಕರೆಯಬಹುದು. ಆಗ ನಿರ್ಮಲ ಮನಸ್ಸಿನ ನೀನು ನಮ್ಮೂರನ್ನು, ನನ್ನ ಕುಟುಂಬವನ್ನು ಹೊಗಳಿದೆ ಎಂದಾದರೆ? ಅಬ್ಬಾ ಭಯಾನಕ! ಪುನಃ ಪಾಕಿಸ್ತಾನಕ್ಕೆ ನಿನ್ನ ಕುಟುಂಬ ಹೋಗಲು ಆಗುತ್ತದೋ ಇಲ್ಲವೋ? ಒಂದು ವೇಳೆ ಹೋದೆಯಂತಾದರೆ? ಢೋಂಗಿ ಜಾತಿವಾದಿಗಳು ನಿನ್ನ ಕಾರಿಗೆ ಮೊಟ್ಟೆ, ಕಲ್ಲುಗಳಿಂದ ಹೊಡೆದು




ಪ್ರತಿಭಟಿಸಿದರೆ? ನಿನ್ನ ವೃದ್ಧ ತಂದೆ-ತಾಯಿ, ನಿನ್ನ ಮುದ್ದಾದ ಮಕ್ಕಳ ಪರಿಸ್ಥಿತಿ, ನೆನೆದುಕೊಂಡು ನಿದ್ದೆಯಲ್ಲಿ ಕಿರುಚಿದೆ. ಅಮ್ಮ ಪತ್ರ ಬರೆಯಲು ತಿಳಿಸಿದರು. ಗೆಳೆಯನ ಪ್ರೀತಿ, ಸ್ನೇಹ ಶಾಶ್ವತ. ಗಣೇಶ ಹಬ್ಬ ಪ್ರತಿವರ್ಷ ಬಂದೇ ಬರುತ್ತದೆ. ಅದಕ್ಕೆ ಸಾವಿಲ್ಲ, ಆದರೆ ಒಂದಲ್ಲ ಒಂದು ದಿನ ಈ ಜಾತಿ-ಧರ್ಮದ ಅಂಧಾಭಿಮಾನಿಗಳು ಸಾಯಲೇಬೇಕು. ಆಗ ಜನಸಮೂಹದಲ್ಲಿ ಜಾಗೃತಿ ಮೂಡಿ ಶಾಂತಿ ನೆಲೆಸಲೇಬೇಕು. ದ್ವೇಷ ರಾಜಕಾರಣ ಅಳಿಯಲೇಬೇಕು. ಯುವ ಸಮೂಹ ಎಚ್ಚೆತ್ತು ಕೊಳ್ಳಲೇಬೇಕು. ಆ ದಿನಗಳಿಗಾಗಿ, ಆ ಬದಲಾವಣೆಗಾಗಿ ಕಾಯೋಣ, ಆಗ ಬಾ ಗೆಳೆಯ.

ಇಂತಿ ನಿರೀಕ್ಷೆಯಲ್ಲಿ
ಶ್ವೇತಕುಮಾರ್

ಸಿದ್ದು ಬಗಲ್ ಮೆ ಚೋರ್ ಜಾಧವ್!





ಮುಖ್ಯಮಂತ್ರಿ ಸಿದ್ದು ಪಾಲಿಗೆ ದುಷ್ಮನ್ ಕಿದರ್ ಹೈ ಎಂದರೆ ಬಗಲಲ್ಲೇ ವಕ್ಕರಿಸಿದ್ದಾನೆ ಅರವಿಂದ ಜಾಧವ್!

ರಾಜ್ಯವೊಂದರ ಮುಖ್ಯ ಕಾರ್ಯದರ್ಶಿ, ಸರ್ಕಾರಿ ಯಂತ್ರಾಂಗದ ನಾವಿಕ, ಕಾನೂನು ಕಟ್ಟಳೆಗಳ ಪಾಲಕ ಮತ್ತು ನಾಡಿನ ಸಮಸ್ತ ಜನಸಾಮಾನ್ಯರ ಸಂಪತ್ತಿನ ರಕ್ಷಕನೂ ಆದ ಮುಖ್ಯ ಕಾರ್ಯದರ್ಶಿಯೊಬ್ಬ ತಾನೇ ಮೊದಲು ಕನ್ನ ಹಾಕುತ್ತೇನೆಂದು ಹೊರಟಂತಿದೆ ಜಾಧವ್ ಸಾಹೇಬರ ಭೂಗಳ್ಳತನ. ನನ್ನ ತಾಯಿಯ ಹೆಸರಲ್ಲಿ ಪ್ರತಿಷ್ಠಿತ ಎಲೆಕ್ಟ್ರಾನಿಕ್ ಸಿಟಿ ಪಕ್ಕದ ಕೆರೆ ಗೋಮಾಳಕ್ಕೇ ಕನ್ನ ಹಾಕಿದ ಮುಖ್ಯ ಕಾರ್ಯದರ್ಶಿಯ ಆತ್ಮವಂಚನೆಗಿಲ್ಲಿ ಸಾಕಷ್ಟು ದಾಖಲೆಗಳಿವೆ, ಸಾದ್ಯಂತ ಪುರಾವೆಗಳಿವೆ.


ತಾನು ಯಾವ ಅಕ್ರಮವನ್ನೂ ಎಸಗಿಲ್ಲ, ನನ್ನ ತಾಯಿ ದೇವನಹಳ್ಳಿಯಲ್ಲಿ ಹೊಂದಿದ್ದ ಜಮೀನನ್ನು ಮಾರಿದ ದುಡ್ಡಲ್ಲೇ ಆನೇಕಲ್ ತಾಲ್ಲೂಕು ರಾಮನಾಯ್ಕನಹಳ್ಳಿಯ ಜಮೀನು ಖರೀದಿಸಿದ್ದಾರೆ, ಖರೀದಿ ಕ್ರಮಬದ್ಧವಾಗೇ ನಡೆದಿದೆ, ತಾಯಿ ಈ ಜಮೀನು ಖರೀದಿಸಿದಾಗ ತಾನು ರಾಜ್ಯದಲ್ಲೇ ಇರಲಿಲ್ಲ, ಇದು ಈಗಷ್ಟೇ ತನ್ನ ಗಮನಕ್ಕೆ ಬಂದಿದೆ.... 1977-78 ರಲ್ಲಿ ಸರ್ಕಾರದಿಂದ ಬೇರೆಯವರಿಗೆ ಮಂಜೂರಾಗಿದ್ದ ಭೂಮಿಯನ್ನು ತಮ್ಮ ತಾಯಿ ಖರೀದಿಸಿದಾಗ ಮಂಜೂರಾತಿ ಮತ್ತು ಕ್ರಯಪತ್ರದ ಬಗ್ಗೆ ಯಾವುದೇ ಆಕ್ಷೇಪಣೆಯೂ ಸಲ್ಲಿಕೆಯಾಗಿಲ್ಲ ಅಂದಮೇಲೆ ಇದು ಹೇಗೆ ಅಕ್ರಮವಾಗುತ್ತದೆ? ಇತ್ಯಾದಿಯಾಗಿ ಅರವಿಂದ ಜಾಧವ್ ದಿನಕ್ಕೊಂದು ಹೇಳಿಕೆ ಹೊರಡಿಸುತ್ತಿರುವುದು ಕೂಡ ವಾಸ್ತವದೆದುರು ತಿಪ್ಪೆ ಸಾರಿಸುವಂತಿದೆ!


ಒಂದೆಡೆ ಸರ್ಕಾರ ಭೂಕಬಳಿಕೆ ವಿರುದ್ಧ ಐತಿಹಾಸಿಕವೆನಿಸುವಂತೆ ಯುದ್ಧವನ್ನೇ ಘೋಷಿಸಿದೆ.


ಬೆಂಗಳೂರು ನಗರ ಜಿಲ್ಲಾಧಿಕಾರಿ ವಿ. ಶಂಕರ್ ನೆಲಗಳ್ಳರ ಪಾಲಿಗೆ ಸಿಂಹಸ್ವಪ್ನದಂತೆ ದಿನಕ್ಕೊಂದು ಒತ್ತುವರಿಗೆ ಬುಲ್ಡೋಜರ್ ನುಗ್ಗಿಸುತ್ತಿದ್ದಾರೆ. ಸರ್ಕಾರಿ ಭೂಕಬಳಿಕೆ ವಿರುದ್ಧ ಕ್ರಮ ಜರುಗಿಸುವಂತೆ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಆದಿಯಾಗಿ ಹಿರೇಮಠ್, ಎ.ಟಿ. ರಾಮಸ್ವಾಮಿ, ಮಾಜಿ ಸ್ಪೀಕರ್ ಕೃಷ್ಣ ಮುಂತಾದವರೆಲ್ಲ ಫ್ರೀಡಂ ಪಾರ್ಕಿನಲ್ಲಿ ತಿಂಗಳು ಪೂರ್ತಿ ಧರಣಿಯನ್ನೇ ನಡೆಸಿದ್ದಾಗಿದೆ. ಇಂಥ ಮಹನೀಯರೆಲ್ಲರ ಕಾಳಜಿಗೆ ಓಗೊಟ್ಟೇ ಮುಖ್ಯಮಂತ್ರಿಗಳು ಹಿಂದೆ ಯಾವತ್ತೂ ಇಲ್ಲದ ಒತ್ತುವರಿ ತೆರವು ಕಾರ್ಯಾಚರಣೆಗಿಳಿದದ್ದು. ಈತನಕ ಡಿಸಿ ಶಂಕರ್ ಪಡೆ ಮರುಜಪ್ತಿ ಮಾಡಿಕೊಂಡ ಸರ್ಕಾರಿ ಭೂಮಿಯ ಒಟ್ಟು ಮೊತ್ತವೇ 8 ಸಾವಿರ ಎಕರೆಗಳಿಗೂ ಅಧಿಕ. ಹೆಚ್ಚೂಕಮ್ಮಿ ಇದೇ 52 ಸಾವಿರ ಕೋಟಿ ರೂಪಾಯಿಗಳ ಮೊತ್ತದ ಸೊತ್ತಾಗುತ್ತದೆ. ಇಂಥಾ ಐತಿಹಾಸಿಕ ಪರಿಸ್ಥಿತಿಯಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿಯೇ ನೂರಿಪ್ಪತ್ತು ಕೋಟಿ ರೂಪಾಯಿಗಳ ಮೊತ್ತದ ಸರ್ಕಾರಿ ಸೊತ್ತಿಗೆ ಬಾಯಿಹಾಕಿ ಸಿಕ್ಕಿಬೀಳುತ್ತಾನೆಂದರೆ ಸರ್ಕಾರವೊಂದಕ್ಕೆ ಇದಕ್ಕಿಂತ ಅವಮಾನ ಬೇಕೆ?

ನೂರು ಕೋಟಿ ಸೊತ್ತು

ಕೌಶಿಕ್ ಮುಖರ್ಜಿ ತರುವಾಯ ಅತ್ಯಂತ ವಿವಾದಾಸ್ಪದ ಪರಿಸ್ಥಿತಿಯಲ್ಲೇ ಮುಖ್ಯ ಕಾರ್ಯದರ್ಶಿಯಾದವರು ಅರವಿಂದ್ ಜಾಧವ್. ತನ್ನದು ಹುಬ್ಬಳ್ಳಿ ಮೂಲ ತಾನು ಕರ್ನಾಟಕದವನು ಎಂದು ಹೇಳಿಕೊಳ್ಳುತ್ತಾರಾದರೂ ಅವರ ಸರ್ವೀಸ್ ಪುಸ್ತಕದ ದಾಖಲೆಗಳೆಲ್ಲ ಮಹಾರಾಷ್ಟ್ರದ ಮೂಲವೆಂಬ ವಿಕಟ ಅಣಕಿಸುತ್ತದೆ. ಇಲ್ಲಸಲ್ಲದ ಪ್ರಭಾವ, ಮುಲಾಜನ್ನೆಲ್ಲ ಪ್ರಯೋಗಿಸಿಯೇ ಸಿದ್ದು ಪಾಲಿಗೆ ಬಿಸಿ ತುಪ್ಪದಂತೆ ಮುಖ್ಯ ಕಾರ್ಯದರ್ಶಿ ಗಾದಿಗೆ ವಕ್ಕರಿಸಿದ ಜಾಧವ್ ತನ್ನ ಬೇಜವಾಬ್ದಾರಿ ದರ್ಪ, ಹೊಣೆಗೇಡಿತನಗಳಿಂದಾಗಿಯೇ ಪದೇಪದೇ ಗೇಲಿಗೊಳಗಾದವರು, ಕಳೆದ ಜೂನ್ 30ಕ್ಕೇ ನಿವೃತ್ತಿಯಾಗಬೇಕಿತ್ತು, ಮಹಾರಾಷ್ಟ್ರದ ಪ್ರಭಾವಿ ಕಾಂಗ್ರೆಸ್ ನಾಯಕರನ್ನು ಮುಂದಿಟ್ಟುಕೊಂಡೇ ಸೆಪ್ಟೆಂಬರ್ ಅಂತ್ಯದತನಕ ತನ್ನ ಚೀಫ್ ಸೆಕ್ರೆಟರಿಗಿರಿಯ ಅವಧಿ ವಿಸ್ತರಿಸಿಕೊಂಡರು. ಜಾಧವ್ ಮುಖ್ಯ ಕಾರ್ಯದರ್ಶಿಗಿರಿಯ ಅಧಿಕಾರದಾಹ ಇಷ್ಟಕ್ಕೇ ಮುಗಿಯದೇ ಸೆಪ್ಟೆಂಬರ್ ಅಂತ್ಯದ ನಂತರವೂ ಮತ್ತೆ ಮೂರು ತಿಂಗಳು







ವಿಸ್ತರಿಸುವಂತೆ ಕಾಂಗ್ರೆಸ್ ಹೈಕಮಾಂಡ್‌ನ ಮಹಾರಾಷ್ಟ್ರ ಮೂಲದ ಲಾಬಿಯೊಂದು ಸಿದ್ದು ಮೇಲೆ ಒತ್ತಡ ಹೇರುತ್ತಲೇ ಇತ್ತು.

ಜಾಧವ್ ಸಾಹೇಬರ ಈ ನಿವೃತ್ತಿ ವಿಸ್ತರಣಾ ಕಾರ್ಯಾಚರಣೆಯ ಹಿಂದಿದ್ದದ್ದು ಈಗ ಬೀದಿಗೆ ಬಂದಿರುವ ಸರ್ಜಾಪುರದ ಭೂಹಗರಣವೇ ಎಂಬ ಮರ್ಮ ಮಾತ್ರ ಹೊರಜಗತ್ತಿಗೆ ಗೊತ್ತಾಗಲೇ ಇಲ್ಲ. ತನ್ನ ತಾಯಿ ತಾರಾಬಾಯಿ ಮಾರುತಿರಾವ್ ಹೆಸರಲ್ಲಿ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ ರಾಮನಾಯ್ಕನಹಳ್ಳಿಯಲ್ಲಿ ಖರೀದಿಸಿದ್ದ ಅಂದರೆ ಆಕ್ರಮಿಸಿದ್ದ 16 ಎಕರೆ ಕೆರೆ ಗೋಮಾಳಕ್ಕೆ ದಾಖಲೆ ಸರಿಮಾಡಿಕೊಳ್ಳುವುದೇ ಜಾಧವ್ ಸೇವಾವಧಿಯ ವಿಸ್ತರಣಾ ಹುನ್ನಾರದ ಅಸಲೀ ಕಾರಣವಾಗಿತ್ತು.

ಸರ್ಕಾರಿ ಗೋಮಾಳ!

ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ ರಾಮನಾಯ್ಕನ ಹಳ್ಳಿಯೆಂದರೆ ಯಾವುದೋ ಉತ್ತರ ಕರ್ನಾಟಕ ಭಾಗದ ಲೆಕ್ಕಕ್ಕಿಲ್ಲದ ಊರೇನಲ್ಲ, ಪ್ರತಿಷ್ಠಿತ ಎಲೆಕ್ಟ್ರಾನಿಕ್ ಸಿಟಿಗೆ ಕೂಗಳತೆಯ ಹಳ್ಳಿಯದು. ಈ ಗ್ರಾಮದ ಸರ್ವೆ ನಂಬರ್ 29 ರಲ್ಲಿದ್ದದ್ದು ಬರೋಬ್ಬರಿ 124.36 ಎಕರೆ ಸರ್ಕಾರಿ ಗೋಮಾಳ. ಇದರ ಮೇಲೆ ಅನಾದಿಕಾಲದಿಂದಲೂ ಆನೇಕಲ್-ಸರ್ಜಾಪುರ ಭಾಗದ ಕುಖ್ಯಾತ ಭೂಕಂಟಕರೆಲ್ಲರ ಕಣ್ಣು ಬಿದ್ದೇ ಇತ್ತು. ಈ ಪೈಕಿ ನಲವತ್ತೆಂಟು ಎಕರೆಗೆ 1990 ರ ಹೊತ್ತಿಗೆ ಭೂಗಳ್ಳರ ಹಿಂಡೊಂದು ನಕಲಿ ದಾಖಲೆ ಸೃಷ್ಟಿಸಲಾರಂಭಿಸಿತ್ತು. ಈ ನಲವತ್ತೆಂಟು ಎಕರೆಯನ್ನು ರಾಮನಾಯ್ಕನ ಹಳ್ಳಿಯ ಕೆಲ ದಲಿತರು, ಮುಖಂಡರ ಹೆಸರಿಗೆ ಮಂಜೂರಾದಂತೆ ಒ... ಮಂದಿಗೆ ಸರ್ಕಾರವೇ ದರಖಾಸ್ತು ಮಂ... ನಿಯಮದಡಿ ಹಂಚಿಕೆ ಮಾಡಿಕೊಟ್ಟಂತೆ ... ಸೃಷ್ಟಿಸಲಾಯಿತು. ಹೀಗೆ 58 ಮಂದಿಗೆ ಹಂಚ... ಜಮೀನಿಗೆ ಸರ್ವೆ ನಂಬರ್ 29/ಎ ರಿಂದ 2... ಎಂದು ಅನೇಕರಿಗೆ ಪೋಡಿ ಮಾಡಿ ಕೊಡಲಾ...

ಇದರ ಹೊರತಾಗಿಯೂ 76 ಎಕರೆ ಭೂಮಿ... ಸರ್ಕಾರಿ ಗೋಮಾಳವೆಂದು ದಾಖಲಿಸಿ ... ಸಂರಕ್ಷಿಸಿಕೊಂಡೇ ಬರಲಾಗಿತ್ತು, ಇಸವಿ 2... ಹೊತ್ತಿಗೆ ಅಳಿದುಳಿದ ಈ ಎಪ್ಪತ್ತಾರು... ಗೋಮಾಳಕ್ಕೂ ರಿಯಲ್ ಎಸ್ಟೇಟ್ ಕಣ... ಆಗ ಆನೇಕಲ್‌ಗೆ ಬಿಜೆಪಿ ಶಾಸಕ... ನಾರಾಯಣಸ್ವಾಮಿಯಿಂದ ಹಿಡಿದು ಆ ... ಎಲ್ಲಾ ಪಕ್ಷಗಳ ಪುಢಾರಿಗಳು ಕೆಲ ದಲಿತ ನಾ... ಸೇರಿದಂತೆ ಅವರವರ ಶಕ್ತ್ಯಾನುಸಾರ ಗೋ... ಬೇಲಿ ಹಾಕುವ ತರಹೇವಾರಿ ಭೂಕಾಳಗ... ಎತ್ತಿದವು. ಬೇಲಿ ಹಾಕಬಹುದು, ... ಮಾಡಬಹುದು ಅಥವಾ ಏನೇ ಕಳ್ಳಾಟವಾ... ಹೊಡೆದ ಕೊಳ್ಳೆಯನ್ನು ಕೊಳ್ಳುವವರಿದ್ದರು...

ಏಕೆಂದರೆ ಆ ಹೊತ್ತಿಗಾಗಲೇ ರೆವಿನ್ಯೂ ದಾಖ... ಕಂಪ್ಯೂಟರೀಕರಣ ಪ್ರಕ್ರಿಯೆ ಚಾಲ್ತಿಗೆ ಬಂದಿತ್ತು... ಕಳ್ಳ ದಾಖಲೆ ಹುಟ್ಟಿಸಿದರೂ ಇದನ್ನು ಕಂಪ್ಯೂ... 'ಭೂಮಿ' ತಂತ್ರಾಂಶ ಸ್ವೀಕರಿಸಬೇಕಲ್ಲ? ಒಮ್ಮೆ ... ಸರ್ವೆ ನಂಬರಿನ ಇಂತಿಷ್ಟು ಎಕರೆ ಭೂಮಿ ಸ... ಸೇರಿದ್ದೆಂದು ಕಂದಾಯ ವ್ಯವಸ್ಥೆಯ ಕಂಪ್ಯೂಟರ್ ವ್ಯ... ದಾಖಲಾಯಿತೆಂದರೆ ಯಾವ ಕಾರಣಕ್ಕೂ ಆ ... ಯಾವ ಭೂಮಿಯೂ ಖಾಸಗಿ ವ್ಯಕ್ತಿಯ ... ದಾಖಲಾಗುವುದಿಲ್ಲ. ರಾಮನಾಯಕನ ಹಳ್ಳಿಯ... ನಂಬರ್ 29 ರಲ್ಲಿದ್ದ 76 ಎಕರೆ 36 ಗುಂ... ಐವತ್ತೊಂದು ಎಕರೆ 20 ಗುಂಟೆ ಭೂಮಿ... ನಲವತ್ತಾರು ಮಂದಿಗೆ ಮಂಜೂರು ಮಾಡಿದ... 1996 ರಲ್ಲಿ ದಾಖಲೆ ಸೃಷ್ಟಿಸಲಾಯ್ತು. 19... ಸೆಪ್ಟೆಂಬರ್ 19 ರಂದು ಬೆಂಗಳೂರು ಜಿಲ್ಲಾಧಿಕಾ... ಆನೇಕಲ್ ತಹಸೀಲ್ದಾರನ ಮೂಲಕ ಮಂಜೂರಾತಿ ... ಸಹಿ ಹಾಕಿದಂತೆ ಸೃಷ್ಟಿಯಾದ ದಾಖಲೆಗಳನ್ನು ವ್ಯವ... ಕಂದಾಯ ಇಲಾಖೆಯ ಅಧಿಕೃತ' ವ್ಯವಸ್ಥೆಗೆ ... ಮಾಡಲಾಗಿತ್ತು.

ಕಂದಾಯ ವ್ಯವಸ್ಥೆಯೇ ಶಾಮೀ...

ಹೀಗೆ ಸೃಷ್ಟಿಯಾದ ಗೋಮಾಳದ ಭೂಮಿಯ... ಮುನಿಯಲ್ಲಪ್ಪ ಎಂಬಾತನ ಹೆಸರಲ್ಲಿದ್ದ 8.2 ಎಕರ... ಜಾಧವ್ ತನ್ನ ತಾಯಿ ತಾರಾಬಾಯಿಯ ಹೆಸರಲ್ಲಿ... 2000 ರಲ್ಲಿ ಖರೀದಿಸಿದ್ದಾರೆ. ಮಿಕ್ಕಂತೆ ಮ... ಎಕರೆಯಷ್ಟನ್ನು ಇದಾದ ಎರಡು ವರ್ಷಗಳ ನಂತರ ಇಸವಿ 2002 ರಲ್ಲಿ ಖರೀದಿಸಿದ್ದಾರೆ. ಜಾಧವ್ ಯ...

ದೇವನಹಳ್ಳಿಯಲ್ಲೂ ರಿಯಲ್ ಎಸ್ಟೇಟ್ ದಂಧೆ


ರಾಮನಾಯ್ಕನಹಳ್ಳಿಯಲ್ಲಿ ತಾಯಿ ಹೆಸರಿಗೆ ಜಾಧವ್ ಖರೀದಿಸಿದ್ದ 16 ಎಕರೆ ಭೂಮಿಗೆ ಹಾಕಿದ ದುಡ್ಡು ದೇವನಹಳ್ಳಿಯಲ್ಲಿ ಮಾರಿದ ಜಮೀನಿನಿಂದ ಬಂದದ್ದೆಂಬುದು ಜಾಧವ್ ಸಾಹೇಬರ ಆಣೆ ಪ್ರಮಾಣ!

ಆದರೆ ದೇವನಹಳ್ಳಿಯ ಜಮೀನು ಮಾರಿದ್ದು ಯಾವ ರೇಟಿಗೆ, ಇಲ್ಲಿ ಕೊಂಡದ್ದು ಯಾವ ದರಕ್ಕೆ, ಈ ಪಾಟಿ ದುಡ್ಡು ತನ್ನ ತಾಯಿಗೆ ಬಂದಿದ್ದಾದರೂ ಯಾವ ಮೂಲದಿಂದ ಎಂಬ ಬಗ್ಗೆ ಜಾಧವ್‌ರಿಂದ ಯಾವುದೇ ಮಾಹಿತಿ ಲಭ್ಯವಿಲ್ಲ. ದೇವನಹಳ್ಳಿ ಅಂತರರಾಷ್ಟ್ರೀಯ ಏರ್‌ಪೋರ್ಟ್ ಸಮೀಪದ ಹೆಗ್ಗನಹಳ್ಳಿಯಲ್ಲಿ ತಾಯಿ ಹೆಸರಲ್ಲಿ ಜಾಧವ್ ಖರೀದಿಸಿದ್ದು ಒಟ್ಟು 16 ಎಕರೆ. 1996 ರಲ್ಲಿ 16 ಎಕರೆಯೆಂದರೆ ಅದು ಕಮ್ಮಿಯೆಂದರೂ ಎರಡರಿಂದ ಮೂರು ಕೋಟಿಯ ಸೊತ್ತು, ಕೃಷಿ ಜಮೀನನ್ನು ಖರೀದಿಸಬೇಕೆಂದರೆ ಜಾಧವ್ ತಾಯಿಯೂ ಕೃಷಿಕರಾಗಿರಬೇಕು ಮತ್ತು ವಾರ್ಷಿಕ 2 ಲಕ್ಷ ಮೀರದಂತೆ ಕೃಷಿ ಮೂಲದ ಆದಾಯವಿರಬೇಕು. ಜಾಧವ್ ತಾಯಿಯಾಗಲಿ ತಂದೆಯಾಗಲಿ ಅದ್ಯಾವತ್ತು ಕೃಷಿಕರಾಗಿದ್ದರು ಮತ್ತು ಅದೆಲ್ಲಿಂದ ದುಡ್ಡು ತಂದರು?

ಇದರ ಹೊರತಾಗಿಯೂ ತಾಯಿ ಹೆಸರಲ್ಲಿ ಖರೀದಿಸಿದ್ದ ಹೆಗ್ಗನಹಳ್ಳಿ ಭೂಮಿಯನ್ನು ಭೂಪರಿವರ್ತನೆ ಮಾಡಿಸಿ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಮಂಡಳಿಯಿಂದ 1998 ರಲ್ಲಿ ಖಾಸಗಿ ಬಡಾವಣೆಗೆ ಅನುಮತಿಯನ್ನೂ ಗಿಟ್ಟಿಸಿ ಸೈಟುಗಳಾಗಿ ವಿಂಗಡಿಸಿ ಮಾರಿದ್ದಾರೆ. ಈ ಪೈಕಿ ಎರಡೂವರೆ ಎಕರೆಗೂ ಮೀರಿದ ಭೂಮಿ ಇವತ್ತಿಗೂ ತಾಯಿ ಹೆಸರಲ್ಲೇ ಇದೆ. ಅಂದರೆ ಜಾಧವ್ ಆ ಕಾಲದಿಂದಲೂ ರಿಯಲ್ ಎಸ್ಟೇಟ್ ಮತ್ತು ಭೂಕಬಳಿಕೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದರೆಂಬುದಕ್ಕೆ ಇದಕ್ಕಿಂತ ಬೇಕೆ?







ುಲ್ ಎಸ್ಟೇಟ್ ಖದೀಮನಾಗಿದ್ದರೆ ಆ ಮಾತು ಬೇರೆ. ಒಬ್ಬ ಜವಾಬ್ದಾರಿಯುತ ಎಎಸ್ ಅಧಿಕಾರಿ. ಕರ್ನಾಟಕ ಭೂಸುಧಾರಣಾ ಕಾಯ್ದೆಯ ಪ್ರತಿಯೊಂದು ಕರಣಗಳನ್ನೂ ಅರೆದು ಕುಡಿದವರು. ಕೃಷಿ ಭೂಮಿಯನ್ನು ಕೃಷಿಯೇತರರು ರೀದಿಸುವಂತಿಲ್ಲ ಎಂಬ ಕಾಯ್ದೆಗೇ ಅಪಚಾರವೆಸಗಿ ಕೃಷಿ ಮೂಲದ ನಿಗದಿತ ದಾಯಕ್ಕೂ ಅಧಿಕ ಆದಾಯವಿ ದ್ದುದ್ದನ್ನೂ ಮರೆಮಾಚಿ ರಾಮನಾಯ್ಕನಹಳ್ಳಿಯ ೋಮಾಳದ ಜಮೀನನ್ನು ಖರೀದಿಸಿದಂತೆ ದಾಖಲೆ ಸೃಷ್ಟಿಸಿಕೊಂಡರು. ಆದರೆ ರ್ಕಾರಿ ದಾಖಲೆಗಳಲ್ಲಿ ಜಾಧವ್ ತಾಯಿ ಹೆಸರಲ್ಲಿ ಖರೀದಿಸಿದ್ದ ಸೊತ್ತೆಲ್ಲ ರ್ಕಾರಿ ಗೋಮಾಳವೆಂದೇ ನಮೂದಾಗಿತ್ತಲ್ಲ-ಅದನ್ನು ತಾಯಿಯ ಹೆಸರಿಗೆ ೋಡಿ ಮಾಡಿಸುವುದೇ ಅಸಲೀ ತಲೆನೋವಾಗಿ ಪರಿಣಮಿಸಿತ್ತು.

ಸರ್ಕಾರಿ ಗೋಮಾಳವನ್ನು ಖಾಸಗಿ ವ್ಯಕ್ತಿಯ ಹೆಸರಿಗೆ ಪೋಡಿ ಮಾಡಲು ಸಾಧ್ಯವೆಂಬುದನ್ನು ಅರಿತೇ ಅದಕ್ಕೆ ಹೊಸ ಸರ್ವೆ ನಂಬರ್ ಸೃಷ್ಟಿಸಲಾಗಿತ್ತು. ಮೂಲಕ ಕಂದಾಯ ವ್ಯವಸ್ಥೆಯನ್ನು ಯಾಮಾರಿಸುವುದು ಆನೇಕಲ್ ಹಸೀಲ್ದಾರ್ ಸೇರಿದಂತೆ ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿಗಳು ಾಡಿದ ತಪ್ಪು ಆದಾಗಿತ್ತು. ಯಾವತ್ತು ಜಾಧವ್ ಚೀಫ್ ಸೆಕ್ರೆಟರಿ ಹುದ್ದೇರಿದರೋ ಾಡಿದ ಪಾಪಕ್ಕೆ ಪುಣ್ಯದ ಬಣ್ಣ ಬಳಿಯುವ ಕಾರ್ಯಾಚರಣೆ ಶುರುವಾಯಿತು. ೊಸ ಸರ್ವೆ ನಂಬರ್ ಸೃಷ್ಟಿಸಿ ಆರ್‌ಟಿಸಿ ಅಪ್‌ಲೋಡ್ ಮಾಡಲು ್ತಿಸಲಾಯಿತಾದರೂ ಅದಕ್ಕೆ ಕಂದಾಯ ಕಂಪ್ಯೂಟರ್ ಜಾಲದ ಭೂಮಿ ತ್ರಾಂಶ ಅಡ್ಡಬರುತ್ತಿತ್ತು, ಇಲ್ಲದ ಸರ್ವೆ ನಂಬರ್, ಪೋಡಿಯನ್ನು ಆರ್‌ಟಿಸಿಗೆ ಪಲೋಡ್ ಮಾಡಹೊರಟರೆ ಭೂಮಿ ತಂತ್ರಾಂಶ ಅದನ್ನು ತಿರಸ್ಕರಿಸುತ್ತದೆ ತ್ತು ಯಾವುದೇ ಕಾರಣಕ್ಕೂ ಆರ್‌ಟಿಸಿಗೆ ದಾಖಲಿಸುವುದಿಲ್ಲ.

ಇದು ಗೊತ್ತಿದ್ದೇ **2016** ರ ಜೂನ್ **13** ರಂದು ಆನೇಕಲ್ ತಹಸೀಲ್ದಾರ್ ೂಮಿ ತಂತ್ರಾಂಶ ಮೇಲುಸ್ತುವಾರಿ ಕೋಶಕ್ಕೆ ಪತ್ರ ಬರೆದು ಪ್ರಭಾವಿಗಳ ಚಳಕದ ಫಲವಾಗಿ ಸೃಷ್ಟಿಯಾಗಿದ್ದ ಪೋಡಿಯನ್ನು ಕಾನೂನುಬಾಹಿರವಾಗಿ ್‌ಟಿಸಿಗೆ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸುವಂತೆ ಪತ್ರ ಬರೆಯುತ್ತಾರೆ. ೂಮಿ ತಂತ್ರಾಂಶದ ಉಸ್ತುವಾರಿ ಹೊತ್ತವರಾದರೂ ಹೇಗೆ ತಾನೇ ಇಲ್ಲಿನ ೋಡಿಗೆ ಆರ್‌ಟಿಸಿ ಕಲ್ಪಿಸಲು ಸಾಧ್ಯ? ಅದರಲ್ಲೂ ಬೇರೆ ಎಲ್ಲರನ್ನೂ ೊರತುಪಡಿಸಿ ಜಾಧವ್ ತಾಯಿಗೇ ವಿಶೇಷವಾಗಿ ಆರ್‌ಟಿಸಿ ಕಲ್ಪಿಸಬೇಕೆಂದರೆ ು ದೊಡ್ಡ ತಲೆನೋವಿನ ಮತ್ತು ಸ್ಪಷ್ಟ ಅಕ್ರಮವೆಂದು ಸಾಬೀತಾಗಬಹುದಾದ ಕರಣವೇ. ಇದು ಗೊತ್ತಿದ್ದೂ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸವರಾಜುರಿಂದ ಹಿಡಿದು ಸರ್ವೆ ಮತ್ತು ಭೂದಾಖಲೆಗಳ ಆಯುಕ್ತ ಮನೀಶ್ ೌದ್ಗಿಲ್‌ವರೆಗೆ ಪ್ರತಿಯೊಬ್ಬರೂ ಮುಖ್ಯ ಕಾರ್ಯದರ್ಶಿಯ ಅಧಿಕಾರಕ್ಕೆ ಣಾದರು. ಒಂದು ಗ್ರಾಮದ ಸರ್ವೆ ನಂಬರನ್ನು ಇನ್ನಾವುದೋ ಗ್ರಾಮಕ್ಕೆ ರಿದ್ದೆಂದು ದಾಖಲಿಸಿ ಆರ್‌ಟಿಸಿ ಮಾಡಿಕೊಡುವ ಕಾರ್ಯಾಚರಣೆಗೆಂದೇ ಶೇಷ ವ್ಯಾಟ್ಸಪ್ ಗ್ರೂಪ್ ಒಂದನ್ನು ಸೃಷ್ಟಿಸಲಾಯಿತು.

120 ಕೋಟಿಯದ್ದು

ಜಾಧವ್ ಸೂಚನೆಯ ಮೇರೆಗೇ ಭೂದಾಖಲೆಗಳ ಜಂಟಿ ನಿರ್ದೇಶಕ ಮಪ್ರಕಾಶ್ ಉಸ್ತುವಾರಿಯಲ್ಲಿ ಭೂಮಿ ಉಸ್ತುವಾರಿ ಕೋಶದ ಮ್ಯಾನೇಜರ್ ರೇಶ್, ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ನಾಗರಾಜ್, ಭೂಮಿ ್ ಡೆಸ್ಕ್‌ನ ಅನಂತ್, ಭೂದಾಖಲೆಗಳ ಬೆಂಗಳೂರು ಉತ್ತರ ವಲಯದ ್ಯೂಟಿ ಡೈರೆಕ್ಟರ್ ಮಂಜುನಾಥ್ ಧಾವನ್ ಮತ್ತು ಭೂದಾಖಲೆಗಳ ಬೆಂಗಳೂರು ಣದ ಡೆಪ್ಯೂಟಿ ಡೈರೆಕ್ಟರ್ ಆನಂದ್‌ಕುಮಾರ್ ಸೇರಿದಂತೆ ಐಎಎಸ್ ಕಾರಿಗಳಾದ ಮನೀಶ್ ಮೌದ್ಗಿಲ್, ಕಂದಾಯ ಇಲಾಖಾ ಪ್ರಧಾನ ರ್ಯದರ್ಶಿ ಬಸವರಾಜು ಮುಂತಾದ ಒಂಭತ್ತು ಅಧಿಕಾರಿಗಳಿದ್ದ ವಿಶೇಷ ್ಟ್ಸಪ್ ಗ್ರೂಪ್ ರಚಿಸಲಾಯಿತು. ಇದರ ಉಸ್ತುವಾರಿಯನ್ನು ಖುದ್ದು ಜಾಧವ್ ೇಬರೇ ಹೊತ್ತ ಫಲವಾಗಿ ಕೇವಲ ಏಳು ದಿನಗಳ ಒಳಗೇ ಜಾಧವ್ ಯಿ ತಾರಾಬಾಯಿ ಹೆಸರಿಗೆ ರಾಮನಾಯ್ಕನಹಳ್ಳಿಯ ಗೋಮಾಳದ **16** ರೆಯನ್ನು ಆರ್‌ಟಿಸಿಗೆ ಸೇರಿಸಲಾಯಿತು!

ಮೊದಲೇ ಗೋಮಾಳದ ಸೊತ್ತು, ಯಾರದೋ ಹೆಸರಿಗೆ ಮಂಜೂರಾದಂತೆ ಸಲ್ಪಟ್ಟ ದಾಖಲೆ ಬಳಸಿ ಅದರಿಂದ ಜಾಧವ್ ತನ್ನ ತಾಯಿ ಹೆಸರಿಗೆ ರಿದಿಸಿದಂತೆ ಮಾಡಿ, ಅದಕ್ಕೆ ಕಂದಾಯ ಇಲಾಖೆಯ ಕಾನೂನನ್ನೇ ಉಲ್ಲಂಘಿಸಿ, ಹಂತದಲ್ಲೂ ಹತ್ತಾರು ಅಧಿಕಾರಿಗಳು ಅಕ್ರಮವೆಸಗುವಂತೆ ಮಾಡಿ, ುಖ್ಯ ಕಾರ್ಯದರ್ಶಿಯೇ ನಕಲಿ ದಾಖಲೆ ಸೃಷ್ಟಿಗೆಂದು ವ್ಯಾಟ್ಸಪ್ ಗ್ರೂಪ್ ಿಸಿಕೊಂಡು ಹೆಜ್ಜೆಹೆಜ್ಜೆಗೂ ಅಕ್ರಮದ ಮೇಲುಸ್ತುವಾರಿ ವಹಿಸಿ ಭೂಮಿ ತ್ರಾಂಶವನ್ನೇ ದುರುಪಯೋಗಪಡಿಸಿ ಕೊಂಡು ದೋಚಿದ್ದು ಬರೋಬ್ಬರಿ ಕೋಟಿ ರೂಪಾಯಿಗಳ ಬೆಲೆಬಾಳುವ **16** ಎಕರೆ ಗೋಮಾಳವನ್ನು!

ಸರ್ಕಾರ ರಾಜಾ ಕಾಲುವೆ ಹೆಸರಲ್ಲಿ ಜನಸಾಮಾನ್ಯರ ಮನೆಗೆ ಬುಲ್ಡೋಜರ್ ುತ್ತದೆ. ಸರ್ಕಾರಿ ಭೂಮಿ ಒತ್ತುವರಿದಾರರ ವಿರುದ್ಧ ದಿಸಿ ಶಂಕರ್ ್ಟದ ತೀರ್ಪು ಪಡೆಯುವ್ನೇ ಛೂಬಿಟ್ಟಿದೆ. ಎಂತೆಂಥ ಬಲಾಢ್ಯರನ್ನೂ ಬಿಡದೇ ್ ಪಡೆ ಸರ್ಕಾರಿ ಭೂಮಿ ಜಪ್ತಿ ಮಾಡುತ್ತದೆ. ಆದರೆ ರಾಜ್ಯದ ಮುಖ್ಯ ರ್ಯದರ್ಶಿಯೇ ಸರ್ಕಾರಿ ಗೋಮಾಳಕ್ಕೆ ಹಾಕಿದ ಕನ್ನಕ್ಕೆ ಇದೆಂಥಾ ಮನ್ನಣೆ. ಥಾ ಜಾಣ ನಿದ್ದೆ?

ಟೋರ್ ಕಿದರ್ ಹೈ ಅಂದರೆ ಮುಖ್ಯಮಂತ್ರಿಗಳ ಬಗಲ್ ಮೇ ಹೈ ಂತಾಯಿತು!

■ ರಾ. ಸೋಮನಾಥ್

ನಮ್ಮ ರಮ್ಯಾ ಗ್ರೇಟ್ ಲೇಡಿ ಸಾರ್!

"ನಿನ್ನ ಬಾಯಾರಿಕೆ ನೀಗಲು ನೀರು ಕುಡಿಯುವುದಕ್ಕಿಂತ ಮೊದಲು ನನ್ನ ಅಂಡು ತೊಳೆಯಲು ನೀರು ಕೊಡು" ಎಂಬ ಗಾದೆ ನೆನಪಿಸುವಂತಿದೆಯಲ್ಲಾ ನಮ್ಮ ಜಯ್ಯಕ್ಕನ ವರ್ತನೆ. ಜಯ್ಯಕ್ಕ ಸರ್ವಾಧಿಕಾರಿ. ಸೂಕ್ಷ್ಮವಾಗಿ ನೋಡಿದರೆ ಇಂದಿರಾ ಗಾಂಧಿ ಅಂಶಗಳೂ ಇವೆ. ಮೋದಿಯ ತಂಗಿಯಂತೆಯೂ ಇದ್ದಾಳೆ. ಉದಾಹರಣೆಗೆ ಮಹದಾಯಿ ವಿಷಯದಲ್ಲಿ ಕರ್ನಾಟಕ ಮೋದಿಯ ಮೊರೆಹೊಕ್ಕು ಬೇಡಿಕೊಂಡಾಗ, ಆತ ಹೇಳಿದ್ದೇನು ಗೊತ್ತೆ? "ಮಹಾರಾಷ್ಟ್ರ ಮತ್ತು ಗೋವಾ ಮುಖ್ಯಮಂತ್ರಿಗಳನ್ನ ಕರೆತನ್ನಿ. ಮಾತನಾಡೋಣ" ಎಂದು. ಆದರೆ ಒಬ್ಬ ಮುಖ್ಯಮಂತ್ರಿ ಇನ್ನಿಬ್ಬರ ಮನೆಗೆ ಹೋಗಿ "ಮೋದಿ ಬರಹೇಳಿದ್ದಾರೆ ಬನ್ನಿ" ಎಂದರೆ ಅವರು ಬರುವುದುಂಟೆ? ಅದೇ ಮೋದಿ ಕರ್ನಾಟಕದ ಮುಖ್ಯಮಂತ್ರಿಯನ್ನ ಅಲ್ಲೇ ಕೂರಿಸಿಕೊಂಡಿದ್ದು "ನೀವಿಬ್ಬರೂ ಬನ್ನಿ" ಎನ್ನಬಹುದು. ಅಂತ ಶಕ್ತಿ ಪ್ರಧಾನಿಗಿದೆ. ಆದರೆ ಬಿಜೆಪಿಯ ಕ್ಷುದ್ರ ರಾಜಕಾರಣ ತಲೆಯಲ್ಲಿದ್ದರೆ ಇದ್ಯಾವುದೂ ಸಾಧ್ಯವಾಗುವುದಿಲ್ಲ. ಆ ದಿಸೆಯಲ್ಲಿ ಮೋದಿ ಮತ್ತು ಜಯಕ್ಕ ಒಂದೇ ತಕ್ಕಡಿಯ ತಟ್ಟೆಗಳಂತಿದ್ದಾರಂತಲ್ಲಾ, ಥೂತ್ತೇರಿ!

ಥೂತ್ತೇರಿ

- ಯಾಹೂ

* * *


ರಾಮಕೃಷ್ಣ ಹೆಗಡೆಯವರು ಬದುಕಿದ್ದರೆ ಈಗ ಅವರಿಗೆ ತೊಂಬತ್ತು ವರ್ಷಗಳಾಗುತ್ತಿತ್ತು. ಸೂಕ್ಷ್ಮವಾಗಿ ನೋಡಿದರೆ ಅರಸು ನಂತರ ಕಂಡುಬಂದ ಉತ್ತಮ ಮುಖ್ಯಮಂತ್ರಿಯಾಗಿ ಹೆಗಡೆ ಕಾಣುತ್ತಾರೆ. ಅವರು ಮೊದಲ ಬಾರಿಗೆ ಮುಖ್ಯಮಂತ್ರಿಗಳಾದಾಗ ರಚಿಸಿದ ಸಂಪುಟ ಅಷ್ಟ ದಿಗ್ಗಜರಿಂದ ಕೂಡಿತ್ತು. ಈ ಪೈಕಿ ನಜೀರ್ ಸಾಹೇಬರು ತಂದ ಕ್ರಾಂತಿಕಾರಿ ಮಂಡಲ ಪಂಚಾಯ್ತಿ ವ್ಯವಸ್ಥೆ ಕೆಳ ಜಾತಿಗಳನ್ನು ಪಂಚಾಯ್ತಿ ಚೇರಿನ ಮೇಲೆ ಕೂರುವಂತೆ ಮಾಡಿದೆ. ಅಧಿಕಾರ ವಿಕೇಂದ್ರೀಕರಣದಿಂದ ಸಮಾನತೆಯ ಸಹಬಾಳ್ವೆಗೆ ಅಡಿಯಿಡುತ್ತಿರುವಾಗಲೇ ನಜೀರ್ ಸಾಹೇಬರು ಕೊರೆಸಿದ ಬೋರ್‌ವೆಲ್‌ಗಳು ಬತ್ತಿಹೋಗಿವೆ. ಹೊಸ ಬೋರ್‌ವೆಲ್‌ಗಳು ಭೂಮಿಯನ್ನು ತಥಾಸ್ತೂತು ಮಾಡಿ ಹಾಕಿವೆ. ಜಲ ಕ್ಷಾಮಕ್ಕೆ ಮಾತ್ರ ಮನುಷ್ಯನ ನಿರ್ನಾಮ ಸಾಧ್ಯ, ಅಂತಹ ಅನಾಹುತವೊಂದು ಇಷ್ಟು ಬೇಗ ಕಾಲಿಡುತ್ತದೆಂದು ಯಾರೂ ನಿರೀಕ್ಷಿಸಿರಲಿಲ್ಲವಲ್ಲಾ, ಥೂತ್ತೇರಿ!!

* * *

ನಮ್ಮ ಈಶ್ವರಪ್ಪ ಮತ್ತು ಯಡಿಯೂರಪ್ಪನ ಗುದಮುರುಗಿ ಭಲೇ ಮಜವಾಗಿದೆಯಲ್ಲಾ. ಚಡ್ಡಿಗಳ ಆಣತಿಯಂತೆ ಸಾಬರನ್ನ ಕೈಬಿಟ್ಟು ಬರೀ ಹಿಂದುಳಿದ ದಲಿತರನ್ನು ಸಂಘಟಿಸಲು ರಾಯಣ್ಣನ ಮೊರೆ ಹೊಕ್ಕ ಈಶ್ವರಪ್ಪನ ಈಡೇರದ ಗುರಿ ಯಾವುದೆಂದರೆ, ಅದು ಯಡಿಯೂರಪ್ಪನ ಮುಖ್ಯಮಂತ್ರಿ ಮಾಡುವುದಂತೆ. ಇದು ನಾಡಿನ ಜನತೆಗೆ ತಮಾಷೆಯಾಗಿ ಕಾಣುತ್ತಿದೆಯಂತಲ್ಲಾ. ಗಾಣಿಗ ಲಿಂಗಾಯತನನ್ನು ಮುಖ್ಯಮಂತ್ರಿ ಮಾಡಬೇಕಾದರೆ ಭಂಡಾರಿಗಳು, ಜವಳಿಯವರು, ಮಡಿವಾಳ ಲಿಂಗಾಯತರು, ನೊಣಬರು ಮತ್ತು ನೊಣಬರಲ್ಲಿನ ಮೂರು ದಿನದವರು ಮತ್ತು ನಾಲ್ಕು ದಿನದವರು, ಬಳೆಗಾರರು, ಹೂಗಾರರು, ಸಾದರನ್ನು ಸಂಘಟಿಸುವುದು ಬಿಟ್ಟು, ಮುಸ್ಲಿಮರ ಹೊರತಾಗಿ ದಲಿತ ಹಿಂದುಳಿದವರನ್ನು ಸಂಘಟಿಸಿ ಲಿಂಗಾಯತರ ಯಡಿಯೂರಪ್ಪನನ್ನು ಮುಖ್ಯಮಂತ್ರಿ ಮಾಡಲು ಹೊರಟ ಈಶ್ವರಪ್ಪನ ಹಗಲುವೇಷ ಎಲ್ಲರಿಗೂ ನಗು ತರಿಸಿದೆಯಂತಲ್ಲಾ. ಈಶ್ವರಪ್ಪನ ಹಿಕ್ಮತ್ತನ್ನು ಅರಿತಿರುವ ಯಡಿಯೂರಪ್ಪ ಕೂಡ ಅದರ ಅಗತ್ಯವಿಲ್ಲ ಎನ್ನುವಂತೆ ವರ್ತಿಸುತ್ತಿರುವುದಷ್ಟೇ ಅಲ್ಲ, ಹೆಚ್ಚುಕಮ್ಮಿಯಾದರೆ ಈಶ್ವರಿ ಹೊಡತಕ್ಕೊಂದು ಅಡ್ಡ ಹೊಡೆತ ಕೊಡುವುದಕ್ಕೆ ರೆಡಿಯಾಗಿದ್ದಾರಂತಲ್ಲಾ, ಥೂತ್ತೇರಿ!!

* * *

ನಟಿ ರಮ್ಯಾನ ಹೇಳಿಕೆಗಳ ಬಗ್ಗೆ ಯಾರನ್ನಾದರೂ ಮಾತನಾಡಿಸಬೇಕೆಂದು ಯೋಚಿಸುತ್ತಿರುವಾಗ ಪಾಟಿಸ್ಲೆ ಹೆಸರು ಜ್ಞಾಪಕಕ್ಕೆ ಬಂತು. ಆ ಕೂಡಲೇ ಫೋನ್ ಮಾಡಿದಾಗ ರಿಂಗಾಯ್ತು.



ರಿಂಗ್ ಟೋನ್: "ಅಂಗೂ ಇಂಗೂ ಯಂಗೋ ಇದ್ದೋ ಹಿಂಗಾಗೋದೆ ನೋಡೊ ಅಣ್ತಮ್ಮಾ..."

"ಹಲೋ ಗುಡ್ಡಾಪ್ಪರ್ ನೂನ್ ಸಾರ್."

"ಏನ್ಮಾಡ್ತಾಯಿದ್ದಿ ಪಾಟಿಸ್ಲೆ?"

"ಏನ್ಮಾಡದು ಸಾರ್. ಮಳೆ ಇಲ್ಲ, ರಾಗಿ ಪೈರ್ಯಲ್ಲ ವಣಿಗೋಯ್ತು."

"ಅದರ ಬಗ್ಗೆ ಯಾಕೆ ತಲೆ ಕೆಡಿಸಿಗತ್ತಿ?"

"ತಲೆ ಕೆಡಿಸಿಗಳದಂಗೆ ಇರಕ್ಕೆ ನಾವೇನು ಬಿಜೆಪಿನ ಸಾರ್?"

"ಅಂಗರೆ ಬಿಜೆಪಿಗಳು ತಲೆ ಕೆಡಿಸಿಗಳಲ್ವ?"

"ದೇವರಾಣೆ ಇಲ್ಲ ಸಾರ್. ಆ ಈಡಿಯಟ್‌ಗಳು ಯಾವಾಗ್ಲೂ ಸಾಬರೇನು ಮಾಡ್ತರೆ, ದಲಿತರೇನು ಮಾತಾಡ್ತರೆ, ತಮಿಗಾಗದೋರ ಚಟುವಟಿಕೆ ಏನೂ ಅನ್ನದ್ರಲ್ಲೆ ಕಾಲ ಹಾಕ್ತವೆ. ನಮ್ಮ ರಮ್ಯಾನ ಮಾತ ಬಾಯಿಗಾಯ್ಕಂಡು ಒಂದು ವಾರದಿಂದ ಅಗಿತಾ ಅವೆ, ಬಡ್ಡೆತ್ತವು."

"ರಮ್ಯಾನ ಹೇಳಿಕೆ ಸರಿನಾ?"

"ಯಾವ ಹೇಳಿಕೆ ಸಾ?"

"ಬಿಜೆಪಿಗಳು ಆರ್‌ಎಸ್‌ಎಸ್‌ನವರು ದೇಶದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಲೇಯಿಲ್ಲ, ಕಾಂಗ್ರೆಸ್ ಮಾತ್ರ ಹೋರಾಟ ಕೊಡ್ತು ಅಂದವ್ರುಳಲ್ಲಾ ಸರೀನಾ?"

"ಸರಿ ಸಾರ್. ಆಗ ಬಿಜೆಪಿ, ಆರ್‌ಎಸ್‌ಎಸ್ಸೇ ಇರಲಿಲ್ಲವಲ್ಲ ಸಾ. ಕರೆಕ್ಟಾಗೇ ಹೇಳ್ಯವುಳೆ."

"ಬ್ರಿಟಿಷರಿಗೆ ಅವರು ಸಹಾಯ ಮಾಡಿದ್ರಂತೆ ನಿಜವೇ?"

"ನೋಡಿ ಸಾರ್, ಆಗಿನ ಕಾಲದಲ್ಲಿ ಹಿಂದು ಮಹಾಸಭಾ, ವಿಶ್ವಹಿಂದೂ ಅನ್ನೋ ಪುರೋಹಿತರ‍್ಯಲ್ಲ, ಬ್ರಿಟಿಷ್ ಸರ್ಕಾರದಲ್ಲಿ ಎಸಿ, ಡಿಸಿ, ತಹಸೀಲ್ದಾರ್ ಅಂತ ಆಗಿದ್ರು. ಬ್ರಿಟಿಷರ ಕಾಲದಲ್ಲಿ ಅವರ ಊಟಕ್ಕೆ ಯಾವ ತೊಂದ್ರೆನೂ ಆಗಲಿಲ್ಲ, ಅಂಗಂದ್ರೆ ಸಪೋರ್ಟ್‌ಗೆ ಇದ್ರು ಅಂತ ಅಲವಾ?"

"ಪಾಕಿಸ್ತಾನದ ಪರ ಮಾತಾಡಿರದ್ಕೆ ಏನೇಳ್ತಿ?"

"ನೀವೂ ಅಂಗೆ ಮಾತಾಡ್ತಿರಲ್ಲ ಸಾರ್, ಅವಳು ಪಾಕಿಸ್ತಾನದಲ್ಲೂ ಒಳ್ಳೆ ಜನವ್ರುರೆ ಅಂದವ್ರುಳೆ. ಟೀವಿಲಿ ಕುಂತಿರೊ ಕಂತ್ರಿ ಮುಂಡೆವ್ರುಕೆ ಅರ್ಥವಾಗಬೇಕಿತ್ತು."

"ಏನರ್ಥ ಆಗಬೇಕಿತ್ತು."

"ಇಂಡಿಯಾದಲ್ಲಿರಂಗೆ ಪಾಕಿಸ್ತಾನದಲ್ಲೂ ಕಲಾವಿದರವ್ರುರೆ. ಬರಹಗಾರರವ್ರುರೆ, ಸಂಗೀತಗಾರರವ್ರುರೆ ಮತ್ತೆ ಪಾಕಿಸ್ತಾನದ ಸರಕಾರನ ಒಪ್ಪದೆಯಿರೋರು ಅವ್ರುರೆ, ಅಲ್ಲಿ ಕೆಟ್ಟ ಜನಗಳು, ಬಿಜೆಪಿಗಳ ತರಹ ಜನನೂ ಅವ್ರುರೆ. ಅವ್ರೆಲ್ಲ ಸೇರಿ ಒಂದು ದೇಶ ಅನ್ನದು ಗೊತ್ತಾಗಬೇಕಿತ್ತು. ಆಗ ರಮ್ಯಾ ಹೇಳಿದ್ದು ಸರಿ ಅನ್ಸದು. ನಮ್ಮ ರಮ್ಯಾ ಮಾತಾಡಿದ್ರಲ್ಲಿ ಏನಾರ ತಪ್ಪಿದೀಯ ಸಾ?"

"ಏನೇನು ತಪ್ಪಿಲ್ಲ ಅಂತೀಯಾ?"

"ಪ್ರೂವ್ ಮಾಡಿ ಸಾ. ಆದ್ರು ಆ ಪಬ್ಲಿಕ್ ಟಿವಿ ಕಡ್ಡಿ ರಂಗ ಅವ್ರುಳ್ಯಾರೋ ರಮಾ ದೇವಿ ತರದೋಳ ಕೂರಿಸಿಗಂಡು, ರಗಳೆ ರಮ್ಯಾ ಪಾಪೀಸ್ತಾನ ಹೊಗಳಿದ್ಲು ಅಂತ ಮಾತಾಡ್ತನಲ್ಲಾ, ಅವ್ನುದೇನು ಹೊಲಸು ಬಾಯಿ ಸಾರ್. ತಲಿ ಕೆಟ್ಟ ಬ್ರಾಹ್ಮಣ ಕೆಟ್ಟ ಮಂತ್ರ ಹೇಳಿದಂಗೆ ಉಸರಿಡಕಂಡು ಮಾತಾಡ್ತನೆ. ಅದ್ಕೆ ಆ ರಮಾದೇವಿ ಸಾತ್ ಕೊಡ್ತಳೆ. ಯಲ್ಲ ಟಿವಿ ಮುಂಡೆ ಮಕ್ಕಳು ಅಂಗೆ ಆಗ್ಯವ್ರುರೆ. ಸದ್ದಿಕೆ ನಮ್ಮ ಕೈಲಿ ರಿಮೋಟ್‌ಗಳಿರದ್ರಿಂದ ಚಾನಲ್ ಬದ್ಲಾಸ್ತಿವಿ. ಅದು ವಿಜ್ಞಾನ ನಮಿಗೆ ಕೊಟ್ಟಿರೊ ಸ್ವಾತಂತ್ರ."

"ಮಂಗಳೂರ ನರಕ ಅನ್ನದು ಸರಿನಾ?"

"ಅವ್ರುನ್ಯಾವನೊ ಬಿಜೆಪಿಯೋನು ಪಾಕಿಸ್ತಾನ ನರಕ ಅನ್ನದು ಸರಿನಾ? ನಮ್ಮ ರಮ್ಯಾ ಕರಕ್ಟಾಗಿ ಮಾತಾಡ್ತಳೆ ಸಾರ್, ಅವ್ರುಳೊಂಥರಾ ಮಗು ಇದ್ದಂಗೆ. ಅಂಥಾ ಹುಡುಗಿ ಮಾತನ್ನೇ ಬದ್ಲಾಸಿ ಈ ನನ್‌ಮಕ್ಕಳು ಕ್ಷಮೆ ಕೇಳಬೇಕು ಅಂದ್ರೆ ಮೆಟ್ನಲ್ಲಿ ವಡಿಬೇಕು."

"ಯಾರಿಗೆ?"

"ಕ್ಷಮೆ ಕೇಳಬೇಕು ಅಂದೋರಿಗೆ."

"ಹೊಡಿಯೋ ಮಾತಾಡಬಾರ್ದು. ಅದು ಹಿಂಸೆಯಾಗುತ್ತೆ."

"ಅದು ಸರಿ, ಒಪ್ಪಿಗತ್ತಿನಿ. ಅವ್ರುಳ ಕಾರಿಗೆ ಮೊಟ್ಟೆ ಯಸ್ತರಂತಲ್ಲಾ ಅವ್ರುರಿಗೇನು ಮಾಡಬೇಕೇಳಿ. ಆಕ್ಚುವಲಿ ನಮಗೆ ಹಿಂಸೆಲಿ ನಂಬಿಕೆಯಿಲ್ಲ ಸಾರ್. ಆದ್ರೇನು ಮಾಡ್ತಿರೀ, ನಮ್ಮ ವೈರಿಗಳು ಪ್ರಚೋದನೆ ಮಾಡಿದಾಗ ಸುಮ್ಮನಿರಕ್ಕಾಗಲ್ಲ. ರಿಯಲಿ ಬಿಜೆಪಿಗಳು ಅವ್ರುರಿಗಿಂತ ಜಾಸ್ತಿ ತೋಳ್ಬಲ ಇರೋರಿಗೇ ಬಗ್ಗದು. ತೋಳ್ಬಲ ಇಲ್ದೆಯಿರದ್ರಿಂದ ಶೂದ್ರ ಮುಂಡೆವ ಮುಂದೆ ಬುಟಗಂಡು ಬತ್ತರೆ. ಆ ಮಂಗಳೂರಲ್ಲೂ ಅಂಗೆಯಂತೆ. ಬಿಲ್ಲವರು, ಮೊಗವೀರರು, ಈಡಿಗರ ತಲೆ ಕೆಡಿಸಿ ನರಕ ಮಾಡಿ ಮಡಿಗ್ಯವ್ರುರೆ."

"ಅದಕ್ಕೆ ರಮ್ಯಾ ನರಕ ಅಂದಿರದು."

"ಹೌದು ಸಾರ್. ಅವ್ರುರು ಮೊಟ್ಟೆ ಯಸ್ತರೂ ಕೂಡ ನಗಾಡಿದಾಳೆ. ರಿಯಲಿ ಒಳ್ಳೆ ನಗು ಸಾರ್ ಅವಳದು. ಅವಳು ನಗಾಡಿದ್ರೆ ಮನಸಿಗೆ ಏನೋ ಒಂದು ಸಮಾಧಾನ. ಮಕ್ಕಳು ನಗ್ತವಲ್ಲ ಅಂಗೆ."

"ಅಂತೂ ನೀನು ರಮ್ಯಾನ ಅಭಿಮಾನಿ."

"ಅಭಿಮಾನಿ ಅಲ್ಲ ಸಾರ್, ನಮ್ಮನೆ ಮಗಳವ್ರುಳು."

"ಹೌದಾ?"

"ಎಸ್ಸಾರ್, ಅವ್ರುಳಿಲ್ಲಿ ಎಲಕ್ಷನ್ನಿಗೆ ನಿಂತಾಗ ಸ್ವಂತ ದುಡ್ಡಲ್ಲಿ ಕ್ಯಾನ್‌ವಾಸ್ ಮಾಡಿದ್ದೆ. ಅಂಬರೀಶ್ ಸರಿಯಾಗಿ ಮಾತಾಡಿದ್ರೆ ಗೆಲ್ತಿದ್ಲು. ಇಲ್ಲ ಅಂದ್ರೆ ಕೋಡು ಮುರದ ಎತ್ತಿನಂಗಿರೊ ಆ ಪುಟ್ಟರಾಜ ಎಲ್ಲಿ ಗೆಲ್ತಿದ್ದ. ರಮ್ಯಾನಿಗೆ ಒಳ್ಳೆ ಫ್ಯೂಚರ‍್ದೆ ಸಾರ್. ನಾವು ನೀವ್ಯಲ್ಲ ಬೆಳೆಸಬೇಕು. ಅದ್ಕೆ ಮೊದ್ಲು ಟಿವಿ ವಳಗಿರೋರ ಈಚೆಗೆ ಯಳಕಂಡು ರಮ್ಯಾನ ಮೆಟ್ನಲ್ಲಿ ವಡಿಬೇಕು."

"ಮತ್ತೆ ಹಿಂಸೆ ಮಾತಾಡ್ತಿ ನೀನು."

"ಸಾರಿ ಸಾರ್, ಈಚೆಗೆ ನನ್ನ ಬಾಯಿಲಿ ಕೆಟ್ ಬೈಗಳ ನಿಂತೋಗ್ಯವೆ ಸಾರ್."

"ಆಶ್ಚರ್ಯ. ಯಾಕೆ?"

"ಬೈಗಳಯಲ್ಲ ಹೆಂಗಸರ ಬಗ್ಗನೆ ಇರದ್ರಿಂದ ರಮ್ಯಾನ ಮುಖ ನೋಡಿಕೊಂಡು ಮರೆತುಬುಟ್ಟಿದ್ದಿನಿ ಸಾ. ಆದ್ರು ಟಿವಿ ನನಮಕ್ಕಳು ಅನ್ನದೆಯಿರೊ ಮಾತ ತಿರುಚಿ ರಮ್ಯಾ ಆಡಿರೊ ಮಾತು ಸರಿನಾ, ತಪ್ಪಾ ಅಂತ ಎಸ್ಸೆಮ್ಮೆಸ್ ಮಾಡಿ ಅಂತರಲ್ಲಾ, ಇವ್ರುರಿಗೆ ಯಾವ ಬೈಗಳ ಉಪಯೋಗಿಸಬೇಕು. ನೀವೇ ಹೇಳಿ."

"ಅದೂ ಟಿಆರ್‌ಪಿ ಸ್ಪರ್ಧೆ"


"ಹೊಟ್ಟೆಪಾಡು ಅನ್ನಿ. ಹೊಟ್ಟೆಪಾಡಿಗೆ ಸುಳ್ಳು ಸುದ್ದಿ ಹಬ್ಬಿಸದು. ಜನಗಳ ದಿಕ್ಕುತಪ್ಪಿಸದು ತಪ್ಪು ಸಾರ್. ನನಿಗೆ ದುಡ್ಡಬೇಕಾದ್ರೆ ನಿಮ್ಮಂಥೋರ ಕೇಳಿ ಈಸಗತ್ತಿನಿ ಸಾರ್. ಈ ಬೇವರ್ಸಿ ಜನಗಳ ತರ ಸುಳ್ಳು ಮಂತ್ರ ಹೇಳಲ್ಲ. ನನ್ನ ಅಕೌಂಟ್ ನಂಬರ್ ಮೆಸೇಜ್ ಮಾಡ್ತೀನಿ. ಒಂದು ಫೈವ್ ಹಂಡ್ರೆಡ್ಹಾಕಿ ಸಾರ್. ಮಳೆ ಇಲ್ಲ, ಬೆಳೆಯಿಲ್ಲ, ಕೆರೆಲಿ ನೀರಿಲ್ಲ, ಸಾರಿ ಸಾರ್."

"ಥೂತ್ತೇರಿ!!!" ■


ಪವರ್ ಗ್ರಿಡ್ ಕಾರ್ಪೋರೇಷನ್‌ನ ನಾಮಫಲಕ


ತುಮಕೂರು

ಬಂಡವಾಳಿಗರ 'ಪವರ್'ಗಾಗಿ ರೈತರು ಬರ್ಬಾದ್!


ಹಾಲಿ ಸಂಸದ ಎಸ್.ಪಿ.ಮುದ್ದಹನುಮೇಗೌಡ

ಸರ್ಕಾರದ 'ಅಭಿವೃದ್ಧಿ'ಗಳು ಸ್ವಿಸ್ ಬ್ಯಾಂಕ್ ಖಾತೆಗಳನ್ನು ದಪ್ಪಗಾಗಿಸುತ್ತವೆಯೇ ಹೊರತು ಈ ನೆಲದ ಸಾಮಾನ್ಯ ಭಾರತೀಯನ ಪಾಲಿಗೆ ಅವು ಬಿಸಿ ತುಪ್ಪ: ಅತ್ತ ನುಂಗುವಂತೆಯೂ ಇಲ್ಲ, ಇತ್ತ ಉಗುಳುವಂತೆಯೂ ಇಲ್ಲ. ತುಮಕೂರು ಆಸುಪಾಸಿನ ರೈತರದು ಇವತ್ತು ಅಕ್ಷರಶಃ ಇದೇ ಪರಿಸ್ಥಿತಿ. ಇಡೀ ಇಂಡಿಯಾದ ವಿದ್ಯುತ್ ಜಾಲವನ್ನೇ ಏಕೀಕರಿಸಿ ಎಲ್ಲರಿಗೂ, ಎಲ್ಲಾ ಹೊತ್ತಲ್ಲೂ ಕರೆಂಟ್ ಕೊಡುವ 'ಪವರ್‌ಗ್ರಿಡ್' ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆ ಮತ್ತು ದಕ್ಷಿಣ ಭಾರತದಲ್ಲಿ ಅಂತಹ ಯೋಜನೆಯನ್ನು ತುಮಕೂರು ಜಿಲ್ಲೆಯನ್ನೇ ಕೇಂದ್ರವಾಗಿಸಿಕೊಂಡು ಶುರು ಮಾಡ್ತೇವೆ ಅಂತ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ-2 ಸರ್ಕಾರ ಘೋಷಿಸಿದಾಗ ತುಮಕೂರಿನ ಜನ ಹಿರಿಹಿರಿ ಹಿಗ್ಗಿದ್ದರು. ಅವತ್ತು ಕಲ್ಪತರು ನಾಡಿನ ಎಂಪಿಯಾಗಿದ್ದ ಜಿ.ಎಸ್.ಬಸವರಾಜು ಯೋಜನೆಯನ್ನು ಸ್ವಾಗತಿಸಿದ್ದೇ ಸ್ವಾಗತಿಸಿದ್ದು. ಎಲ್ಲರಿಗೂ, ಎಲ್ಲಾ ಹೊತ್ತಲ್ಲೂ ಕರೆಂಟ್ ಅನ್ನೋ ಸ್ಲೋಗನ್ ಕೇಳಿ ಮನೆಯಲ್ಲಿ ಇಪ್ಪತ್ನಾಲ್ಕು ಗಂಟೆಯೂ ಬಲ್ಬ್ ಉರಿಯುತ್ತಿರುವ, ಹೊಲದ ಪಂಪ್‌ಸೆಟ್ ಸದಾ ನೀರೆತ್ತುತ್ತಿರುವ ಕಲ್ಪನೆ ರೈತರ ಮನದಲ್ಲಿ ಹರಿದಾಡಿತ್ತೇ ವಿನಃ, ಅನಾಮತ್ತು ತಮ್ಮ ಬದುಕಗಳನ್ನೇ ಬೀದಿಗಟ್ಟುತ್ತದೆ ಅಂತ ಅವರ್‍ಯಾರು ಊಹಿಸಿರಲಿಕ್ಕಿಲ್ಲ. ಅಸಲಿಗೆ ಈ ಪವರ್‌ಗ್ರಿಡ್ ಅನ್ನೋ ಯೋಜನೆ ಹುಟ್ಟಿಕೊಂಡಿದ್ದೇ ಬಂಡವಾಳಶಾಹಿ ಕೈಗಾರಿಕೋದ್ಯಮಿಗಳಿಗೆ ನಿರಂತರ ಕರೆಂಟ್ ಕೊಡುವ ಉದ್ದೇಶದಿಂದ. ಈ ಯೋಜನೆಯ ಶೇ.90ರಷ್ಟು ವಿದ್ಯುತ್ ಬಳಕೆಯಾಗೋದು ಕೈಗಾರಿಕೆಗಳಿಗೆ ಎಂಬ ಅಂಕಿಅಂಶವೇ ಇದನ್ನು ಸಾಬೀತುಮಾಡುತ್ತದೆ. ಇಲ್ಲಿ ರೈತರದ್ದೇನಿದ್ದರೂ ಈ ಯೋಜನೆಗೋಸ್ಕರ ತಮ್ಮ ಹೊಲ, ಮನೆಗಳನ್ನು ಕಳೆದುಕೊಂಡು ಒಕ್ಕಲೆದ್ದುಹೋಗುವ ಹೀನಾಯ ಪಾತ್ರ ಮಾತ್ರ!


ತುಮಕೂರಿನ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಉದ್ಭವಿಸುತ್ತಿರುವ ಪವರ್‌ಗ್ರಿಡ್ ಘಟಕಕ್ಕೆ ಸಾವಿರ ಕೋಟಿಗಿಂತಲೂ ಹೆಚ್ಚು ಹಣ ಸುರಿಯಲಾಗುತ್ತಿದೆ. 765 ಕೆಬಿ ಸಾಮರ್ಥ್ಯದ ಬೃಹತ್ ಸ್ಥಾವರ ಹಾಗೂ 400 ಕೆಬಿಯ ಸಾಮರ್ಥ್ಯ 2 ಉಪಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ. ಇಡೀ ರಾಜ್ಯವನ್ನು ಸಂಪರ್ಕಿಸುವ ಮೊದಲ ಹೈಪವರ್‌ಗ್ರಿಡ್ ಕಾರಿಡರ್ ಹೆಗ್ಗಳಿಕೆಯ ಇದು ಕೊಲ್ಲಾಪುರದಿಂದ ಬಿಜಾಪುರ, ತುಮಕೂರಿನಿಂದ ಸೇಲಂ-


ಮಾಜಿ ಸಂಸದ ಜಿ.ಎಸ್.ಬಸವರಾಜು

ಟ್ಯೂಟಿಕೊರಿಲ್- ನಾಗಪಟ್ಟಣದವರೆಗೆ, ಸೊಲ್ಲಾಪುರದಿಂದ ರಾಯಚೂರು, ಕರ್ನೂಲ್, ವೆಲ್ಲೂರು ನೆಲ್ಲೂರುವರೆಗೆ ವಿದ್ಯುತ್ ಪ್ರವಹಿಸಲಿದೆ. ಈಗಾಗಲೇ 3ನೇ ಹಂತದ ಯೋಜನೆಯು ಸುಮಾರು 110 ಎಕರೆ ಪ್ರದೇಶದಲ್ಲಿ ರೆಡಿಯಾಗುತ್ತಿದ್ದು ತುಮಕೂರಿನಿಂದ 400 ಕೆಬಿ ಡಿಸಿ ಗೂಟಿ (ಆಂಧ್ರಪ್ರದೇಶ) ಮಧುಗಿರಿ ಲೈನ್, 400 ಕೆಬಿ ಡಿಸಿ ಮಧುಗಿರಿ-ಯಲಹಂಕ ಲೈನ್, 765 ಕೆಬಿ ಎಸ್‌ಸಿ ಮಧುಗಿರಿ ಧರ್ಮಪುರಿ ಲೈನ್‌ಗಳನ್ನು ಸಂಪರ್ಕಿಸುವ ಕೆಲಸ ಮುಂದುವರೆದಿದೆ.

ಈ ಯೋಜನೆಯ ವಿಪರ್ಯಾಸವೆಂದರೆ ಸದ್ಯ ಸ್ಥಾವರುಗಳು ಸ್ಥಾಪನೆಯಾಗುತ್ತಿರುವ ಕೇವಲ ನರಸಾಪುರದ ಫಲವತ್ತಾದ ಜಮೀನುಗಳು ಮಾತ್ರವಲ್ಲ, ರಕ್ಕಸ ಸಾಮರ್ಥ್ಯದ ಈ ಲೈನುಗಳು ಎಲ್ಲೆಲ್ಲಿ ಹರಿದಾಡುತ್ತವೋ ಅದರ ಕೆಳಗಿರುವ ಜಮೀನು, ತೋಟಗಳನ್ನೂ ಸ್ವಾಧೀನಪಡಿಸಿಕೊಳ್ಳಬೇಕಿದೆ. ಯಾಕೆಂದರೆ ಲೈನುಗಳು ಹೊತ್ತೊಯ್ಯುವ ವಿದ್ಯುತ್ ಸಾಮರ್ಥ್ಯವೇ ಆ ಪರಿ ಅಪಾಯಕಾರಿಯಾದದ್ದು. ಸದ್ಯಕ್ಕೆ ಲೈನುಗಳು ಸರಿದಾಡುವ ಜಾಗದಲ್ಲಿನ್ನು ಭೂಸ್ವಾಧೀನ ಪ್ರಕ್ರಿಯೆ ಶುರುವಾಗಿಲ್ಲವಾದರೂ ವಿದ್ಯುತ್ ಟವರ್‌ಗಳನ್ನು ನಿರ್ಮಿಸಲಾಗುತ್ತಿರುವ ಜಾಗಗಳಲ್ಲಿ ಜಮೀನುಗಳನ್ನು ರೈತರಿಂದ ಕಿತ್ತುಕೊಳ್ಳಲಾಗುತ್ತಿದೆ. ಆದರೆ ಅದಕ್ಕೆ ತಕ್ಕಂತಹ ಪರಿಹಾರವನ್ನೇ ಪವರ್‌ಗ್ರಿಡ್ ಕಾರ್ಪೋರೇಷನ್ ನೀಡುತ್ತಿಲ್ಲ. ನಿರ್ಮಿಸಲಾಗುತ್ತಿರುವ ವಿದ್ಯುತ್ ಟವರ್‌ಗಳ ಅಳತೆಯ ಆಧಾರದಲ್ಲಿ ಎ, ಬಿ, ಸಿ ಮತ್ತು ಡಿ ಟೈಪ್‌ಗಳೆಂದು ಭೂಸ್ವಾಧೀನವನ್ನು ವಿಂಗಡಿಸಲಾಗಿದೆ. ಅದೇ ಅಳತೆಗೆ ತಕ್ಕಂತೆ ಆಕ್ರಮಿಸುವ ಜಾಗಕ್ಕೆ ಪರಿಹಾರವನ್ನೂ ಕೊಡಬೇಕು.

ಆದರೆ ಪವರ್‌ಗ್ರಿಡ್ ಕಾರ್ಪೋರೇಷನ್ ಬಿಸಾಕುತ್ತಿರುವುದು ಪುಡಿಗಾಸು ಮಾತ್ರ; ಅದೂ ಪಟ್ಟುಬಿಡದೆ ಸರ್ಕಾರಿ ಕಚೇರಿಗಳಿಗೆ ಅಲೆದಾಡಿದವರಿಗಷ್ಟೆ. ಮುಗ್ಧ ಅಮಾಯಕ ರೈತರಿಗೆ ಅದೂ ಇಲ್ಲ. ನಿಜ ಹೇಳಬೇಕೆಂದರೆ, ಭೂಸ್ವಾಧೀನ ಕಾಯ್ದೆ ಪ್ರಕಾರ ಈ ಜಮೀನುಗಳಿಗೆ ಪರಿಹಾರ ನಿಗದಿಪಡಿಸಬೇಕಿತ್ತು, ಅದರ ಪ್ರಕಾರ ಏನಿಲ್ಲವೆಂದರೂ


ಹಾಲಿ ಜಿಲ್ಲಾ ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರ

ಎಕರೆಗೆ ಹದಿನೈದರಿಂದ ಇಪ್ಪತ್ತು ಲಕ್ಷ ಪರಿಹಾರ ಸಿಗಬೇಕು. ಆದರೆ ಪವರ್‌ಗ್ರಿಡ್ ಕಾರ್ಪೋರೇಷನ್ ಪರಿಹಾರಧನ ನಿಗದಿ ಮಾಡಲು ಬಳಸಿಕೊಳ್ಳುತ್ತಿರೋದು ಟೆಲಿಗ್ರಾಫ್ ಆಕ್ಟ್ 1885 ಮತ್ತು ಎಲೆಕ್ಟ್ರಿಸಿಟಿ ಆಕ್ಟ್ 2003ನ್ನು. ಇವುಗಳ ಪ್ರಕಾರ ಒಂದು ಎಕರೆಗೆ ಎರಡು ಲಕ್ಷ ಪರಿಹಾರವನ್ನಷ್ಟೇ ನೀಡಲಾಗುತ್ತಿದೆ. ಇದು ರೈತರಿಗೆ ಸರ್ಕಾರವೇ ಮಾಡುತ್ತಿರುವ ಹಗಲುದರೋಡೆ.

ಇಲ್ಲಿ ಇನ್ನೂ ಒಂದು ಗೋಲ್‌ಮಾಲ್ ನಡೆಯುತ್ತಿದೆ. ಏನೆಂದರೆ ಮೂಲ ಯೋಜನೆಯ ಪ್ರಕಾರ ಈ ಪವರ್‌ಗ್ರಿಡ್ ಸ್ಥಾವರವನ್ನು ಇದೇ ತುಮಕೂರಿನ ಮಧುಗಿರಿಯಲ್ಲಿ ಸ್ಥಾಪಿಸಬೇಕಾಗಿತ್ತು. ಅದಕ್ಕೊಂದು ಹೆಚ್ಚು ಫಲವತ್ತಲ್ಲದ, ಜಾಸ್ತಿ ಜನರನ್ನು ಒಕ್ಕಲೆಬ್ಬಿಸದ ಜಾಗವನ್ನೂ ಗುರುತಿಸಲಾಗಿತ್ತು. ಆದರೆ ನರಸಾಪುರ ಇಂಡಸ್ಟ್ರಿಯಲ್ ಏರಿಯಾದ ಬಂಡವಾಳಿಗರ ಲಾಬಿ ಮತ್ತು ಮಂಜೂರಾಗುವ ಪರಿಹಾರ ನಿಧಿಯ ಕಮೀಷನ್ ಗೆಬರುವ ಪೊಲಿಟಿಷಿಯನ್‌ಗಳ ಒತ್ತಡದಿಂದಾಗಿ ಇಡೀ ಯೋಜನೆಯನ್ನು ಮಧುಗಿರಿಯಿಂದ ಹೈಜಾಕ್ ಮಾಡಿತಂದು ನರಸಾಪುರದ ರೈತ ಜಮೀನುಗಳ ಮೇಲೆ ಹೇರಲಾಗಿದೆ. 2013ರಿಂದ ಮೊನ್ನೆಮೊನ್ನೆಯವರೆಗೂ ಪವರ್‌ಗ್ರಿಡ್ ಕಾರ್ಪೋರೇಷನ್‌ನ ಅಷ್ಟೂ ಪತ್ರವ್ಯವಹಾರಗಳು ನಡೆದಿರೋದು ಮಧುಗಿರಿ ವಿಳಾಸವನ್ನಿಟ್ಟುಕೊಂಡು; ಆದರೆ ಯೋಜನೆ ಕಾರ್ಯಗತವಾಗುತ್ತಿರೋದು ತುಮಕೂರಿನಲ್ಲಿ! ಅಷ್ಟರಮಟ್ಟಿಗೆ ಸರ್ಕಾರವನ್ನೇ ಅಧಿಕಾರಿಗಳು ಯಾಮಾರಿಸಿದ್ದಾರೆ. ಇತ್ತೀಚೆಗೆ, ಅಂದರೆ ಕಳೆದ ಒಂದು ತಿಂಗಳ ಹಿಂದಷ್ಟೇ, ನರಸಾಪುರದಲ್ಲಿ ಗ್ರಿಡ್ ಸ್ಥಾಪಿಸುವುದಕ್ಕೆ ಅನುಮತಿ ಪಡೆದುಕೊಂಡಿದ್ದಾರೆ. ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆಯೋ ಗೊತ್ತಿಲ್ಲ, ಆದರೆ ರೈತರಿಗಂತೂ ಭರ್ಜರಿ ಮೋಸವಾಗಿದೆ. ಹೇಗೆಂದರೆ, ಸ್ವಾಧೀನಪಡಿಸಿಕೊಂಡ ಭೂಮಿಗೆ ಕೇವಲ ಉದ್ದಗಲದ ಅಳತೆಯ ಆಧಾರದಲ್ಲಿ ಮಾತ್ರವಲ್ಲ, ಆ ಜಮೀನು ಇರುವ ಪ್ರಾದೇಶಿಕ ಮೌಲ್ಯದ ಆಧಾರದಲ್ಲೂ ಬೆಲೆ ನಿಗದಿ ಮಾಡಲಾಗುತ್ತದೆ. ಈ ನಿಟ್ಟನಿಂದ ನೋಡಿದರೆ ಮಧುಗಿರಿಯ ಜಮೀನುಗಳಿಗಿಂತ ತುಮಕೂರಿನ ಇಂಡಸ್ಟ್ರಿಯಲ್ ಏರಿಯಾದ ಮಗ್ಗುಲಲ್ಲೇ ಇರುವ ನರಸಾಪುರದ ಜಮೀನುಗಳಿಗೆ ಹೆಚ್ಚು ಬೆಲೆ ನಿಗದಿಪಡಿಸಬೇಕು. ಆದರೆ ಮೊನ್ನೆಮೊನ್ನೆಯವರೆಗೂ


ಪವರ್ ಗ್ರಿಡ್ ಸ್ಥಾವರವನ್ನು ತುಮಕೂರಿನಿಂದ ಮಧುಗಿರಿಗೆ ಸ್ಥಳಾಂತರಿಸಬೇಕೆಂದು ಪ್ರತಿಭಟನೆ


ಪವರ್ ಗ್ರಿಡ್ ಸ್ಥಾವರವನ್ನು ತುಮಕೂರಿನಿಂದ ಮಧುಗಿರಿಗೆ ಸ್ಥಳಾಂತರಿಸಬೇಕೆಂದು ಪ್ರತಿಭಟನೆ ನಡೆಸುತ್ತಿರುವ ಭಾರತೀಯ ಕೃಷಿಕ ಸಮಾಜದ ಜಿಲ್ಲಾ ಯುವ ಘಟಕ

ಸರ್ಕಾರಿ ದಾಖಲೆಗಳ ಪ್ರಕಾರ ಯೋಜನೆ ನಡೆಯುತ್ತಿದ್ದುದು ಮಧುಗಿರಿಯಲ್ಲಾದ್ದರಿಂದ ಸ್ವಾಧೀನ ಭೂಮಿಗೆ ದರವನ್ನೂ ಮಧುಗಿರಿ ಜಮೀನು ಮೌಲ್ಯದಲ್ಲೇ ನಿಗದಿಪಡಿಸಲಾಗಿದೆ!

ಅಷ್ಟಕ್ಕೂ ಮಧುಗಿರಿಯಿಂದ ವಸಂತನರಸಾಪುರಕ್ಕೆ ಯೋಜನೆಯನ್ನು ವರ್ಗಾಯಿಸಿರುವುದಾಗಿ ಅಧಿಕಾರಿಗಳು ಅನುಮತಿ ಪಡೆದುಕೊಂಡಿರೋದು ಅವರ ಕರ್ತವ್ಯ ಕಾಳಜಿಯಿಂದ ಅಲ್ಲ, ರಾಜ್ಯ ಮಾನವಹಕ್ಕು ಆಯೋಗದ ಒತ್ತಡದಿಂದ. ಭೌತಿಕವಾಗಿ ವಸಂತನರಸಾಪುರದಲ್ಲಿ ಯೋಜನೆ ಕಾರ್ಯಗತವಾಗುತ್ತಿದ್ದರೂ ದಾಖಲೆಪತ್ರಗಳಲ್ಲಿ ಮಧುಗಿರಿ ವಿಳಾಸವನ್ನು ಉಲ್ಲೇಖಿಸಿ ರೈತರಿಗೆ ಅನ್ಯಾಯವೆಸಗಲಾಗುತ್ತಿದೆ ಎಂಬ ಒತ್ತಡ ಹೆಚ್ಚಾದ ನಂತರ ರಾಜ್ಯ ಮಾನವ ಹಕ್ಕು ಆಯೋಗದ ನ್ಯಾಯಮೂರ್ತಿ ಸಿ.ಜಿ.ಹುನಗುಂದ್, ಇಂಧನ ಇಲಾಖೆಯ ಕಾರ್ಯದರ್ಶಿಯವರಿಂದ ವರದಿ ಪಡೆದು '3 ತಾಲ್ಲೂಕಿನ ಕೃಷಿಕರಿಗೆ ಅನ್ಯಾಯವಾಗದ ರೀತಿಯಲ್ಲಿ ಕ್ರಮ ಜರುಗಿಸಿ 6 ತಿಂಗಳಲ್ಲಿ ಆಯೋಗಕ್ಕೆ ವರದಿ ಸಲ್ಲಿಸಬೇಕು' ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದ್ದರು. ಆಮೇಲಷ್ಟೆ ಅಧಿಕಾರಿಗಳು ಚುರುಕುಗೊಂಡದ್ದು.


ಇನ್ನು ಪವರ್‌ಗ್ರಿಡ್ ಕಾರ್ಪೊರೇಷನ್‌ನ ಭೂಸ್ವಾಧೀನ ವೈಖರಿಯೂ ರೈತದ್ರೋಹಿಯಾಗಿವೆ. ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಸೂಕ್ತ ಪರಿಹಾರ ಮೊತ್ತ ಗೊತ್ತುಮಾಡಿ, ರೈತರಿಂದ ನಿರಪೇಕ್ಷಣೆಯನ್ನು ಪಡೆದು, ನೋಟಿಸ್ ಜಾರಿಗೊಳಿಸಿ ನಂತರ ಸ್ವಾಧೀನಪಡಿಸಿಕೊಳ್ಳಬೇಕು. ಆದರೆ ರೈತರ ಮೇಲೆ ದೌರ್ಜನ್ಯ ನಡೆಸಿ, ಪೊಲೀಸ್ ಸಹಕಾರದೊಂದಿಗೆ ಹಲವು ಕಡೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ರೈತ ಸಂಘಟನೆಗಳು ಆರೋಪಿಸುತ್ತಿವೆ. ಈ ಮೊದಲು ನೀಲನಕ್ಷೆಯ ಪ್ರಕಾರ ಹೈಟೆನ್ಷನ್ ಲೈನುಗಳು ಕೆಐಎಡಿಬಿ ಕೆಲ ಪ್ರದೇಶಗಳ ಮೇಲೆ ಹಾದುಹೋಗಬೇಕಿತ್ತು. ಆದರೆ ಅಲ್ಲಿರುವ ಕೈಗಾರಿಕೋದ್ಯಮಿಗಳಿಗೆ ತೊಂದರೆಯಾಗಬಾರದೆನ್ನುವ ಕಾರಣಕ್ಕೆ ಗೂಗಲ್ ನಕ್ಷೆಯನ್ನೆ ಬದಲಾಯಿಸಿ ಕೆಐಎಡಿಬಿ ಆಸುಪಾಸಿನಲ್ಲಿ ಟವರ್‌ಗಳೇ ಬಾರದಂತೆ ಪವರ್ ಲೈನುಗಳನ್ನು ಫಲವತ್ತಾದ ತೋಟದ ಜಮೀನುಗಳತ್ತ ತಿರುಗಿಸಲಾಗಿದೆ ಎನ್ನುವ ಆರೋಪವು ಕೇಳಿಬರುತ್ತಿವೆ. ದೊಡ್ಡಮಟ್ಟದ ಹೆವಿಲೈನ್ ಹಾದುಹೋಗುವ ಕೆಳಗಡೆ ರೈತರ ತೋಟಗಳನ್ನು ಯೋಜನೆಯಿಂದ ಕೈಬಿಡಲಾಗಿತ್ತು. ಆದರೆ ಈಗ ಕಾಂಪ್ಯಾಟ್ ಹೆಸರಿನಲ್ಲಿ ಫಲವತ್ತಾದ ತೋಟದ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ, ಅದೂ ಸೂಕ್ತ ಬೆಲೆ ನೀಡದೆ. ಅಂದಹಾಗೆ, ಯಾವುದೇ ಸರ್ಕಾರಿ ಉದ್ದೇಶಕ್ಕಾಗಿ ಜಮೀನುಗಳನ್ನು ವಶಪಡಿಸಿಕೊಳ್ಳುವ ಮುಂಚೆ ಸ್ಥಳೀಯ ತಹಸೀಲ್ದಾರ್‌ರನ್ನು ಒಳಗೊಂಡ ತಾಲ್ಲೂಕು ಸಮಿತಿ ಜಮೀನುಗಳನ್ನು ಪರಿಶೀಲಿಸಿ ಪಂಚನಾಮೆ ಮಾಡಿ ಭೂಮಿಗೆ ಜೆಎಂಸಿ ಸರ್ಟಿಫಿಕೇಟ್ ನೀಡಬೇಕಾಗುತ್ತದೆ. ಆದರೆ ಈ ನಿಯಮಗಳನ್ನೆಲ್ಲ ಇಲ್ಲಿ ಗಾಳಿಗೆ ತೂರಿ ರೈತರ ಶೋಷಣೆ ಮಾಡಲಾಗುತ್ತಿದೆ.


ವಿಪರ್ಯಾಸವೆಂದರೆ ಜಿಲ್ಲೆಯ ರೈತರು ಇಷ್ಟೆಲ್ಲ ಸಂಕಟಕ್ಕೆ ತುತ್ತಾಗುತ್ತಿದ್ದರೂ ತುಮಕೂರಿನ ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರರಾಗಲಿ, ಮಾಜಿ ಸಂಸದ ಜಿ.ಎಸ್.ಬಸವರಾಜ ಆಗಲಿ ಮತ್ತು ಸ್ಥಳೀಯ ಶಾಸಕರಾದ ಸುರೇಶ್‌ಗೌಡ, ರಫೀಕ್ ಅಹಮ್ಮದ್‌ರಾಗಲಿ ಅವರ ನೆರವಿಗೆ ಬರುತ್ತಿಲ್ಲ. ಇತ್ತೀಚೆಗೆ ಸಂಸದ ಮುದ್ದಹನುಮೇಗೌಡ ಮಾತನಾಡಿದ್ದು, ನಿಮ್ಮ ಜೊತೆ ಇರುತ್ತೇನೆ ಅಂತ ಶಾಸಕ ಸುಧಾಕರ್ ಲಾಲ್ ಆಶ್ವಾಸನೆ ನೀಡಿದ್ದು ಬಿಟ್ಟರೆ ಯಾವೊಬ್ಬ ಜನಪ್ರತಿನಿಧಿಯೂ ಕನಿಷ್ಠಪಕ್ಷ ತಮ್ಮ ಮಾತನ್ನೂ ಖರ್ಚು ಮಾಡುತ್ತಿಲ್ಲ. ಈ ಸ್ಥಾವರವನ್ನು ಸ್ಥಳಾಂತರಿಸಬೇಕೆಂದು ನವದೆಹಲಿಯ ಭಾರತೀಯ ಕೃಷಿಕ ಸಮಾಜದ ಯುವ ಘಟಕ ರಾಜ್ಯಾಧ್ಯಕ್ಷ ಶಿವನಗೌಡ ಪಾಟೀಲ್, ಜಿಲ್ಲಾಧ್ಯಕ್ಷ ಜಗದೀಶಯ್ಯ, ಮುಖಂಡರಾದ ಚೇತನ್, ಎಬಿ ಸುರೇಶ್, ರಾಜಣ್ಣ, ಡಮರುಗ ಉಮೇಶ್ ನೇತೃತ್ವದಲ್ಲಿ ಸಾಕಷ್ಟು ಹೋರಾಟಗಳೂ ನಡೆಯುತ್ತಿವೆ. ರೈತರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘವೂ ಒತ್ತಾಯಿಸಿ ಪ್ರತಿಭಟನೆ ನಡೆಸಿದೆ. ಆದರೂ ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಬಂಡವಾಳಿಗರ ಅಂಗಳ ಬಿಟ್ಟು 'ಅಚ್ಛೇ ದಿನ್'ಗಳು ರೈತರ ಪಟ್ಟಿಯತ್ತ ಯಾವಾಗ ಬರುತ್ತವೋ ಗೊತ್ತಿಲ್ಲ!

■ ಅನಿಲ್ ಕುಮಾರ್ ಚಿಕ್ಕದಾಳವಟ್ಟಿ

ಮರಿಗೆ ಬೇಲ್ ಸಿಕ್ತು

ಸಿದ್ದು ಆಪ್ತನೆಂಬ ಪಟ್ಟವೂ ಕಳಚಿಬಿತ್ತು





ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಸಿ.ಶಿಖಾ ಕರ್ತವ್ಯಕ್ಕೆ ಅಡ್ಡಿಪಡಿಸಿ, ಧಮಕಿ ಹಾಕಿದ್ದ ಆರೋಪದ ಮೇಲೆ ಜೈಲು ಪಾಲಾಗಿದ್ದ ಮೈಸೂರು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಕೆ.ಮರೀಗೌಡನಿಗೆ ಕೊನೆಗೂ ಜಾಮೀನು ಸಿಕ್ಕಿದೆ. 'ಮರೀಗೌಡ ಜಿಲ್ಲಾಧಿಕಾರಿಗೆ ಅವಾಜ್ ಹಾಕಿದನಂತೆ' ಎಂದು ಆರಂಭವಾದ ಚರ್ಚೆ ತಲೆಬಾಲ ಬೆಳೆದು ಒಂದೂವರೆ ತಿಂಗಳು ಮೀಡಿಯಾಗಳಿಗೆ ಇನ್ನಿಲ್ಲದಂತೆ ಆಹಾರ ಒದಗಿಸಿದ ಮರೀಗೌಡ ರಾಜಕಾರಣದಲ್ಲಿ ಹೆಸರು ಮಾಡಿದ್ದಕ್ಕಿಂತ ಹೆಚ್ಚು ಪಬ್ಲಿಸಿಟಿ ಗಿಟ್ಟಿಸಿಕೊಂಡ.

ತಹಸೀಲ್ದಾರ್ ನವೀನ್ ಜೋಸೆಫ್ ವರ್ಗಾವಣೆ ವಿಚಾರದಲ್ಲಿ ಶಿಖಾ ಮತ್ತು ಮರೀಗೌಡ ನಡುವೆ ಶುರುವಾದ ಜಟಾಪಟಿ ಜುಲೈ 3 ರಂದು ಮೈಸೂರಿನ ಸರ್ಕಾರಿ ವಸತಿಗೃಹದಲ್ಲಿ ಅತಿರೇಕಕ್ಕೆ ಹೋಗಿ ತಲುಪಿತ್ತು. ಮರಿಗೌಡ ಹಾಗೂ ಆತನ ಬೆಂಬಲಿಗರು ತಾನು ಹೋಗುತ್ತಿದ್ದ ಕಾರು ತಡೆದು ದಾಂಧಲೆ ನಡೆಸಿದರು ಅಂತ ನಜರ್‌ಬಾದ್ ಠಾಣೆಯಲ್ಲಿ ಶಿಖಾ ಮೇಡಂ ದೂರು ದಾಖಲಿಸಿದ್ದೇ ತಡ, ಮರೀಗೌಡನ ಹೆಗಲಿಗೆ ಶನಿ ಏರಿದ. ಬಂಧನದ ಭೀತಿಯಿಂದ ತಲೆಮರೆಸಿಕೊಂಡಿದ್ದ ಮರೀಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವರ್ಚಸ್ಸನ್ನೂ ಹಾಳುಗೆಡವಿದ್ದ.


ನಾಪತ್ತೆ ಸೃಷ್ಟಿಸಿದ ಮುಜುಗರ

ಈ ಮೊದಲು ಮರೀಗೌಡನನ್ನು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಎಂದು ಗುರುತಿಸಲಾಗುತ್ತಿತ್ತು. ಆದರೆ ಈ ಪ್ರಕರಣದ ತರುವಾಯ ಆತನನ್ನು ಸಿದ್ದರಾಮಯ್ಯನವರ ಆಪ್ತ ಅಂತ ಟ್ಯಾಗ್ ಮಾಡಲಾಯ್ತು. ವಿರೋಧ ಪಕ್ಷಗಳಿಗೆ, ಮಾಧ್ಯಮಗಳಿಗೆ ಹಬ್ಬವೋ ಹಬ್ಬ. ಡಿಸಿ ಶಿಖಾ ಅವರಿಗೆ ಆವಾಜ್ ಹಾಕಿದ ಎಂದೋ, ಪೊಲೀಸರ ಕೈಗೆ ಸಿಗದೆ ನಾಪತ್ತೆಯಾದ ಎಂದೋ, ಪೊಲೀಸರು ಆತನನ್ನು ಶೀಘ್ರವಾಗಿ ಬಂಧಿಸಲಿಲ್ಲ ಎಂದೋ, ಯಾವಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಿಂದೆ ಸುಳಿದಾಡುತ್ತಿದ್ದ ಎಂದೋ, ಕಾಂಗ್ರೆಸ್ ಮುಖಂಡ ಎಂದೋ ಆತ ಸಿದ್ದರಾಮಯ್ಯನವರ ಆಪ್ತ ಎಂದು ತಳಕು ಹಾಕಲಾಯ್ತು. ಬಾಯಿಹರುಕ ಬಿಜೆಪಿಯವರಂತೂ "ಖುದ್ದು ಸಿದ್ದರಾಮಯ್ಯನೇ ಮರೀಗೌಡ ಬೆನ್ನಿಗೆ ನಿಂತಿರೋದರಿಂದ ಈ ರೀತಿ ಆಡುತ್ತಿದ್ದಾನೆ" ಅಂತ ತೀರ್ಪು ನೀಡಿಬಿಟ್ಟರು.

ಡಿಸಿ ಶಿಖಾ ಒಳ್ಳೆಯ ಅಧಿಕಾರಿ ಎಂಬ ಕಾರಣಕ್ಕೆ ಈ ವಿಷಯದಲ್ಲಿ ಜನ ಒಂದಷ್ಟು ಪ್ರಾಮಾಣಿಕ ಬೆಂಬಲ ವ್ಯಕ್ತಪಡಿಸಿದ್ದು ನಿಜ. ಆದರೆ ಕೆಲ ಸಂಘಟನೆಗಳ ಪ್ರತಿಭಟನೆಗಳು ಲಾಭದ ಉದ್ದೇಶದಿಂದ ಬೀದಿಗಿಳಿದರೆ ಬಿಜೆಪಿ ಮತ್ತಿತರ ಹಿಂದೂಪರ ಸಂಘಟನೆಗಳಿಗೆ ಮರೀಗೌಡನಿಗೆ ಶಿಕ್ಷೆಯಾಗುವುದಕ್ಕಿಂತ, ಶಿಖಾರಿಗೆ ಸ್ಥೈರ್ಯ ತುಂಬುವುದಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರದ ಮೇಲೆ ಗೂಬೆ ಕೂರಿಸುವುದೇ ಅಜೆಂಡಾವಾಗಿತ್ತು. ಹಾಗಾಗಿಯೇ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ ಮರೀಗೌಡ ಸಿದ್ದರಾಮಯ್ಯನ ಆಪ್ತ ಅಂತೆಲ್ಲ ಬೊಬ್ಬಿರಿಯಲು ಶುರು ಮಾಡಿದರು. ಇನ್ನಾತ ನಾಪತ್ತೆಯಾದಾಗಲೂ ಸಿದ್ದರಾಮಯ್ಯನೇ ಬಚ್ಚಿಟ್ಟಿದ್ದಾರೆ, ಅವನನ್ನು ಬಂಧಿಸದಂತೆ ಪೊಲೀಸರಿಗೆ ಅಡ್ಡಗಾಲು ಹಾಕುತ್ತಿದ್ದಾರೆ ಅಂತೆಲ್ಲಾ ಪುಂಗಿ ಊದಿದರು. ಅಸಲೀ ಸಂಗತಿಯೇನೆಂದರೆ ಮರೀಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹತ್ತಿರದಿಂದ ಬಲ್ಲವನಾಗಿದ್ದ ಎಂಬುದರ ಹೊರತಾಗಿ ಆತ ಅವರ ಬಲಗೈ ಬಂಟ, ಪರಮಾಪ್ತ ಎಂಬುದೆಲ್ಲ ಶುದ್ಧ ಸುಳ್ಳು. ಅಂತಹ ಪುಕಾರುಗಳೇನಾದರು ಇದ್ದರೆ ಅವು ಖುದ್ದು ಮರೀಗೌಡ ತನ್ನ ಇಮೇಜಿಗೋಸ್ಕರ ಸಾಕಿಕೊಂಡಿದ್ದೇ ಹೊರತು ಸಿದ್ದರಾಮಯ್ಯನ ಸಾನಿಧ್ಯದಿಂದಲ್ಲ.

ಇತ್ತ ಸಿದ್ದರಾಮಯ್ಯನವರು "ಮರೀಗೌಡನನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ" ಅಂತ ಅದೆಷ್ಟೇ ಬಾರಿ ಹೇಳಿದರೂ ಬಿಜೆಪಿಯವರಿಗೆ ಅದು ಬೇಕಾಗಿರಲಿಲ್ಲ. ಸತ್ಯ ಅರ್ಥವಾಗಬೇಕಾದರೆ ನಾಪತ್ತೆಯಾಗಿದ್ದ ಮರೀಗೌಡ ಮತ್ತೆ ಪತ್ತೆಯಾಗಬೇಕಿತ್ತು ಅಥವಾ ಪೊಲೀಸರು ಆತನನ್ನು ಬಂಧಿಸಬೇಕಾಗಿತ್ತು.


ಆಪ್ತ ಪದ ಕಿತ್ತೊಗೆದ ಸಿದ್ದು ಪುತ್ರ ರಾಕೇಶ್



ರಾಕೇಶ್

ರಾಕೇಶ್ ಸಿದ್ದರಾಮಯ್ಯ ಅವರು ತಮ್ಮ ಕೊನೆಯ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಾ "ಯಾರ್ರಿ ಅವ್ನು ಮರೀಗೌಡ, ಅವ್ನೇನು ಮುಖ್ಯಮಂತ್ರಿಗಳ ಆಪ್ತನೂ ಅಲ್ಲ, ಏನೂ ಅಲ್ಲ. ಅವ್ನು ತಪ್ಪು ಮಾಡಿದ್ರೆ ಅವ್ನು ಎಲ್ಲೆ ಇದ್ರು ಬಂಧಿಸಿ ಕಾನೂನು ಕ್ರಮಕೈಗೊಳ್ಳಲಿ" ಎಂದಿದ್ದರು. ಈ ಹೇಳಿಕೆ ವಿರೋಧ ಪಕ್ಷಗಳ ಬಾಯಿ ಬಂದ್ ಆಗುವಂತೆ ಮಾಡಿತ್ತು.

ಈ ಘಟನೆ ನಂತರ ರಾಕೇಶ್ ಸಿದ್ದರಾಮಯ್ಯ ಅವರು ಅನಿರೀಕ್ಷಿತವಾಗಿ ಬ್ರಸ್ಸೆಲ್ಸ್ ಆಸ್ಪತ್ರೆಯಲ್ಲಿ ನಿಧನರಾದರು. ಈ ಅನಿರೀಕ್ಷಿತ ಘಟನೆಯಿಂದ ಜನ ಸಿದ್ದರಾಮಯ್ಯರನ್ನು ಕಂಡು ಮರುಗಿದರು. ರಾಕೇಶ್ ಅಂತಿಮ ದರ್ಶನಕ್ಕೆ ಕಾದುಕುಳಿತರು. ಈ ಸಂದರ್ಭದಲ್ಲಿ ಎಲ್ಲರ ತಲೆಯೊಳಗೂ ಕೊರೆಯುತ್ತಿದ್ದ ವಿಷಯವೆಂದರೆ ರಾಕೇಶ್ ಸಿದ್ದರಾಮಯ್ಯ ಅಂತಿಮ ದರ್ಶನಕ್ಕೆ ಮರೀಗೌಡ ಬರುತ್ತಾನೋ ಇಲ್ಲವೋ ಎಂಬುದು. ಕೆಲವರು ಮರೀಗೌಡ ಸಿದ್ದರಾಮಯ್ಯ ಆಪ್ತ ಆದ್ದರಿಂದ ಇಂತಹ ಸಂದರ್ಭದಲ್ಲಿ ಎಷ್ಟೇ ಕಷ್ಟವಾದರೂ ರಾಕೇಶ್ ಅಂತಿಮ ದರ್ಶನಕ್ಕೆ ಬಂದೇ ಬರುತ್ತಾನೆ ಎಂದು ಮಾತನಾಡಿಕೊಂಡರು. ಕೆಲವರು ಬರುತ್ತಾನೊ ಇಲ್ಲವೋ ಎಂಬ ಕುತೂಹಲದಿಂದ ಕಾಯುತ್ತಿದ್ದರು. ಮತ್ತೆ ಕೆಲವರು ರಾಕೇಶ್ ಸಿದ್ದರಾಮಯ್ಯ ಅವರ ಅಂತ್ಯಕ್ರಿಯೆ ನಡೆಸಲು ನಿರ್ಧರಿಸಿದ್ದ ಟಿ.ಕಾಟೂರಿನ ಅವರ ತೋಟದಲ್ಲಿ ಮುಂಚೆಯೇ ಹೋಗಿ ರಾಕೇಶ್ ದರ್ಶನ ಪಡೆಯಲು ಅಡಗಿ ಕುಳಿತ್ತಿದ್ದಾನೆ, ಆದ್ದರಿಂದಲೇ ತೋಟದೊಳಗೆ ಕುಟುಂಬದವರು, ಆಪ್ತರಿಗೆ ಮಾತ್ರ ಪ್ರವೇಶ, ಮಾಧ್ಯಮದವರಿಗೆ ಪ್ರವೇಶ ನಿರಾಕರಿಸಿದ್ದಾರೆ ಎಂದು ಮಾತನಾಡಿಕೊಂಡರು. ಆದರೆ ಎಲ್ಲರ ನಿರೀಕ್ಷೆ ಹುಸಿಯಾಗಿತ್ತು. ಮರೀಗೌಡ ರಾಕೇಶ್ ಅಂತಿಮ ದರ್ಶನ ಪಡೆಯಲು ಬರಲೇ ಇಲ್ಲ.




ಡಿಸಿ ಶಿಖಾ


ಹೀಗೆ ಮಾತನಾಡಿಕೊಳ್ಳುವವರಿಗೆ ಒಂದು ತಿಳಿಯಬೇಕಿತ್ತು. ಮರೀಗೌಡ ಸಿದ್ದರಾಮಯ್ಯ ಅವರ ಅಷ್ಟು ಆಪ್ತ ಎನಿಸಿಕೊಂಡಿದ್ದರೆ, ರಾಕೇಶ್ ಮೇಲೆ ಅಪಾರ ಪ್ರೀತಿ ಇದ್ದರೆ ಬಂಧನವಾದರೂ ಸರಿಯೇ ಎಂದು ಅಂತಿಮ ದರ್ಶನಕ್ಕೆ ಬಂದೇ ಬರುತ್ತಿದ್ದ. ಆದರೆ ಆತ ಹಾಗೆ ಮಾಡಲಿಲ್ಲ. ಬದಲಿಗೆ ನ್ಯಾಯಾಲಯದಲ್ಲಿ ರಾಕೇಶ್ ಸಿದ್ದರಾಮಯ್ಯ ಅವರ ಅಂತಿಮ ದರ್ಶನ ಪಡೆಯಲು ಅನುಮತಿ ನೀಡಿ ಎಂದು ವಕೀಲರ ಮೂಲಕ ಅರ್ಜಿ ಗುಜರಾಯಿಸಿದ. ಕುಚೋದ್ಯವೆಂದರೆ ಅಂತದ್ದೊಂದು ಅರ್ಜಿ ಸಲ್ಲಿಸಲು ಆತ ಬಂಧನವಾಗಿ ಜೈಲಿನಲ್ಲೇನೂ ಇರಲಿಲ್ಲ. ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಲು ಯಾರ ಅನುಮತಿಯೂ ಬೇಕಿರಲಿಲ್ಲ. ಸಾರ್ವಜನಿಕವಾಗಿ ಪ್ರತ್ಯಕ್ಷನಾದರೆ ಬಂಧಿಸಬಹುದೆಂಬ ಭೀತಿಗೆ ಹಾಗೆ ಅರ್ಜಿ ಸಲ್ಲಿಸಿದ್ದ. ಇಲ್ಲೇ ತಿಳಿಯುತ್ತದೆ ಮರೀಗೌಡನಿಗೆ ತನ್ನನ್ನು ಕಾಪಾಡಿಕೊಳ್ಳುವ ಉದ್ದೇಶವಿತ್ತು ಎಂದು. ಮರೀಗೌಡನಿಗೆ ಬೇಕಾಗಿದ್ದುದು ಆ ಮೂಲಕ ಕೋರ್ಟ್ ಅನುಮತಿ ನೀಡಿದ್ದರೆ ಅಂತಿಮ ದರ್ಶನಕ್ಕೆ ಬರುತ್ತಿದ್ದೆ ಎಂಬ ಅಸಹಾಯಕತೆಯನ್ನು ತೋರಿಸುವುದಾಗಿತ್ತು. ಈ ನಾಟಕೀಯ ನಡೆ ಸಿದ್ದರಾಮಯ್ಯ ಅವರಿಗೆ ತಿಳಿಯದ್ದೇನಲ್ಲ. ಈ ಘಟನೆಯಿಂದ ಮರೀಗೌಡ ಸಿದ್ದರಾಮಯ್ಯನವರ ಆಪ್ತ ಎಂಬ ಅನಧಿಕೃತ ಬಿರುದೇ ಕಳಚಿಬಿತ್ತು. ರಾಕೇಶ್ ಸಾವು ಜನರಿಗೆ ಸತ್ಯವೊಂದನ್ನು ಅರ್ಥ ಮಾಡಿಸಿತ್ತು.

ಮರೀಗೌಡ ನಾಪತ್ತೆಯಾದ್ದರಿಂದ ಅವನಿಗಿಂತ ಹೆಚ್ಚು ಲಾಭವಾದದ್ದು ಬಿಜೆಪಿಯ ಕೇಸರಿ ಬ್ರಿಗೇಡಿಗೆ. ಅದೂ ತಾತ್ಕಾಲಿಕ ಮಟ್ಟಿಗೆ. ಆತ ನಿಜಕ್ಕೂ ಸಿದ್ದರಾಮಯ್ಯನ ಆಪ್ತನೇ ಆಗಿದ್ದಿದ್ದರೆ ಅವತ್ತೇ ಪೊಲೀಸರಿಗೆ ಶರಣಾಗಿ ಸಿದ್ದರಾಮಯ್ಯನಿಗೆ ಆಗುತ್ತಿದ್ದ ತೇಜೋವಧೆಯನ್ನು ತಪ್ಪಿಸುತ್ತಿದ್ದ. ಅಂತಹ ಆಪ್ತನ ತ್ಯಾಗಕ್ಕೆ ಮರೀಗೌಡ ಸಾಕ್ಷಿಯಾಗದೆ ಇರೋದೆ ಅವನ ಬೂಟಾಟಿಕೆ ಆಪ್ತತೆ ಮತ್ತು ಬಿಜೆಪಿಗಳು ಬೊಬ್ಬಿರಿದ ತೌಡು ಪ್ರತಿಭಟನೆಗಳು ಬೆತ್ತಲಾಗುವಂತೆ ಮಾಡಿವೆ.

■ ತರ



ಕೊಡಗು: ಕಾಂಗ್ರೆಸ್ ಪಕ್ಷದ ಶೋಚನೀಯ ಸ್ಥಿತಿ




ಹರೀಶ್ ಬೋಪಣ್ಣ

ಕಾಂಗ್ರೆಸ್ ಪಕ್ಷಕ್ಕೆ ಕೊಡಗಿನಲ್ಲಿ ಮತ ನೀಡುವ ವರ್ಗಕ್ಕೆ ಅಧಿಕಾರ ಇಲ್ಲ, ಅಧಿಕಾರವೇನಿದ್ದರೂ ಬಿಜೆಪಿಗೆ ಮತ ನೀಡುವ ವರ್ಗದ ಕೈಯಲ್ಲಿ, ಇದರಿಂದಾಗಿ ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ನಿರಂತರವಾಗಿ ಅವನತಿಯತ್ತ ಸಾಗುತ್ತಿದೆ. ಪಕ್ಷವನ್ನು ಕಟ್ಟಬೇಕು ಅಥವ ಬೆಳೆಸಬೇಕು ಎಂಬ ಹಂಬಲ ಕಾಂಗ್ರೆಸ್ ನಾಯಕತ್ವದಲ್ಲಿ ಇಲ್ಲ, ಆದ್ದರಿಂದ ಬಿಜೆಪಿ ಪಕ್ಷದ ಒಡಕಿನ ಲಾಭವನ್ನು ಕಾಂಗ್ರೆಸ್ ಪಕ್ಷಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ, ಎಂದೂ ಕೇಳರಿಯದ ಸ್ಥಿತಿಯಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ಇದೆ. ಪಕ್ಷಕ್ಕೆ ಒಬ್ಬ ಕಾಯಂ ಅಧ್ಯಕ್ಷ ಇಲ್ಲ, ಟಿಪ್ಪು ಗಲಭೆಯ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದ ಬಿ.ಟಿ. ಪ್ರದೀಪ್‌ರವರು, ಕಾರ್ಯಕ್ರಮಕ್ಕೆ ಅಸಹಕಾರ ನೀಡಿದ್ದು ಮಾತ್ರವಲ್ಲದೆ, ಕಾರ್ಯಕ್ರಮಕ್ಕೆ ಗೈರುಹಾಜರಾಗಿದ್ದರಿಂದ ಅವರ ವಿರುದ್ಧ ಸಾರ್ವತ್ರಿಕವಾಗಿ ಅಸಮಾಧಾನ ಭುಗಿಲೆದ್ದು, ಜಿಲ್ಲೆಗೆ ಆ ಸಂದರ್ಭದಲ್ಲಿ ಆಗಮಿಸಿದ್ದ ಕೆ.ಪಿ.ಸಿ.ಸಿ. ಅಧ್ಯಕ್ಷರೂ ಮತ್ತು ಆಗಷ್ಟೇ ಗೃಹ ಸಚಿವರಾಗಿ ನೇಮಕಗೊಂಡಿದ್ದ ಡಾ. ಜಿ. ಪರಮೇಶ್ವರ್‌ರವರು, ಜನರ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶವನ್ನು ಖುದ್ದು ವೀಕ್ಷಿಸಿ, ಅವರಿಗೆ ರಾಜೀನಾಮೆ ನೀಡಲು ಸೂಚಿಸಿದ್ದರು.

ಅಧ್ಯಕ್ಷರು ರಾಜೀನಾಮೆ ನೀಡಿದಾಗ, ಸಾಧಾರಣವಾಗಿ ಉಪಾಧ್ಯಕ್ಷರು ಹಂಗಾಮಿ ಅಧ್ಯಕ್ಷರಾಗಿರುತ್ತಾರೆ. ಕೆ.ಪಿ.ಸಿ.ಸಿ.ಯಿಂದ ಯಾವುದೇ ನಿರ್ದೇಶನ ಈ ಬಗ್ಗೆ ಬಂದಿರಲಿಲ್ಲ, ಹಾಗಾಗಿ ನಿಯಮಾವಳಿಯಂತೆ ಹಿರಿಯ ಉಪಾಧ್ಯಕ್ಷರಿಗೆ ಅಧ್ಯಕ್ಷ ಸ್ಥಾನವನ್ನು ವಹಿಸಿ ಬಿಡಬೇಕಾಗಿತ್ತು, ಆದರೆ ಬಿ.ಟಿ. ಪ್ರದೀಪ್ ಹಾಗೆ ಮಾಡದೆ, ಟಿ.ಪಿ. ರಮೇಶ್‌ರವರಿಗೆ ಅಧಿಕಾರವನ್ನು ಹಸ್ತಾಂತರಿಸಿದರು. ಇದನ್ನು ಕೆ.ಪಿ.ಸಿ.ಸಿ.ಯೂ ಪ್ರಶ್ನಿಸಲಿಲ್ಲ, ಕೊಡಗಿನ ಹಿರಿಯ ನಾಯಕರೂ ಪ್ರಶ್ನಿಸಲಿಲ್ಲ, ಕಾಂಗ್ರೆಸ್ ಕಾರ್ಯಕರ್ತರು ಮಾತ್ರ ಗೊಣಗುತ್ತಾ ತಮ್ಮ ಪಕ್ಷದ ದುಃಸ್ಥಿತಿಗೆ ಮರುಗಿಕೊಂಡು ಇದ್ದರು. ಬಿ.ಟಿ. ಪ್ರದೀಪ್ ಆಗಲಿ, ಟಿ.ಪಿ. ರಮೇಶ್ ಆಗಲಿ ಬಿಜೆಪಿಯ ಜೊತೆ ಸಂಘರ್ಷಕ್ಕೆ ಯಾವುದೇ ಸಂದರ್ಭದಲ್ಲಿ ಸಿದ್ಧರಿಲ್ಲ, ಬಿಜೆಪಿಯ ಆಟಾಟೋಪವನ್ನು ಸಹಿಸಿಕೊಂಡು ಬರುತ್ತಿರುವ ವ್ಯಕ್ತಿಗಳು ಇವರು.

ಇದಕ್ಕೆ ಪೂರಕವಾಗಿ ಕೊಡಗು ಜಿಲ್ಲೆಯಲ್ಲಿ ಉಸ್ತುವಾರಿ ಸಚಿವರ ಬದಲಾವಣೆ ಆಗುತ್ತಲೇ ಇದೆ. ಮೊದಲು ಡಾ. ಹೆಚ್.ಸಿ. ಮಹದೇವಪ್ಪ ಉಸ್ತುವಾರಿ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಸ್ವಂತಿಕೆಯನ್ನು ಉಳಿಸಿಕೊಂಡು, ಬಾಲಬಡುಕರ ಕಾಟವಿಲ್ಲದೆ, ಜಿಲ್ಲೆಯಲ್ಲಿ ಒಂದಷ್ಟು ಕೆಲಸ ಕಾರ್ಯಗಳು ಆಗುತ್ತಿತ್ತು, ವಿಚಾರಗಳನ್ನು ಅರಿತುಕೊಳ್ಳಲು ಅವರು ಪ್ರಯತ್ನವನ್ನು ನಡೆಸುತ್ತಿದ್ದರು. ಜನಸಾಮಾನ್ಯರ ಜೊತೆಯಲ್ಲಿ ಬೆರೆಯುವ ಮತ್ತು ಉತ್ತಮವಾದ ಚಿಂತನೆಗಳು ಇದ್ದಂತಹ ವ್ಯಕ್ತಿಯಾಗಿದ್ದರು ಡಾ. ಮಹದೇವಪ್ಪ.

ಆ ನಂತರ ಕೆ.ಜೆ. ಜಾರ್ಜ್‌ರವರನ್ನು ಕೊಡಗಿನ ಉಸ್ತುವಾರಿ ಸಚಿವರಾಗಿಸಲಾಯಿತು. ಕೊಡಗಿನಲ್ಲಿಯೇ ವಿದ್ಯಾಭ್ಯಾಸವನ್ನು ಮುಗಿಸಿದ್ದ ಕಾರಣ ಅವರಿಗೆ ಕೊಡಗಿನ




ಮಹದೇವಪ್ಪ


ನಂಟು ಇತ್ತು, ಆದರೆ ಜನರ ಮತ್ತು ಅವರ ನಡುವೆ ಬಹಳ ಅಂತರ ಇತ್ತು, ಅವರು ಕೊಡಗಿಗೆ ಬಂದಾಗ ಅವರ ಜೊತೆ ಜಿಲ್ಲೆಯ ಮೂಲದ, ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿರುವ ವ್ಯಕ್ತಿಯೊಬ್ಬರು ಬರುತ್ತಿದ್ದರು. ಕೆಲಸ ಕಾರ್ಯಗಳು ಅವರ ಮೂಲಕವೇ ಆಗಬೇಕಾಗಿತ್ತು, ಇವೆಲ್ಲದರ ನಡುವೆ ತಾನು ಕೊಡಗಿನವನು, ಅದಕ್ಕಾಗಿ ಕೊಡಗಿನ ಹಲವಾರು ಸಮಸ್ಯೆಗಳನ್ನು ಬಗೆಹರಿಸಬೇಕು ಎಂಬ ಹಂಬಲ ಜಾರ್ಜ್‌ರವರಲ್ಲಿ ಇತ್ತು, ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನು ಕೂಡ ಜಾರ್ಜ್ ಮಾಡಿದ್ದರು. ಆದರೆ ಹಲವಾರು ಸಮಸ್ಯೆಗಳು ಚರ್ಚೆಯ ಹಂತದಲ್ಲಿಯೇ ಉಳಿದವು.

ಇದಾದನಂತರ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ದಿನೇಶ್ ಗುಂಡೂರಾವ್‌ರವರು ನೇಮಕಗೊಂಡರು. ಅದೇ ಸಮಯಕ್ಕೆ ಟಿಪ್ಪು ಜನ್ಮ ದಿನಾಚರಣೆಯ ವಿವಾದ ತಾರಕಕ್ಕೆ ಏರಿತ್ತು, ದಿನೇಶ್ ಗುಂಡೂರಾವ್ ರಾಜ್ಯ ಸರಕಾರದ ನಿಲುವನ್ನು ಸಮರ್ಥಿಸಿಕೊಳ್ಳುವ ಬದಲು ಜಿಲ್ಲೆಯ ಬಿಜೆಪಿ ಶಾಸಕರುಗಳಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವರನ್ನು ಓಲೈಸುವುದರಲ್ಲಿಯೇ ಕಾಲ ಕಳೆದರು. ಆಗ ಅವರು ಮಾಡಿಕೊಂಡ ಎಡವಟ್ಟು ಮಡಿಕೇರಿಯ ಲಿಂಗಾಯತ ರಾಜರ ಗದ್ದುಗೆ ಇರುವ ಪ್ರದೇಶದ ವಿವಾದ.

ಮಡಿಕೇರಿಯಲ್ಲಿ ಲಿಂಗಾಯತ ಅರಸರ ಗದ್ದುಗೆ ಇದೆ. ಇದು ಪ್ರಾಚ್ಯವಸ್ತು ಇಲಾಖೆಗೆ ಸೇರಿದ ಆಸ್ತಿಯಾಗಿದೆ. ಅದರ ಒಂದು ಭಾಗದಲ್ಲಿ ಸುಮಾರು 35 ಬಡ ಕುಟುಂಬಗಳು ಅತಿಕ್ರಮಣ ಮಾಡಿಕೊಂಡು ವಾಸ ಮಾಡುತ್ತಿವೆ. ಇವರಲ್ಲಿ ಶೇ. 95ರಷ್ಟು ಅಲ್ಪಸಂಖ್ಯಾತರಾಗಿದ್ದು ಅವರನ್ನು ಅಲ್ಲಿಂದ ತೆರವುಗೊಳಿಸಬೇಕು ಎಂದು ಬಿಜೆಪಿ ಹಲವಾರು ವರ್ಷಗಳಿಂದ ಪ್ರಯತ್ನಿಸುತ್ತಿದೆ. ಕಂದಾಯ ಇಲಾಖೆಗೆ ಸೇರಿದ 19 ಎಕರೆಯಷ್ಟು ಪ್ರದೇಶದ 2



ಕೆ.ಜೆ. ಜಾರ್ಜ್



ದಿನೇಶ್ ಗುಂಡೂರಾವ್

ಎಕರೆ ಪ್ರದೇಶದಲ್ಲಿ ಈ ಗದ್ದುಗೆ ಇದ್ದು, ಪ್ರಾಚ್ಯ ವಸ್ತು ಇಲಾಖೆಗೆ 2 ಎಕರೆ ಪ್ರದೇಶವನ್ನು ಅಧಿಸೂಚನೆಯ ಮೂಲಕ ಹಸ್ತಾಂತರಿಸಲಾಗಿದೆ. ಉಳಿದ 17 ಎಕರೆ ಪ್ರದೇಶವು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವ ಪೈಸಾರಿ ಪ್ರದೇಶವಾಗಿದೆ. ಈ ಪೈಕಿ ಒಂದಷ್ಟು ಭಾಗವನ್ನು ಸರಕಾರ ಹಿಂದುಳಿದ ವರ್ಗದ ಹಾಸ್ಟೆಲ್‌ಗೆ ನೀಡಿದೆ. ಇದು ಗದ್ದುಗೆಗೆ ಪ್ರವೇಶಿಸುವ ದ್ವಾರದ ಬಲಭಾಗದಲ್ಲಿ ಇದೆ. ಮತ್ತೊಂದು ಕಡೆ ಎಡಭಾಗದಲ್ಲಿ ಸ್ವಲ್ಪ ಅಂತರದಲ್ಲಿ ಸಹಕಾರಿ ತರಬೇತಿ ಕೇಂದ್ರಕ್ಕೆ ಸ್ಥಳ ನೀಡಲಾಗಿದೆ. ಇವೆಲ್ಲವೂ ಗದ್ದುಗೆ ಪ್ರದೇಶ ಎಂದು ಕರೆಸಿಕೊಳ್ಳುವ ಪ್ರದೇಶದಲ್ಲಿಯೇ ಇವೆ.


ಸಂಘ ಪರಿವಾರಕ್ಕೆ ಮತ್ತು ಬಿಜೆಪಿಗೆ ಆ ಪ್ರದೇಶವನ್ನು ರಾಜ್ಯ ಸರಕಾರ ವಿವಿಧ ಸಂಸ್ಥೆಗಳಿಗೆ ನೀಡಿರುವುದರ ಬಗ್ಗೆ ಯಾವುದೇ ಆಕ್ಷೇಪ ಇಲ್ಲ, ಆದರೆ ಸೂರು ಇಲ್ಲದ ವ್ಯಕ್ತಿಗಳು ಅತಿಕ್ರಮಣ ಮಾಡಿಕೊಂಡು ವಾಸಿಸುತ್ತಿರುವುದು ಅವರಿಗೆ ಅಲ್ಪಸಂಖ್ಯಾತರು ಎನ್ನುವ ಕಾರಣಕ್ಕಾಗಿ ಸಹಿಸಲು ಸಾಧ್ಯವಾಗುತ್ತಿಲ್ಲ, ಈ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹಲವಾರು ವರ್ಷಗಳ ಹೋರಾಟಗಳು ನಡೆದ ನಂತರ, ರಾಜ್ಯ ಉಚ್ಚ ನ್ಯಾಯಾಲಯವು "ಅಲ್ಲಿ ವಾಸವಿರುವ ವ್ಯಕ್ತಿಗಳು ನಿರ್ಮಿಸಿಕೊಂಡಿರುವ ಮನೆಗಳಿಂದ ಗದ್ದುಗೆಗೆ ಅಪಾಯವಿದೆಯೇ ಎಂಬುದನ್ನು ಪರಿಶೀಲಿಸಬೇಕು. ಒಂದುವೇಳೆ ಅವರ ವಾಸ್ತವ್ಯದಿಂದ ಗದ್ದುಗೆಗೆ ಅಪಾಯವಿದೆ ಎಂದಾದರೆ, ಅಲ್ಲಿ ಮನೆ ಕಟ್ಟಿಕೊಂಡು ವಾಸವಿರುವವರಿಗೆ ಬದಲಿ ವ್ಯವಸ್ಥೆ ಮಾಡಿಕೊಟ್ಟು, ಅವರನ್ನು ತೆರವುಗೊಳಿಸಬೇಕು. ಇಲ್ಲದಿದ್ದರೆ ಅವರಿಗೆ ಆ ಜಾಗವನ್ನು ಮಂಜೂರು ಮಾಡಬೇಕು" ಎಂದು ತಹಸೀಲ್ದಾರರಿಗೆ ನಿರ್ದೇಶನವನ್ನು ನೀಡಿದೆ. ಸುಮಾರು ನಾಲ್ಕೈದು ವರ್ಷಗಳು ಕಳೆದರೂ ಕೂಡ, ಮಡಿಕೇರಿಯ ತಹಸೀಲ್ದಾರರು ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಚುನಾವಣೆಗಳು ಬರುವ ಸಂದರ್ಭದಲ್ಲಿ ಗದ್ದುಗೆ ಹಿತರಕ್ಷಣಾ ವೇದಿಕೆಯ ಹೆಸರಿನಲ್ಲಿ, ಮುಂದೆ ಮಡಿಕೇರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಇರಾದೆಯನ್ನು ಇಟ್ಟುಕೊಂಡಿರುವ ಮತ್ತು ಪ್ರತಾಪ ಸಿಂಹರವರ ಜೊತೆಯಲ್ಲಿ ಗುರುತಿಸಿಕೊಂಡಿರುವ ಶಾಂತೆಯಂಡ ರವಿಕುಶಾಲಪ್ಪ ಎಂಬ ವ್ಯಕ್ತಿ ಅಲ್ಲಿ ವಾಸಿಸುತ್ತಿರುವವರನ್ನು ತೆರವುಗೊಳಿಸಬೇಕು ಎಂಬ ಹೇಳಿಕೆಯನ್ನು ನೀಡುವುದು, ತಹಸೀಲ್ದಾರ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸುವುದು ಮಾಡುತ್ತಿದ್ದಾರೆ. ಇದೇ ವ್ಯಕ್ತಿ ಕೆಲವು ಸಮಯದ ಹಿಂದೆ ಮಡಿಕೇರಿ ಸಮೀಪದ ಮಕ್ಕಂದೂರು ಪ್ರದೇಶದಲ್ಲಿ ಸುಬ್ರಹ್ಮಣ್ಯ ದೇವಸ್ಥಾನದ ವಿವಾದವನ್ನು ಹುಟ್ಟು ಹಾಕಿದ್ದರು. ಖಾಸಗಿ ಜಾಗದಲ್ಲಿದ್ದ ಗುಡಿಯನ್ನು ತೆರವುಗೊಳಿಸಿ, ಮಾಲೀಕರು ಅದನ್ನು ಅಲ್ಪಸಂಖ್ಯಾತ ವರ್ಗದವರಿಗೆ ಮಾರಾಟ ಮಾಡಿದನಂತರ, ಅಲ್ಪಸಂಖ್ಯಾತರು ಅಲ್ಲಿದ್ದ ದೇವಸ್ಥಾನವನ್ನು ಕೆಡವಿದ್ದಾರೆ ಎಂದು ಗಲಭೆ ಎಬ್ಬಿಸಿದ್ದರು. ಹಾಗಿರುವಾಗ ದಿನೇಶ್ ಗುಂಡೂರಾವ್ ಇದನ್ನು ಸವಾಲಾಗಿ ಸ್ವೀಕರಿಸಿ, ರಾಜ್ಯ ಉಚ್ಚ ನ್ಯಾಯಾಲಯದ ನಿರ್ದೇಶನ ಜಾರಿಯಾಗುವಂತೆ ನೋಡಿಕೊಳ್ಳಬೇಕಾಗಿತ್ತು.

ಇಂತಹ ನಾಯಕತ್ವದಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಯಾವುದೇ ಕಾರಣಕ್ಕೂ ಬೆಳೆಯಲು ಸಾಧ್ಯವಿಲ್ಲ ಎಂಬುದು ಕಾಂಗ್ರೆಸಿಗರಿಗೆ ತಿಳಿಯಲಿಲ್ಲ, ಪರಿಣಾಮವಾಗಿ ಇಲ್ಲಿ ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ಸೊರಗಿತು. ಕೊಡಗಿನಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಚಂದ್ರಮೌಳಿ ಗೆಲ್ಲುವ ಅವಕಾಶವಿದ್ದರೂ ಸೋತರು. ನಂತರ ನಡೆದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲೂ ಕಾಂಗ್ರೆಸ್‌ಗೆ ಅಧಿಕಾರ ಪಡೆಯುವ ಅವಕಾಶ ದಟ್ಟವಾಗಿ ಇತ್ತು, ಆದರೆ ಟಿಪ್ಪುವಿನ ಗುಮ್ಮನಿಂದ ಕಾಂಗ್ರೆಸಿಗರು ಹೊರಬಂದಿರಲಿಲ್ಲ, ಯಾವ ಟಿಪ್ಪುವನ್ನು ಮುಂದಿಟ್ಟುಕೊಂಡು ನಾವು ಗೆದ್ದೇ ಗೆಲ್ಲುತ್ತೇವೆ ಎಂದು ಬಿಜೆಪಿಯವರು ಬೀಗುತ್ತಿದ್ದರೋ, ಆ ಕ್ಷೇತ್ರ ಕಾಂಗ್ರೆಸಿನ ಪಾಲಾಯಿತು. ಅಂದರೆ ಜನರ ಒಲವು ಬಿಜೆಪಿಯತ್ತ ಇರಲಿಲ್ಲ, ಆದರೆ ಕಾಂಗ್ರೆಸಿಗರಲ್ಲಿ ಆತ್ಮವಿಶ್ವಾಸವೇ ಇರಲಿಲ್ಲ, ಆತ್ಮವಿಶ್ವಾಸವನ್ನು ಮೂಡಿಸುವ ಕೆಲಸವನ್ನು ಯಾವ ನಾಯಕರೂ ಮಾಡಲೇ ಇಲ್ಲ.

ಸಿದ್ದು ತಮ್ಮ ಮಂತ್ರಿಮಂಡಲವನ್ನು ಪುನರ್‌ರಚಿಸಿದಾಗ ದಿನೇಶ್ ಗುಂಡೂರಾವ್‌ರವರನ್ನು ಸಂಪುಟದಿಂದ ಕೈಬಿಟ್ಟರು. ಆದರೆ ಕಾಂಗ್ರೆಸ್ ಪಕ್ಷ ಅವರನ್ನು ಕೆ.ಪಿ.ಸಿ.ಸಿ.ಯ ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿತು. ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷ ಬಹುತೇಕ ಧೂಳೀಪಟವಾಗಿದ್ದರೂ ಕೊಡಗಿನ ಕಾಂಗ್ರೆಸಿಗರು ಅವರನ್ನು ಹೆಗಲ ಮೇಲಿರಿಸಿ ಸಂಭ್ರಮಿಸಿದರು. ದೆಹಲಿಯಿಂದ ಬೆಂಗಳೂರಿಗೆ ದಿನೇಶ್ ಗುಂಡೂರಾವ್ ಆಗಮಿಸಿದಾಗ, ಕೊಡಗಿನ ಒಂದು ತಂಡವೇ ಅವರನ್ನು ಸ್ವಾಗತಿಸಿತ್ತು.

ಕೊಡಗಿನ ಕಾಂಗ್ರೆಸ್‌ನ ನಾಯಕತ್ವ ಬಹಳ ವಿಚಿತ್ರವಾಗಿ ಮತ್ತು ಅತ್ಯಂತ ದುರ್ಬಲವಾಗಿ ಇದೆ. ಜಿಲ್ಲೆಯ ಯಾವುದೇ ಭಾಗದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೂತ್ ಕಾರ್ಯಕರ್ತ ಕೂಡ ಇಲ್ಲದೇ ಇರುವಂತಹ ಹೀನಾಯಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ ಇದೆ. ಟಿಪ್ಪು ಜನ್ಮ ದಿನಾಚರಣೆಯ ವೇಳೆಯಲ್ಲಿ ಕಾಂಗ್ರೆಸ್ ಪಕ್ಷ ನಡೆದುಕೊಂಡ ರೀತಿಯಿಂದಾಗಿ, ಕಾಂಗ್ರೆಸಿನ ಬಗ್ಗೆ ಅಲ್ಪಸಂಖ್ಯಾತರು ಮಾತ್ರವಲ್ಲ, ಕಾಂಗ್ರೆಸಿನ ನಿಷ್ಠಾವಂತ ಕಾರ್ಯಕರ್ತರು ಎಂದು ಎನಿಸಿಕೊಳ್ಳುವವರೂ ದೂರ ಸರಿದಿದ್ದಾರೆ. ತಮ್ಮನ್ನು ರಕ್ಷಿಸುವವರಾಗಲಿ, ಕಾಪಾಡುವವರಾಗಲಿ ಇಲ್ಲ ಎಂಬುದು ಕಾರ್ಯಕರ್ತರಿಗೆ ಮನದಟ್ಟಾಗಿದೆ.

ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯಲ್ಲಿ ಎನ್ನುವಂತೆ ಆಗಿದೆ ಈಗ ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸಿನ ಸ್ಥಿತಿ. ಇಲ್ಲಿಗೆ ಎಂ.ಆರ್. ಸೀತಾರಾಂ ಎಂಬವರನ್ನು ಜಿಲ್ಲಾ ಉಸ್ತುವಾರಿ ಸಚಿವರಾಗಿ ಸಿದ್ದರಾಮಯ್ಯನವರು ನೇಮಕ ಮಾಡಿದ್ದಾರೆ. ಕೊಡಗಿಗೂ, ಸೀತಾರಾಂರವರಿಗೂ ಯಾವ ನಂಟೋ ತಿಳಿಯದು. ಆಗರ್ಭ ಶ್ರೀಮಂತ ಸೀತಾರಾಂರವರಿಗೆ ಜಿಲ್ಲೆಯ ಸಮಸ್ಯೆಯ ಅರಿವು ಆಗುತ್ತದೋ



ಎಂ.ಆರ್. ಸೀತಾರಾಂ


ಇಲ್ಲವೋ ತಿಳಿಯದು.

ಕೊಡಗು ಜಿಲ್ಲೆಯಲ್ಲಿ ಕೊಡವ ಜನಾಂಗದವರು ಮ[...]
ಗೌಡ ಜನಾಂಗದವರು ಭಾರತೀಯ ಜನತಾ ಪಕ್ಷದ ವ[...]
ಬ್ಯಾಂಕ್. ಇವರ ಜೊತೆಯಲ್ಲಿ ಲಿಂಗಾಯತರು ಕ[...]
ಇದ್ದಾರೆ. ಹಾಗಾಗಿ ಕಾಂಗ್ರೆಸಿಗೆ ಸಿಗುವ ಮತಗಳು ದಲಿ[...]
ಮತ್ತು ಅಲ್ಪಸಂಖ್ಯಾತರದ್ದು. ಇದರಲ್ಲಿಯೂ [...]
ಅಲ್ಪಸಂಖ್ಯಾತರ ಯುವಪೀಳಿಗೆ ಎಸ್.ಡಿ.ಪಿ.ಐ. ಜೊತೆ[...]
ಗುರುತಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸಿಗೆ ಉಳಿದಿರುವ[...]
ದಲಿತರ ಮತ್ತು ಹಿಂದುಳಿದವರ ಮತಗಳು ಮಾ[...]
ಆದರೆ ಸೂಟುಬೂಟು ಹಾಕಿಕೊಂಡಿರುವ ಕೆಲವು ಪ್ರಮು[...]
ಜನಾಂಗದವರ ಶರೀರ ಕಾಂಗ್ರೆಸಿನಲ್ಲಿ ಇದೆ. ಮನ[...]
ಬಹುತೇಕ ಬಿಜೆಪಿಯಲ್ಲಿಯೇ ಇದೆ. ಇವರ[...]
ಸುಬ್ಬಯ್ಯನವರು 'ಕಮಲ ಕಾಂಗ್ರೆಸಿಗರು' ಎಂದು ಬ[...]
ಹಿಂದಿನಿಂದ ಹೇಳುತ್ತಾ ಬಂದಿದ್ದು, ಈಗ ಈ [...]
ರಾಜ್ಯದಲ್ಲಿಯೂ ಬಳಕೆಯಲ್ಲಿ ಇದೆ.

ಹೀಗೆ ಸೂಟು ಬೂಟು ಹಾಕಿಕೊಂಡಿರುವವ[...]
ಯಾರೇ ಉಸ್ತುವಾರಿ ಸಚಿವರಾದರೂ, ಅ[...]
ಜೊತೆಯಲ್ಲಿಯೇ ಬೆಂಗಳೂರಿನಿಂದಲೇ ಬಂದು ಬಿಡು[...]
ಸರಕಾರಿ ಕಾರಿನಲ್ಲಿ ಜಾಗ ಇಲ್ಲದಿದ್ದರೆ, ಸರಕಾರಿ ಕಾ[...]
ನಾಚಿಸುವ ರೀತಿಯಲ್ಲಿ ಇರುವಂತಹ ಅವರ ಕಾರಿ[...]
ಹಿಂಬಾಲಿಸಿಕೊಂಡು ಬರುತ್ತಾರೆ. ಇವರನ್ನು ತಲುಪುವ[...]
ಹೇಗೆ ಎಂಬುದು ಶ್ರೀಸಾಮಾನ್ಯನಿಗೆ ಕಾಡ[...]
ಪ್ರಶ್ನೆಯಾಗುತ್ತದೆ.

ಸೀತಾರಾಂ ಜೊತೆಯಲ್ಲಿ ಬೆಂಗಳೂರಿನಿಂದ[...]
ವಕ್ಕರಿಸಿದ್ದು ಕೊಡಗು ಮೂಲದ ಹರೀಶ್ ಬೋ[...]
ಎಂಬ ವ್ಯಕ್ತಿ, ಸೀತಾರಾಂಗೆ ಹೇಗೆ ಕೊಡಗಿನ ಸಂಬ[...]
ಇಲ್ಲವೋ, ಅದೇ ರೀತಿಯಲ್ಲಿ ಹರೀಶ್ ಬೋಪಣ್ಣನಿ[...]
ಕೊಡಗಿನ ಕಾಂಗ್ರೆಸಿಗೂ, ಕೊಡಗಿಗೂ ಯಾವುದೇ ಸಂಬ[...]
ಇಲ್ಲ, ಎಂ.ಆರ್. ಸೀತಾರಾಂ ಕೊಡಗಿನ ಉಸ್ತು[...]
ಸಚಿವರಾಗಿ ನೇಮಕಗೊಂಡ ಕೂಡಲೇ, ಕೊಡಗಿಗೆ ಬ[...]
ಕೊಡಗಿನ ಉದ್ದಗಲಕ್ಕೂ ಎಂ.ಆರ್. ಸೀತಾರಾಂ ಮ[...]
ದಿನೇಶ್ ಗುಂಡೂರಾವ್‌ರವರಿಗೆ ಸ್ವಾಗತವನ್ನು ಕೋ[...]
ಕಟೌಟ್‌ಗಳನ್ನು ಹಾಕಿಸಿದ್ದರು. ಈ ಸಂಸ್ಕೃತಿ ಕೊಡಗಿ[...]
ಅಷ್ಟಾಗಿ ಇಲ್ಲ, ಈ ಕಟೌಟ್ ನೋಡಿದಾಗ ಮತ್ತು ಕೆ[...]
ಪತ್ರಿಕೆಗಳಲ್ಲಿ ಜಾಹಿರಾತನ್ನು ನೋಡಿದಾಗ, ಹರಿ[...]
ಬೋಪಣ್ಣ ಯಾರು ಎಂಬ ಪ್ರಶ್ನೆ ಕಾಡಿತ್ತು, ಈ [...]
ಹೇಗೋ ಸೀತಾರಾಂ ಜೊತೆಯಲ್ಲಿ ನ[...]
ಬೆಳೆಸಿಕೊಂಡವರು. ಈ ನಂಟು ಯಾವುದು ಎಂಬ[...]
ತಿಳಿದಿಲ್ಲ, ಆದರೆ ಕಾಂಗ್ರೆಸ್ ಮೂಲಗಳ ಪ್ರಕಾರ ಸೀತಾ[...]
ಕೃಪಾಕಟಾಕ್ಷದಿಂದ ಹರೀಶ್‌ಗೆ ಬೆಂಗಳೂ[...]
ಕಾರ್ಪೋರೇಷನ್‌ನಲ್ಲಿ ಕಾಂಗ್ರೆಸಿನ ಟಿಕೆಟು ದೊರ[...]
ಚುನಾವಣೆಯಲ್ಲಿ ಹರೀಶ್ ಸೋತಾಗ ಮತ್ತೆ [...]
ಸೀತಾರಾಂ ಪ್ರಭಾವದಿಂದ ನಾಮಕರಣ ಸದಸ್ಯ[...]
ನೇಮಕಗೊಂಡಿದ್ದರು.

ಈ ಹರೀಶ್ ಬೋಪಣ್ಣ ಈಗ ಕೊಡಗಿನಲ್ಲಿ [...]



ಟಿ.ಪಿ. ರಮೇಶ್

ಸ್ತುವಾರಿ ಸಚಿವರ ಆಪ್ತ ಎಂದು ಹೇಳಿಕೊಂಡು, ಕಾಂಗ್ರೆಸಿನ ನಾಯಕರೂ ಿದಂತೆ, ಜಿಲ್ಲೆಯ ಯಾವುದೇ ವ್ಯಕ್ತಿ ಸಚಿವರನ್ನು ಕಾಣಬೇಕಾದರೂ ಈತನ ೂಲಕವೇ ಸಾಧ್ಯ ಎನ್ನುವಂತಹ ಪರಿಸ್ಥಿತಿ ಇದೆ. ಕಾಂಗ್ರೆಸಿನ ಕಾರ್ಯಕರ್ತರು ಬಗ್ಗೆ ಅಸಹಾಯಕರಾಗಿದ್ದಾರೆ. ನಾಯಕರು ಬಾಯಿ ಮುಚ್ಚಿಕೊಂಡಿದ್ದಾರೆ. ದರಿಂದಾಗಿ ಕೊಡಗಿನ ವಾಸ್ತವಾಂಶವನ್ನು ಸೀತಾರಾಂಗೆ ತಿಳಿಯಲು ಧ್ಯವಾಗುತ್ತಿಲ್ಲ. ಈ ವಾಸ್ತವತೆಯನ್ನು ಸೀತಾರಾಂಗೆ ಯಾರು ಹೇಳುತ್ತಾರೋ ಯದು. ಹರೀಶ್ ಬೋಪಣ್ಣ ರೂಪಿಸಿದ ಕಾರ್ಯಕ್ರಮದಂತೆ ಸಚಿವರು ರ್ಯಕ್ರಮಗಳನ್ನು ನಡೆಸುತ್ತಾರೆ.

ಇತ್ತೀಚೆಗೆ ವಿರಾಜಪೇಟೆ ಸಮೀಪದ ಅಮ್ಮತ್ತಿ ಗ್ರಾಮದಲ್ಲಿ ಒಬ್ಬರ ನಿವಾಸಕ್ಕೆ ರೀಶ್ ಬೋಪಣ್ಣ ಸೀತಾರಾಂರವರನ್ನು ಊಟಕ್ಕೆ ಕರೆದುಕೊಂಡು ಹೋಗಿದ್ದರು. ವ್ಯಕ್ತಿ ಹರೀಶ್ ಬೋಪಣ್ಣನವರ ಸಹೋದರ ಸಂಬಂಧಿಯಂತೆ. ಆದರೆ ರು ಬಿಜೆಪಿಯ ಸಕ್ರಿಯ ಕಾರ್ಯಕರ್ತರು. ಜಿಲ್ಲಾ ಉಸ್ತುವಾರಿ ಸಚಿವರು ಧಿಕೃತವಾಗಿ ಜಿಲ್ಲೆಗೆ ಬಂದಾಗ, ಅವರನ್ನು ಬಿಜೆಪಿ ಕಾರ್ಯಕರ್ತರ ನಿವಾಸಕ್ಕೆ ಂಡೊಯ್ದದ್ದು ಆ ಭಾಗದ ಕಾರ್ಯಕರ್ತರ ಅಸಮಾಧಾನಕ್ಕೆ ಕಾರಣವಾಗಿದೆ.

ಬಲಿಷ್ಠರು ಉಸ್ತುವಾರಿ ಸಚಿವರನ್ನು ಭೇಟಿ ಮಾಡಲು ಹೋದಾಗ, ಲ್ಲಿಯೇ ಇರುವ ಹರೀಶ್ ಬೋಪಣ್ಣ ಅವರ ಕೆಲಸ ಕಾರ್ಯಗಳನ್ನು ಾಡಿಕೊಡುತ್ತಾರೆ. ಅವರನ್ನು ಬಾವ ಮತ್ತು ಮಾವ ಎಂದು ಸಂಬೋಧಿಸುತ್ತಾರೆ. ವ, ಮಾವ ಅಲ್ಲದವರ ಸ್ಥಿತಿ ಏನು ಎಂಬುದು ಬಡ ಮತದಾರನ ಮತ್ತು ರ್ಯಕರ್ತನ ಪ್ರಶ್ನೆ.

ಇಷ್ಟೆಲ್ಲಾ ಅವಾಂತರಗಳು ಆಗಲು ಕಾರಣ ಮಾಜಿ ಸಂಸದ ಅಡಗೂರು ಶ್ವನಾಥ ಅನಾರೋಗ್ಯದಿಂದ ಬಳಲುತ್ತಿದ್ದು, ಈಗ ವಿಶ್ರಾಂತಿಯನ್ನು ಡೆಯುತ್ತಿರುವು ದಾಗಿದೆ. ಅಧಿಕಾರವಿದ್ದಾಗ ಹಲವು ತಪ್ಪು ಹೆಜ್ಜೆಗಳನ್ನು ಟ್ಟಿದ್ದ ವಿಶ್ವನಾಥ್, ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ. ಅವರು ಪಕ್ಷಕ್ಕೆ ಕರೆದುಕೊಂಡು ಂದ ಮಾಜಿ ಶಾಸಕ ಹೆಚ್.ಡಿ. ಬಸವರಾಜು, ಕೊಡಗಿನ ವಿರಾಜಪೇಟೆಯಿಂದ ರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದವರು. ವಿಶ್ವನಾಥ್ ಸಕ್ರಿಯವಾಗಿ ದ್ದಷ್ಟು ದಿನ ಜಿಲ್ಲಾ ಕಾಂಗ್ರೆಸಿಗರು ಬಸವರಾಜುರವರನ್ನು ಹೆಗಲ ೇಲಿರಿಸಿಕೊಂಡಿದ್ದರು. ಯಾವಾಗ ವಿಶ್ವನಾಥ್ ಅನಾರೋಗ್ಯಕ್ಕೆ ತುತ್ತಾದರೋ, ಲ್ಲಿಂದಲೇ ಬಸವರಾಜುರವರನ್ನು ಕಡೆಗಣಿಸಲು ತೊಡಗಿದರು. ಎಷ್ಟೊಂದು ಟ್ಟದಾಗಿ ಅವರನ್ನು ನಡೆಸಿಕೊಳ್ಳುತ್ತಿದ್ದಾರೆ ಎಂದರೆ, ಎಂ.ಆರ್. ಸೀತಾರಾಂ ಲ್ಲಾ ಉಸ್ತುವಾರಿ ಸಚಿವರಾಗಿ ಕೊಡಗು ಜಿಲ್ಲೆಗೆ ಮೊದಲ ಬಾರಿಗೆ ಬಂದಾಗ, ಸವರಾಜುರವರನ್ನು ವೇದಿಕೆಗೂ ಆಹ್ವಾನಿಸಲಿಲ್ಲ. ಪರಿಶಿಷ್ಟ ಪಂಗಡಕ್ಕೆ ಸೇರಿದ ಬ್ಬ ವ್ಯಕ್ತಿ ಮಾಜಿ ಶಾಸಕನಾಗಿದ್ದು ಕೊಡಗು ಜಿಲ್ಲೆಯಲ್ಲಿ ಕಾಂಗ್ರೆಸಿನ ಪ್ರಮುಖರು ವರಿಗೆ ತೋರುವ ಗೌರವ ಇದು. ಇನ್ನು ಈ ಕಾಂಗ್ರೆಸಿಗರು ಪರಿಶಿಷ್ಟ ಜಾತಿ ಂಗಡ ಹಾಗೂ ಹಿಂದುಳಿದ ವರ್ಗದ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ರಿದ ಸಾಮಾನ್ಯ ವ್ಯಕ್ತಿಗಳನ್ನು ಮತ್ತು ಕಾರ್ಯಕರ್ತರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಂಬುದನ್ನು ಊಹಿಸಬಹುದು. ಕಾಂಗ್ರೆಸಿಗರ ಇಂತಹ ನಿರ್ಲಕ್ಷ್ಯತನದಿಂದಾಗಿಯೇ ಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಯುವಕರು ಕಾಂಗ್ರೆಸಿನತ್ತ ಮುಖ ಮಾಡದೆ, ಸ್.ಡಿ.ಪಿ.ಐ.ಯತ್ತ ಹೋಗುತ್ತಿದ್ದಾರೆ. ಎಸ್.ಡಿ.ಪಿ.ಐ. ಬೆಳೆಯಲು ಕಾಂಗ್ರೆಸಿನ ೊಡುಗೆಯೇ ಹೆಚ್ಚು.

ವಿರಾಜಪೇಟೆಯಲ್ಲಿ ಸತ್ತು ಹೋಗಿದ್ದ ಕಾಂಗ್ರೆಸ್ ಪಕ್ಷಕ್ಕೆ ಈಗಷ್ಟೇ ಅಧ್ಯಕ್ಷನಾಗಿ ್. ಕೆ. ಅಬ್ದುಲ್ ಸಲಾಂ ಎಂಬ ಯುವಕ ನೇಮಕಗೊಂಡು ಪಕ್ಷಕ್ಕೆ ಜೀವ ೊಡುವ ಕೆಲಸ ಮಾಡುತ್ತಿದ್ದಾರೆ. ಮೊದಲ ದಿನದಿಂದಲೇ ಜಿಲ್ಲಾ ಕಾಂಗ್ರೆಸ್ ಾವಣೆಯಿಂದ ವಿರೋಧಿಸುವ ಕೆಲಸ ಆಗುತ್ತಿದೆ, ಕಾರಣ ಎ.ಕೆ. ಸುಬ್ಬಯ್ಯನವರ ಾತಯಲ್ಲಿ ಇವರಿಗೆ ಸಂಪರ್ಕ ಇದೆ ಎನ್ನುವುದು. ಜಿಲ್ಲಾ ಪಂಚಾಯತ್ ಸ್ಯೆಯಾಗಿರುವ ಸರಿತಾ ಪೂಣಚ್ಚರವರನ್ನು ಇದೇ ಕಾರಣಕ್ಕಾಗಿ ವಿರೋಧಿಸುತ್ತಾರೆ. ತ್ಯತೀತ ನಿಲವು ಹೊಂದಿರುವ ಎ.ಕೆ. ಸುಬ್ಬಯ್ಯನವರು ಇವರಿಗೆ ವಿರೋಧಿಗಳು. ಂಗ್ರೆಸ್ ಸಿದ್ಧಾಂತವನ್ನು ವಿರೋಧಿಸುವವರು ಕಾಂಗ್ರೆಸಿಗೆ ಆಪ್ತರು.

ಕೊಡಗು ಜಿಲ್ಲೆಯಲ್ಲಿ ಈಗ ಸಂಘ ಪರಿವಾರದವರು ಅಖಂಡ ಭಾರತದ ಸರಿನಲ್ಲಿ ಸಂಕಲ್ಪ ದಿನಾಚರಣೆ ಹಾಗೂ ಪಂಜಿನ ಮೆರವಣಿಗೆಗಳನ್ನು ನಡೆಸುತ್ತಿದ್ದಾರೆ. ಂಗ ಯಾತ್ರೆಯನ್ನು ನಡೆಸುತ್ತಿದ್ದಾರೆ. ಬಡವರ ಮತ್ತು ಶ್ರೀಸಾಮಾನ್ಯನ ಸಸ್ಯೆಯ ಬಗ್ಗೆ ಅವರು ಯಾವುದೇ ಕಾರ್ಯಕ್ರಮವನ್ನು ಮಾಡುತ್ತಿಲ್ಲ. ವರು ನಡೆಸುತ್ತಿರುವ ಕಾರ್ಯಕ್ರಮಗಳಿಂದಾಗಿ ಜಿಲ್ಲೆಯಲ್ಲಿ ಅಶಾಂತಿಯ ಾತಾವರಣ ಉಂಟಾಗುತ್ತಿದೆ. ಪ್ರವೀಣ್ ಪೂಜಾರಿ ಎಂಬ ಆಟೋಚಾಲಕನ ತ್ಯೆ ಕುಶಾಲನಗರದಲ್ಲಿ ನಡೆದಿದೆ. ಪಂಜಿನ ಮೆರವಣಿಗೆ ನಡೆದಾಗ ಅತ್ಯಂತ ಟ್ಟ ಪದಗಳ ಬಳಕೆಯಾಗಿದೆ. ಉಳಿದಂತೆ ಸ್ವಯಂಪ್ರೇರಿತರಾಗಿ ಮೊಕದ್ದಮೆ ೂಡುವ ಪೊಲೀಸ್ ಇಲಾಖೆ, ಇಲ್ಲಿ ತಮಗೆ ಯಾರ ಪುಕಾರೂ ಬಂದಿಲ್ಲ ಂದು ಹೇಳಿಕೊಂಡು ಸುಮ್ಮನಿದ್ದಾರೆ.

ಕಾಂಗ್ರೆಸಿಗರಿಗೆ ತಮ್ಮ ಪಕ್ಷ ರಾಜ್ಯದಲ್ಲಿ ಆಡಳಿತ ನಡೆಸುತ್ತಿದೆ ಎಂಬುದು ರೆತುಹೋಗಿದೆ. ಏಕೆಂದರೆ 22ರಂದು ಜಿಲ್ಲಾ ಕಾಂಗ್ರೆಸ್ ಸಮಿತಿ, ಈಗಷ್ಟೇ ಧಾನ ಪರಿಷತ್ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರ ನೇತೃತ್ವದಲ್ಲಿ ಲ್ಲಾಧಿಕಾರಿಗಳ ಬಳಿ ತೆರಳಿ, ದೇಶದ್ರೋಹಿ ಕೆಲಸಗಳನ್ನು ಮಾಡುವ ಯಾರೇ ದರೂ ಅವರನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳಬೇಕು ಎಂಬ ಮನವಿಯನ್ನು ೀಡಿದ್ದಾರೆ. ಆಡಳಿತ ನಡೆಸುವವರು ಅಧಿಕಾರಿಗಳ ಬಳಿ ತೆರಳಿ ಮನವಿಪತ್ರವನ್ನು ಡುವಂತಹ ಹೀನಾಯ ಸ್ಥಿತಿಯಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ದೆ.

ಕೊಡಗು ಕಾಂಗ್ರೆಸ್ ಪಕ್ಷವನ್ನು ಖಂಡಿತವಾಗಿಯೂ ಈ ಸ್ಥಿತಿಯಿಂದ ೇಲಕ್ಕೆ ತರಲು ಸಾಧ್ಯವಿಲ್ಲ. ಕೊಡಗಿನಲ್ಲಿ ಭಾರತೀಯ ಜನತಾ ಪಕ್ಷ ತನ್ನ ತರಿಕ ಸಮಸ್ಯೆಯಿಂದ ಹೈರಾಣಾಗಿದೆ. ಜಾತ್ಯತೀತ ಜನತಾದಳ ಎಂಬುದು ಗದದ ಮೇಲೆ ಮಾತ್ರ ಇದೆ. ಕಾಂಗ್ರೆಸ್ ಇದ್ದೂ ಇಲ್ಲದಂತೆ ಆಗಿದೆ. ನರಸತ್ತ ಂಗ್ರೆಸನ್ನು ರಕ್ಷಿಸಲು ಹಾಲಿ ನಾಯಕತ್ವದಿಂದ ಸಾಧ್ಯವಿಲ್ಲ. ಬಿಜೆಪಿಯ ಮತ್ತು ಘ ಪರಿವಾರದ ಜೊತೆಗೆ ಜಾತ್ಯತೀತ ಮನೋಭಾವದಿಂದ ಸಂಘರ್ಷವನ್ನು ಡಿಕೊಂಡು ಬರುವ ವಿ.ಪಿ. ಶಶಿಧರ್‌ರಂತಹ ಯುವಕನಿಗೆ ಜಿಲ್ಲೆಯಲ್ಲಿ ಂಗ್ರೆಸಿನ ಪಟ್ಟಕಟ್ಟಲು ಯಾರೂ ಸಿದ್ಧರಿಲ್ಲ. ಬಿಜೆಪಿಯ ಜೊತೆಯಲ್ಲಿ ಸಂಘರ್ಷ ಡಿಕೊಂಡು ಅವರನ್ನು ಸೈದ್ಧಾಂತಿಕವಾಗಿ ಎದುರಿಸದಿದ್ದರೆ ಕೊಡಗಿನಲ್ಲಿ ಂಗ್ರೆಸ್ ಪಕ್ಷ ನಾಮಾವಶೇಷವಾಗುವುದರಲ್ಲಿ ಸಂಶಯವಿಲ್ಲ.

■ ಬಿ.ಎನ್. ಮನುಶೆಣೈ

ಬಳ್ಳಾರಿ: ಜನದ್ರೋಹಿ ಜಿಂದಾಲ್ ಕಂಪನಿಯ ಕಿಡ್ನ್ಯಾಪ್ ತಂತ್ರ!




ಗೋಕಾಕ್ ಬಳಿಯ ಹಳ್ಳಿಯೊಂದರ ಜನ ಮಲಿನಗೇಡಿ ಇಸಿಪಿಎಲ್ ಡಾಂಬರು ಕಾರ್ಖಾನೆಯನ್ನು ಒದ್ದೋಡಿಸುತ್ತಿರೋದು, ಅದೀಗ ಬಳ್ಳಾರಿ ಹತ್ತಿರದ ಸುಲ್ತಾನಪುರಕ್ಕೆ ಅಮರಿಕೊಳ್ಳುತ್ತಿರೋದು, ಇಲ್ಲಿಯೂ ಜನ ಅದಕ್ಕೆ ಧಿಕ್ಕಾರ ಕೂಗುತ್ತಿರೋದರ ಕುರಿತು ಕಳೆದ ಎರಡು ಸಂಚಿಕೆಯ ಹಿಂದಷ್ಟೇ 'ಪತ್ರಿಕೆ'ಯಲ್ಲಿ ವಿಸ್ತೃತವಾಗಿ ವರದಿ ಮಾಡಲಾಗಿತ್ತು. ಆ ಕಾರ್ಖಾನೆಯ ಆಡಳಿತ ಮಂಡಳಿಗರ ಮತ್ತೊಂದು ಪೌರುಷವೀಗ ಹೊರಬಿದ್ದಿದೆ. ಜನ ವಿರೋಧ ವ್ಯಕ್ತಪಡಿಸಿದಾಗ, ಅವರ ಆತಂಕಗಳನ್ನು ಆಲಿಸಿ,, ಸೂಕ್ತ ಮುನ್ನೆಚ್ಚರಿಕೆಯ ಭರವಸೆ ನೀಡಿ, ಕಾರ್ಖಾನೆ ಸ್ಥಾಪಿಸಬೇಕಾದ್ದು ಆಡಳಿತ ಮಂಡಳಿಗಳ ವೈಖರಿ. ಆದರೆ ಇಸಿಪಿಎಲ್ ಡಾಂಬರು ಮಂದಿಗಳು ಕಾನೂನನ್ನೂ ಮೀರಿ ಬಲಪ್ರಯೋಗದ ಮೂಲಕ ಜನರನ್ನು ಒಕ್ಕಲೆಬ್ಬಿಸುವ ಉದ್ಧಟತನ ತೋರಿರುವುದಲ್ಲದೆ ಒಬ್ಬ ಸಾಮಾಜಿಕ ಕಾರ್ಯಕರ್ತನನ್ನೇ ಕಿಡ್ನ್ಯಾಪ್ ಮಾಡಿ ದರ್ಪ ಮೆರೆದಿದ್ದಾರೆ.

ಎಪ್ಸಲಿನ್ ಕಾರ್ಬೈಡ್ ಪ್ರೈವೇಟ್ ಲಿಮಿಟೆಡ್ (ಇಸಿಪಿಎಲ್) ಎನ್ನುವ ಕಾರ್ಖಾನೆ ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಬಳಿಯ ಸುಲ್ತಾನಪುರದಲ್ಲಿ ತನ್ನ ಕೋಲ್‌ಟಾರ್ ಡಿಸ್ಟಿಲೇಷನ್ ಕೈಗಾರಿಕಾ ಘಟಕವನ್ನು ಸ್ಥಾಪಿಸಲು ಮುಂದಾಗಿದೆ. ಇದು ಪರಿಸರ ರಕ್ಷಣೆಯ ಕ್ರಮಗಳನ್ನು ಪಾಲಿಸುತ್ತಿಲ್ಲ ಎಂದು ಆರಂಭದಿಂದಲೂ ಸ್ಥಳೀಯ ಜನತೆ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದ್ದರು. ಇಲ್ಲಿ ಕಾರ್ಖಾನೆ ಸ್ಥಾಪಿಸುವುದಿಲ್ಲ ಅನ್ನೋ ನಾಟಕ ಆಡುತ್ತಲೇ ಬಂದ ಆಡಳಿತ ಮಂಡಳಿ ಒಳಗಿಂದೊಳಗೆ ಸದ್ದಿಲ್ಲದೆ ಘಟಕ ಸ್ಥಾಪನೆಯ 90%ರಷ್ಟು ಕೆಲಸವನ್ನೇ ಮುಗಿಸಿದೆ. ತೋರಣಗಲ್ಲು ಸುತ್ತಮುತ್ತ ಜಿಂದಾಲ್ ಕೈಗಾರಿಕೆಯಿಂದ ಈಗಾಗಲೇ ಹಲವಾರು ಜನರಿಗೆ ಚರ್ಮರೋಗ, ಶ್ವಾಸಕೋಶದ ಸಮಸ್ಯೆ ಉಂಟಾಗಿ ಜನ ಆ ಕಾರ್ಖಾನೆ ವಿರುದ್ಧ ಹೋರಾಡುತ್ತಿದ್ದಾರೆ. ಅದರ ವಿಷಾನಿಲದಿಂದಾಗಿ ಅಕ್ಕಪಕ್ಕದ ಪೈರುಗಳು ಹಾನಿಯಾಗುತ್ತಿವೆ. ಈ ಕಾರಣಕ್ಕೇ ಮಹಾರಾಷ್ಟ್ರದ ಜನ ಜಿಂದಾಲ್ ಕಾರ್ಖಾನೆಯನ್ನು ಅಲ್ಲಿಂದ ಹೊರಗಟ್ಟಿದ್ದು.

ಯಾವುದೇ ಕಾರ್ಖಾನೆ ಸ್ಥಾಪನೆಗೂ ಮುನ್ನ ಸ್ಥಳೀಯ ಜನಾಭಿಪ್ರಾಯಪಡೆಯಬೇಕೆಂಬ ನಿಯಮವಿದೆ. ಆದರೆ ಇಸಿಪಿಎಲ್ ಕಾರ್ಖಾನೆಗೆ



ಅದೆಲ್ಲ ಲೆಕ್ಕಕ್ಕೇ ಇಲ್ಲ. 34 ಎಕರೆಯಲ್ಲಿ ಸ್ಥಾಪನೆಯಾಗುತ್ತಿರುವ ಇದು ಯಾವುದೇ ಸುರಕ್ಷತಾ ಕ್ರಮ ಕೈಗೊಂಡಿಲ್ಲ; ಸ್ಫೋಟಕ ಮತ್ತು ಭಾರೀ ಬೆಂಕಿಯ ಜ್ವಾಲೆ ಉಂಟುಮಾಡುವ ಕೆಮಿಕಲ್ ಶೇಖರಣ ಟ್ಯಾಂಕ್‌ಗಳು ಅವೈಜ್ಞಾನಿಕವಾಗಿವೆ; 3 ಲಕ್ಷ ಟನ್ ಕೋಲ್‌ಟಾರ್ ತಯಾರಿಕೆಗಾಗಿ ಕಾರ್ಬನ್ ಬ್ಲಾಕ್ ಆಯಿಲ್ 70 ಸಾವಿರ ಟನ್, ಆಂಥ್ರೇಸ್ ಆಯಿಲ್ 42 ಸಾವಿರ ಟನ್ ಬಳಸುತ್ತಿರೋದರಿಂದ ಇಡೀ ವಾತಾವರಣ ಉಸಿರುಗಟ್ಟಲಿದೆ, ಅದಕ್ಕೂ ಯಾವ ಮುನ್ನೆಚ್ಚರಿಕೆ ವಹಿಸಿಲ್ಲ. ಹೀಗೆ ಆಡಳಿತ ಮಂಡಳಿಯ ನಿರ್ಲಕ್ಷ್ಯಗಳು ಹೆಜ್ಜೆಹೆಜ್ಜೆಗೂ ಎದ್ದು ಕಾಣುತ್ತವೆ.



ಇಂಥಾ ದರ್ಪಿಷ್ಟ ಕಾರ್ಖಾನೆಯ ವಿರುದ್ಧ ಹಲವಾರು ಜನಪರ, ಜೀವಪರ ಸಂಘಟನೆಗಳು ಹೋರಾಟಕ್ಕಿಳಿದಿವೆ. ಕುಡಿತಿನಿ ಇಸಿಪಿಎಲ್ ಜೀವಸಂಕುಲ ನಾಶಕ ವಿರೋಧಿ ಸಮಿತಿಯು ಸುತ್ತಮುತ್ತಲ ತೋರಣಗಲ್ಲು, ಕುಡಿತಿನಿ, ಸುಲ್ತಾನಪುರ ಅಲ್ಲದೇ ಬಳ್ಳಾರಿ ನಗರದಲ್ಲಿಯೂ ಸಹ ಬೈಕ್ ಜಾಥಾ ನಡೆಸಿ ಕಾರ್ಖಾನೆಯಿಂದಾಗುವ ಅಪಾಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಇತ್ತ ಬಳ್ಳಾರಿ ಜಿಲ್ಲಾ ಜೆಡಿಎಸ್ ಘಟಕವೂ ಕಾರ್ಖಾನೆ ವಿರುದ್ಧ ಹೋರಾಟಕ್ಕಿಳಿದಿದೆ. ಜೊತೆಗೆ ಸಿಪಿಐ(ಎಂ) ಸಂಘಟನೆಯೂ ಕಾರ್ಖಾನೆಯ ವಿರುದ್ಧ ಹೋರಾಟಕ್ಕಿಳಿದಿದೆ. ಸುತ್ತಮುತ್ತಲ ಹಲವಾರು ಗ್ರಾಮಗಳಲ್ಲಿ ಜನರ ಸಭೆ ಸೇರಿಸಿ ದೊಡ್ಡ ಹೋರಾಟದ ರೂಪುರೇಷೆ ಸಿದ್ಧಪಡಿಸಿದೆ. ಈ ಪ್ರಬಲ ವಿರೋಧ ಇಸಿಪಿಎಲ್ ಆಡಳಿತ ಮಂಡಳಿಯ ನಿದ್ದೆಗೆಡಿಸಿದೆ. ಹೇಗಾದರೂ ಮಾಡಿ ಹೋರಾಟವನ್ನು ಹತ್ತಿಕ್ಕಲು ಅದು ನಡೆಸಿದ ಪ್ರಯತ್ನಗಳೆಲ್ಲ ಮಣ್ಣು ಮುಕ್ಕಿದಾಗ ಅವರಿಗೆ ಹೊಳೆದಿದ್ದೇ ಖತರ್ನಾಕ್ ಕಿಡ್ನ್ಯಾಪ್ ಐಡಿಯಾ!

ಕಾರ್ಖಾನೆ ವಿರುದ್ಧದ ಹೋರಾಟ ನೇತೃತ್ವ ವಹಿಸಿದ್ದ ಸಿಪಿಐ(ಎಂ)ನ ವಲಯ ಕಾರ್ಯದರ್ಶಿ ಎ.ಸ್ವಾಮಿಯವರನ್ನು ಅಪಹರಿಸಿದ್ದಾರೆ. ಆಗಸ್ಟ್ 23ರ ಸಂಜೆ ಕುಡಿತಿನಿಗೆ ತೆರಳಿದ್ದ ಸ್ವಾಮಿಯವರನ್ನು ಸಂಜೆ 5 ಗಂಟೆಯ ವೇಳೆಗೆ ಇಸಿಪಿಎಲ್ ಕಾರ್ಖಾನೆಯ ಬಾಡಿಗೆ ಬಂಟರು ಕಿಡ್ನ್ಯಾಪ್ ಮಾಡಿದ್ದಾರೆ. ಇದಕ್ಕೆ ಜಿಂದಾಲ್ ಕಾರ್ಖಾನೆಯ ಪೂರ್ಣ ಬೆಂಬಲವಿದೆ ಅನ್ನೋ ಸಿಪಿಎಂ ಮುಖಂಡರು ಆರೋಪದಲ್ಲಿ ಸತ್ಯಾಂಶವಿದೆ. ಹೀಗೆ ಹೊತ್ತೊಯ್ದು ಸ್ವಾಮಿಯವರನ್ನು ಒಂದು ದಿನ ಅಜ್ಞಾತಸ್ಥಳದಲ್ಲಿಟ್ಟು ದೈಹಿಕ ಚಿತ್ರಹಿಂಸೆ ನೀಡಿದ್ದಾರೆ.

ಹೋರಾಟ ನಡೆಸುವುದು ಪ್ರತಿಯೊಬ್ಬರ ಮೂಲಭೂತ ಹಕ್ಕು. ಪ್ರತಿಭಟನೆ ಎದುರಾದಾಗ ಪರಿಸರಸ್ನೇಹಿ ಕ್ರಮಗಳ ಮೂಲಕ ಘಟಕ ಆರಂಭಿಸಬಹುದಾಗಿತ್ತು. ಆದರೆ ಪ್ರತಿಭಟನೆ ಹತ್ತಿಕ್ಕಲು ಇಂಥಾ ಹೀನ ಕೆಲಸಕ್ಕಿಳಿದಿರುವುದು ಕಾರ್ಖಾನೆ ಆಡಳಿತ ಮಂಡಳಿಯ ಗೂಂಡಾಗಿರಿ ಸಂಸತಿಯನ್ನು ಬಿಚ್ಚಿಡುತ್ತದೆ. ಸ್ವಾಮಿಯವರ ಅಪಹರಣಕ್ಕೆ ಇಸಿಪಿಎಲ್ ಮತ್ತು ಜಿಂದಾಲ್ ಕಾರ್ಖಾನೆಯ ಹಿರಿಯ ಅಧಿಕಾರಿಗಳೇ ಜವಾಬ್ದಾರಿಯುತರು ಅಂತ ಆರೋಪಿಸಿ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಈಗಾಗಲೇ ಸಿಪಿಐ(ಎಂ) ಹೊಸಪೇಟೆ ತಾಲ್ಲೂಕು ಘಟಕ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ರಿಗೂ ಅಹವಾಲು ಸಲ್ಲಿಸಲಾಗಿದೆ.

2013ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಯಾವುದೇ ಕಾರ್ಖಾನೆ ಸ್ಥಾಪಿಸುವುದರಿಂದ ಅಲ್ಲಿನ ಸಾಮಾಜಿಕ ಮತ್ತು ಪರಿಸರದ ಮೇಲಿನ ಪರಿಣಾಮಗಳ ಬಗ್ಗೆ ವರದಿ ತಯಾರಿಸಲು ತಜ್ಞರ ಸಮಿತಿ ನೇಮಿಸಬೇಕು. ಈ ಸಮಿತಿ ನೀಡಿದ ವರದಿಯ ಆಧಾರದ ಮೇಲೆ ಪ್ರತಿ ಹಳ್ಳಿಗಳಲ್ಲಿ ವಾರ್ಡ್‌ವಾರು ಸಭೆ ನಡೆಸಬೇಕು. ಆದರೆ ಇಲ್ಲಿ ಈ ಯಾವುದು ಸಹ ನಡೆದೇ ಇಲ್ಲ. ಸ್ಥಳೀಯ ಗ್ರಾಮಪಂಚಾಯಿತಿಗಳ ಸಂಪೂರ್ಣ ಒಪ್ಪಿಗೆ (ಎನ್‌ಓಸಿ) ಪಡೆದೇ ಸ್ಥಾಪನೆಯಾಗಬೇಕೆಂಬ ಕಾನೂನು ಸಂಪೂರ್ಣವಾಗಿ ಉಲ್ಲಂಘನೆಯಾಗಿದೆ.

ಇದೆಲ್ಲದರಿಂದ ಕುಪಿತಗೊಂಡಿರುವ ಸಂಘಟನೆಗಳು ಹಲವು ಮುಖ್ಯ ಹಕ್ಕೊತ್ತಾಯಗಳನ್ನಿಟ್ಟುಕೊಂಡು ಹೋರಾಟಕ್ಕಿಳಿದಿವೆ. ಕೂಡಲೇ ಸಾಮಾಜಿಕ ಮತ್ತು ಪರಿಸರದ ಮೇಲಿನ ಪರಿಣಾಮದ ಕುರಿತು ತಜ್ಞರಿಂದ ಪರಿಶೀಲನೆ ನಡೆದು ವರದಿ ತಯಾರಿಸಬೇಕು, ಎಲ್ಲಾ ಗ್ರಾಮಗಳಲ್ಲಿ ಸಭೆ ನಡೆದು ಜನಾಭಿಪ್ರಾಯ ಪಡೆಯಬೇಕು, ಈಗಾಗಲೇ ಜಿಂದಾಲ್ ಸೇರಿದಂತೆ ಹಲವು ಕಾರ್ಖಾನೆಗಳಿಂದ ಜನರಿಗೆ ಅನಾರೋಗ್ಯ ಹೆಚ್ಚಾಗಿದೆ ಹಾಗಾಗಿ ಅವರಿಗೆ ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಬೇಕು ಮತ್ತು ಜಮೀನುಗಳಿಗೆ ಆಗಿರುವ ನಷ್ಟಕ್ಕೆ ಪರಿಹಾರ ನೀಡಬೇಕು. ಇವೆಲ್ಲ ಈಡೇರುವವರೆಗೆ ಕಾರ್ಖಾನೆಯ ಕಾಮಗಾರಿ ಸ್ಥಗಿತಗೊಳಿಸಬೇಕೆಂಬುದು ಸಂಘಟನೆಗಳ ಪ್ರಮುಖ ಒತ್ತಾಯಗಳು.

ಇಷ್ಟೆಲ್ಲಾ ನಡೆಯುತ್ತಿದ್ದರೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮಾತ್ರ ಇತ್ತ ತಲೆಯನ್ನೂ ಹಾಕಿಲ್ಲ. ತನಗೂ ಇದಕ್ಕೂ ಸಂಬಂಧವೇ ಇಲ್ಲವೆಂಬಂತೆ ಎಸಿ ರೂಮಿನಲ್ಲಿ ತಟಸ್ಥವಾಗಿಬಿಟ್ಟಿದೆ. ಕಾರ್ಖಾನೆ ಆರಂಭಕ್ಕೆ ಮುನ್ನ ಒಂದಷ್ಟು ಮರಗಿಡಗಳನ್ನು ನೆಟ್ಟು ಪರಿಸರ ಕಾಪಾಡಬೇಕೆಂಬ ನಿಯಮವನ್ನೂ ಆಡಳಿತ ಮಂಡಳಿ ಪಾಲಿಸಿಲ್ಲ. ಸ್ಥಳೀಯರಿಗೆ ಉದ್ಯೋಗ ಕೊಡುತ್ತೇವೆಂಬ ಭರವಸೆಯೂ ಬಣ್ಣ ಕಳೆದುಕೊಂಡು ಬೆತ್ತಲಾಗಿದೆ. ಕೆಲಸಕ್ಕೆ ತೆಗೆದುಕೊಂಡ ಬೆರಳೆಣಿಕೆಯಷ್ಟು ಸ್ಥಳೀಯ ನೌಕರರಿಗೂ ಈಗ ಸಸ್ಪೆಂಡ್‌ನ ಬೆದರಿಕೆ ಹಾಕಲಾಗುತ್ತಿದೆ.


ಒಟ್ಟಾರೆಯಾಗಿ ಹೇಳಬೇಕೆಂದರೆ, ಭಾರತ ನೆಲದ ಎಲ್ಲಾ ಕಾನೂನು ಕಟ್ಟಳೆಗಳನ್ನು ಒಂದೇ ಏಟಿಗೆ ಮುರಿದುಹಾಕಿ ಹಣಬಲ ಮತ್ತು ಅಧಿಕಾರಬಲದಿಂದಲೇ ಕಾರ್ಖಾನೆ ಸ್ಥಾಪಿಸಲು ಇಸಿಪಿಎಲ್ ಮಾಲೀಕರು ನಿರ್ಧರಿಸಿದಂತಿದೆ. ಇವರ ತಾಳಕ್ಕೆ ತಕ್ಕಂತೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಜನಪ್ರತಿನಿಧಿಗಳು ಕುಣಿಯುತ್ತಿರೋದು ದುರಂತ. ಈಗಾಗಲೇ ಜಿಂದಾಲ್ ಕಂಪನಿಯ ದಾರುಣ ದುಷ್ಪರಿಣಾಮಗಳನ್ನು ಕಂಡು ರೋಸಿಹೋಗಿರುವ ಜನರೇ ಕಾರ್ಖಾನೆ ವಿರುದ್ಧ ಹೋರಾಟಕ್ಕೆ ಟೊಂಕಕಟ್ಟಿ ನಿಂತಿರೋದು ಈ ಭಾಗದ ಜನಪ್ರತಿನಿಧಿಗಳ ಹೊಣೆಗೇಡಿತನಕ್ಕೆ ಮಂಗಳಾರತಿ ಎತ್ತಿದಂತಿದೆ. ಈಗಲಾದರೂ ಕಾರ್ಖಾನೆ, ಜನನಾಯಕರು ಎಚ್ಚೆತ್ತುಕೊಂಡು ಕಾನೂನುಪ್ರಕಾರ ಮುಂದುವರೆದರೆ ಒಳ್ಳೆಯದು. ಇಲ್ಲವಾದಲ್ಲಿ ಹೆಪ್ಪುಗಟ್ಟಿರುವ ಜನಾಕ್ರೋಶಕ್ಕೆ ಯಾರ್‍ಯಾರು ಏನೇನು ಬೆಲೆ ತೆರಬೇಕಾಗುತ್ತೋ ಗೊತ್ತಿಲ್ಲ.

■ ಮುತ್ತುರಾಜು





ಮತ್ತೆ ಗೋವಿಗೆ ಗಂಟುಬಿದ್ದ ಗಂಡಾಗುಂಡಿ ರಾಘು ಸ್ವಾಮಿ



ರಾಮಚಂದ್ರಾಪುರ ಮಠದ ಕಾಮಕಾಂಡ ಕುಖ್ಯಾತಿಯ ಕೊಳಕು ಸ್ವಾಮಿ ರಾಘುನ ಈ ಬಾರಿಯ ಚಾತುರ್ಮಾಸ ವ್ರತಾಚರಣೆ 'ಗೋ ಚತುರ್ಮಾಸ' ಎಂದೇ ಹವ್ಯಕರ ನಡುವೆ ಜನಜನಿತ ಆಗಿಹೋಗಿದೆ! ತನ್ನ ಹೆಸರಿಂದ ಹೊರಹೊಮ್ಮುತ್ತಿರುವ ಕೊಳೆತ ಸಗಣಿ ನಾತ ನಿಯಂತ್ರಣಕ್ಕೆ ನಿರ್ಲಜ್ಜ ರಾಘು ಮಾಣಿ ಅಂತಿಮವಾಗಿ ಮತ್ತದೇ ಮೂಕ ಗೋವು-ಗೂಳಿಗೆ ಗಂಟು ಬಿದ್ದಿದ್ದಾನೆ! ಸತತ ಎರಡು ವರ್ಷದಿಂದ ಮೈ-ಮುಖಕ್ಕೆ ಮೆತ್ತಿಕೊಂಡಿರುವ ಬುಟ್ಟಿಗಟ್ಟಲೆ ಸಗಣಿ ತೊಳೆದುಕೊಳ್ಳಲು ಈ ಷಡ್ಯಂತ್ರ ತಜ್ಞ ಗೋಚತುರ್ಮಾಸ ಆಚರಣೆ ಮಾಡುತ್ತಿದ್ದಾನೆಂದು ಕಾವಿಗಳೇ ವ್ಯಾಖ್ಯಾನ ಮಾಡುತ್ತಿದ್ದಾರೆ.

ಎರಡೆರಡು ರೇಪ್ ಪ್ರಕರಣ, ಅಸಂಖ್ಯ ಏಕಾಂತ ದರ್ಶನ, ಕನ್ಯಾಸಂಸ್ಕಾರ, ಆಗದವರಿಗೆ ಹಲ್ಲೆ-ಜಾತಿ ಬಹಿಷ್ಕಾರ, ಅರಣ್ಯ ಅತಿಕ್ರಮಣ, ಪೊಲೀಸರು-ಆಳುವವರು-ನ್ಯಾಯಾಲಯಗಳನ್ನೇ ದಿಕ್ಕು ತಪ್ಪಿಸಿದ ಸಾಹಸ, ರೇಪ್ ರುಜುವಾತಾದೀತೆಂದು ವೈದ್ಯಕೀಯ ಪರೀಕ್ಷೆಗೆ ಚಕ್ಕರ್ ಹಾಕಿದ್ದು, ಸಾಲು-ಸಾಲು ನ್ಯಾಯಾಧೀಶರೇ ರೇಪ್‌ಕೇಸ್ ವಿಚಾರಣೆಯಿಂದ ರೀಟೈರ್ ಆಗಿದ್ದು, ನೆರ ಸಂತ್ರಸ್ತರಿಗೆ ಮನೆ ಕಟ್ಟಿಕೊಡುತ್ತೇನೆಂದು ಮೋಸ ಮಾಡಿದ್ದು, ಧರ್ಮಚಕ್ರ ಟ್ರಸ್ಟ್ ವಿದೇಶಿ ಹಣ ಸ್ವಾಹ ಮಾಡಿದ್ದು, ಗೋ ರಕ್ಷಣೆ ಹೆಸರಲ್ಲಿ ಹಣ ಕೂಡಿಸಿದ್ದು, ಮಠದ ಗೋವುಗಳನ್ನೇ ಕಸಾಯಿಖಾನೆಗೆ ಮಾರಿದ್ದು, ಕೊನೆಗೆ ನ್ಯಾಯಾಲಯದಲ್ಲೇ ಸ್ತ್ರೀ ಸುಖಸುಖಿ ಸಂತೃಪ್ತ ಸಂತನೆಂದು ಶರಾ ಪಡೆದ ರಗಳೆ ರಾಘು ಈಗ ತಾನೊಬ್ಬ 'ಸುಬಗ ಸನ್ಯಾಸಿ' ಎಂದು ತೋರಿಸಿಕೊಳ್ಳಲು ಮುಗ್ಧ ಗೋವನ್ನು ಮುಂದಿಟ್ಟುಕೊಂಡು ಹೊಸ ಮಸಲತ್ತು ಶುರು ಹಚ್ಚಿಕೊಂಡಿದ್ದಾನೆ. 'ಗುರುಗಳೇ, ನಿಮ್ಮ ಏಕಾಂತ ದರ್ಶನಕ್ಕೆ ಭಂಗ ಬರದಂತೆ ಕಾವಲು ನಾವಿದ್ದೇನೆ' ಎನ್ನುವ ಬಳಗದ ಒಬ್ಬೊಬ್ಬರನ್ನೇ ಕರೆದು 'ಗೋ ಸೇವಕ-ಗೋರಕ್ಷಕ' ಎಂಬೆಲ್ಲ ಬೋಗಸ್ ಬಿರುದು ಕೊಟ್ಟು ಸನ್ಯಾಸಿ ತನ್ನ 'ಮಠಬಾನಿ' ಪಡೆ ಕರಗದಂತೆ ತಂತ್ರಗಾರಿಕೆ ಮಾಡುತ್ತಿದ್ದಾನೆ.

ಕಾಮ ದುಘಾ!!

ರಾಘು ಹುಟ್ಟಾ ಚಾರ್ ಸೌ ಬೀಸ್. ಯಾರನ್ನು ಬೇಕಿದ್ದರೂ ವಶೀಕರಿಸಿಕೊಳ್ಳುವ ಕಣ್ಕಟ್ಟು ವಿದ್ಯೆ ಆತ ಸಿದ್ಧಿಸಿಕೊಂಡಿದ್ದಾನೆ. ಬುದ್ಧಿವಂತರಾದ ಸ್ವ-ಜಾತಿ ಹವ್ಯಕ ಬ್ರಾಹ್ಮಣರನ್ನಷ್ಟೇ ಅಲ್ಲ, ಆಳುವವರು, ಆರ್‌ಎಸ್‌ಎಸ್‌ಗರು, ರಾಜಕಾರಣಿಗಳು, ಅಧಿಕಾರಿಗಳು, ದಶಕಗಟ್ಟಲೆ ದಾಂಪತ್ಯ ನಡೆಸಿದ ಗೃಹಿಣಿಯರು, ಆಗತಾನೆ ಹರೆಯಕ್ಕೆ ಕಾಲಿಟ್ಟ ಬಾಲಕಿಯರು... ಹೀಗೆ ಯಾರನ್ನು ಬೇಕಿದ್ದರೂ ಬುಟ್ಟಿಗೆ ಹಾಕಿಕೊಂಡು 'ಕಾಮದುಘಾ' ಯೋಜನೆ ರಾಘು ಜಾರಿಗೊಳಿಸಿಕೊಳ್ಳಬಲ್ಲ. ಕಾಮದುಘಾ ಎಂದರೆ 2005ರಲ್ಲಿ ರಾಘು ಗೋತಳಿ ರಕ್ಷಣೆ- ಅಭಿವೃದ್ಧಿಗೆಂದು ಘೋಷಿಸಿದ್ದ ಒಂದು ಯೋಜನೆ. ಆತನೇ ಹೇಳಿದ ಹಾಗೆ ಕಾಮದುಘಾ ಎಂದರೆ ಬಯಸಿದ್ದನ್ನು ಪಡೆದುಕೊಳ್ಳುವುದಾಗಿದೆ.

ಈ ಕಾಮದುಘಾ ಗೋವಿನ ಮೂಲಕ ರಾಘು ತುಂಬ ವ್ಯವಸ್ಥಿತವಾಗಿ ಮಾಡಿಕೊಂಡಿದ್ದಾನೆ! ಗೋವನ್ನು ಮುನ್ನಲೆಯಲ್ಲಿಟ್ಟು ಹಿನ್ನೆಲೆಯಲ್ಲಿ ಹೆಣ್ಣು-ಹೊನ್ನು-ಮಣ್ಣು ಬಯಸಿ-ಬಯಸಿ ಭೋಗಿಸಿದ್ದಾನೆ. 2005ರ ಸುಮಾರಿಗೆ ರಾಘುನ ತಲೆಯಲ್ಲಿ ರಾಜ(ಕೀಯ) ಸನ್ಯಾಸಿ ಆಗುವ ಹುಳುವೊಂದು ಹೊಕ್ಕಿತ್ತು, ಪೇಜಾವರ ಸ್ವಾಮಿಯಂತೆ ಅಧಿಕಾರಸ್ಥರ ಆಸ್ಥಾನ ಸಂತನಾಗುವ ಮತ್ತು ಶೃಂಗೇರಿ ಮಠದಂತೆ ತನ್ನ ರಾಮಚಂದ್ರಾಪುರ ಮಠವನ್ನು ಸಕಲ ಜಾತಿಯ ಧನಿಕರ ಸೆಳೆವ ಆತ್ಮಾತ್ಮಿಕ-ಕೇಂದ್ರ ಮಾಡುವ ಮಹತ್ವಾಕಾಂಕ್ಷೆಯ ಸ್ಕೆಚ್ ಆತ ಹಾಕಿಕೊಂಡಿದ್ದ. ಆಗಾತ ಕೀರ್ತಿ ಮತ್ತು ಕಾಮದ ದೂ(ದು)ರಾಲೋಚನೆಯ ಸಾಧನೆ ಸಾಧನವಾಗಿ ಹಸು-ಹೋರಿ ಬಳಸಿಕೊಂಡಿದ್ದ.


ದೇಸಿ ಗೋ ತಳಿ ಸಂರಕ್ಷಣೆ-ಅಭಿವೃದ್ಧಿ-ಗೋ ಉತ್ಪನ್ನ ಮಾರುಕಟ್ಟೆ ಸೃಷ್ಟಿ ಎಂಬ ತ್ರಿವಿಧ ತಂತ್ರಗಾರಿಕೆಯಲ್ಲಿ ರಾಘು 2006ರಲ್ಲಿ ಶ್ರೀರಾಮಾಯಣ ಮಹಾಸತ್ರ- ಗೋಯಾತ್ರೆ ಹಾಗು ರಾಷ್ಟ್ರೀಯ ಗೋ ಸಮ್ಮೇಳನ ಮಾಡಿ ದೊಡ್ಡ ಮಟ್ಟದ ಸದ್ದು-ಸುದ್ದಿ ಮಾಡಿದ್ದ. ರಾಘುನ ಗೋ ಗಲಾಟೆಗೆ ಸರ್ಕಾರ ನಡೆಸುವ ಪುಢಾರಿಗಳು, ಸಾರ್ವಜನಿಕರು, ಕಾವಿ ಜೀವಿಗಳೆಲ್ಲ ಏಕಕಾಲದಲ್ಲಿ ಆಕರ್ಷಿತರಾಗಿ ಹೋದರು. ಆಗಲೇ ರಾಘುಗೆ 'ಗೋ ಸ್ವಾಮಿ' ಎಂಬ ಹುಸಿ ಹೆಸರೊಂದು ಬಿದ್ದಿದ್ದು.

ಸಗಣಿ ಸ್ವಾಮಿ

ಈ ಗೋ ಸ್ವಾಮಿ ಎಂಬುದು ರಾಘುನೇ ಆಯ್ಕೆ ಮಾಡಿಕೊಂಡಿದ್ದ ಅಡ್ಡ ಹೆಸರು. ಆದರೆ ನಾಮಕರಣ ಮಾಡಿದ್ದು ಮಾತ್ರ ಸಂಘ ಪರಿವಾರ. ರಾಘುನ ಷಡ್ಯಂತ್ರಗಾರಿಕೆ ಹಾಗು ಆರ್‌ಎಸ್‌ಎಸ್‌ನ ಕುತಂತ್ರಗಾರಿಕೆಯ ಫಲವಾಗಿ ರಾಘುಗೆ ದೇಶವ್ಯಾಪಿ ಗೋಸ್ವಾಮಿ ಎಂಬ ಕೀರ್ತಿ ಬಂದುಬಿಟ್ಟಿತು. ಕು.ಸಿ. ಸುದರ್ಶನ್ ಆರ್‌ಎಸ್‌ಎಸ್‌ನ ಸರಸಂಘ ಚಾಲಕನಾಗಿದ್ದಾಗ ಈ ದೇಶದ ಅಲ್ಪಸಂಖ್ಯಾತರು-ದಲಿತರ ವಿರುದ್ಧ ಹಿಂದೂಗಳನ್ನು ಛೂಬಿಡಲು ಗೋವೂ ಒಂದು ಪ್ರಬಲ ಅಸ್ತ್ರವಾಗುತ್ತದೆಂಬ ತೀರ್ಮಾನಕ್ಕೆ ಸಂಘ ಪರಿವಾರ ಬಂದಿತ್ತು, ಈ ಗೋ ರಾಜಕಾರಣಕ್ಕೆ ಚೆಡ್ಡಿಗಳು ರಾಘುನನ್ನು ನಾಜೂಕಾಗಿ ಬಳಸಿಕೊಂಡರು. ಹಣ-ಹೆಂಗಸಿನ ಹಸಿವಿನ ರಾಘು ತನ್ನ 'ಬೇಟೆ'ಗೆ ಸಂಘ ಪರಿವಾರದ ಸೈನ್ಯ ಸಿಗುತ್ತದೆಂದು "ಅಂಬಾ.... ಅಂಬಾ....." ಎನ್ನುತ್ತಲೇ ಊರೂರು ಅಲೆಯುತ್ತ ಮೋಜು ಮಜಾ ಉಡಾಯಿಸಿದ.

ಅದೇ ಹೊತ್ತಿಗೆ 'ಕೋಜಾ' ಸರ್ಕಾರ ರಾಜ್ಯದಲ್ಲಿ ಅಧಿಕಾರ ಹಿಡಿದಿತ್ತು, ಜೆಡಿಎಸ್‌ನ ಕುಮಾರಸ್ವಾಮಿ ಜತೆ ರಾಘುಗೆ ಬಿಜೆಪಿ ಪರಿವಾರದ ಯಡ್ಡಿ 'ಸಂಗತ ಇದ್ದಷ್ಟೇ ಸ್ನೇಹ-ಸಲುಗೆ ಆ ಹೊತ್ತಿಗೇ ಇತ್ತು, ಯಡ್ಡಿ-ಕುಮ್ಮಿ ಸರ್ಕಾರ ಸ್ಥಾಪನೆಯಲ್ಲಿ ರಾಘುನ ದಲ್ಲಾಳಿಗಿರಿಯೂ ಕೆಲಸ ಮಾಡಿತ್ತು. ಈ ಋಣ ತೀರಿಸಲು 'ಕೋಜಾ' ಸರ್ಕಾರದ ಅಧಿಪತಿಗಳು ರಾಘುನ ಗೋ ಗಾಂಚಾಲಿಗೆ ಎಲ್ಲ ರೀತಿಯ ನೆರವು-ಸಹಕಾರ ನೀಡಿದ್ದರು. ಆಗ ರಾಘು-ಕುಮ್ಮಿ ಸಂಬಂಧ ಅದೆಷ್ಟು ಗಾಢವಾಗಿತ್ತೆಂದರೆ, ಹೊತ್ತಲ್ಲದ ಹೊತ್ತಲ್ಲಿ-ನಡುರಾತ್ರಿಯಲ್ಲಿ ಕೊಲ್ಲೂರು ದೇಗುಲ ಬಾಗಿಲು ತೆರೆದು ರಾಘು ಅಂದಿನ ಸಿಎಂ ಕುಮ್ಮಿಯನ್ನು ಮೂಕಾಂಬಿಕೆ ಎದುರು ನಿಲ್ಲಿಸಿ ವಿಶೇಷ ಪೂಜೆ ಮಾಡಿದ್ದ!

ಸಿಎಂ ಕುಮ್ಮಿ-ಡಿಸಿಎಂ ಯಡ್ಡಿಯ ಕಾವಿ ಪ್ರಭಾವಳಿಯಲ್ಲಿ ರಾಘುನ ಹೊಳಪಿನ ಖದರೇ ಬದಲಾಗಿಹೋಯಿತು. ರಾಘು ನಡೆಸಿದ ಗೋ ಸಮ್ಮೇಳನ, ರಾಮಾಯಣ ಮಹಾಸತ್ರ, ಗೋ ಯಾತ್ರೆ ಮುಂತಾದ ತರಹೇವಾರಿ ಗೋ ಸಂಬಂಧಿತ ಸಭೆ-ಸಮಾರಂಭಕ್ಕೆ ಸರ್ಕಾರಿ ಬಲದಿಂದ ಭರ್ಜರಿ ಆರ್ಭಟ ಬಂದುಬಿಟ್ಟಿತ್ತು, ಸಾಕ್ಷಾತ್ ಸಿಎಂ-ಡಿಸಿಎಂಗಳೇ ರಾಘುನ ಗೋ ಸಮಾರಂಭಗಳಲ್ಲಿ ಠಳಾಯಿಸಿದ್ದರು. ರಾಮಚಂದ್ರಾಪುರ ಮಠ ದೇಶಾದ್ಯಂತ ಸುದ್ದಿಯಾಗಿದ್ದೇ ಕುಮ್ಮಿ ಸಹಕಾರದಲ್ಲಿ ನಡೆದ ವಿಶ್ವ ಗೋ ಸಮ್ಮೇಳನದ ನಂತರ. ಯಡ್ಡಿಯ ಬಿಜೆಪಿ ಸರ್ಕಾರ ಬಂದಾಗಂತೂ ರಾಘುನ ರಾಜಕೀಯ ವರ್ಚಸ್ಸು ಭಯಾನಕವಾಗಿ ವೃದ್ಧಿಯಾಗಿಬಿಟ್ಟಿತು. ಕೋಟ್ಯಂತರ ರೂ. ಸ್ಥಿರ-ಚರ ಆಸ್ತಿಯ ಗೋಕರ್ಣ ದೇವಾಲಯ ಅನಾಮತ್ತಾಗಿ ಎತ್ತಿ ರಾಘು ಜೋಳಿಗೆಗೆ ಸಿಎಂ ಆಗಿದ್ದ ಯಡ್ಡಿ ಇಳಿಸಿದ್ದರು. ಒಂದೆಡೆ ರಾಘುನ ತೆವಲುಗಳ ತೀರಿಕೆಗೆ ರಾಜಕೀಯ ಶಕ್ತಿ ಸಿಕ್ಕರೆ ಮತ್ತೊಂದೆಡೆ ಗೋ ಮೂಲಕ ಹಿಂದೂತ್ವದ ರಾಜಕಾರಣ ರಾಘುನ ಮೂಲಕ ಸಂಘ ಪರಿವಾರ ಯೋಜನಾಬದ್ಧವಾಗೇ ಮಾಡಿತು. ಈ ಕೀರ್ತಿಯ ಉತ್ತುಂಗದಲ್ಲಿದ್ದಾಲೇ ಗೋ ಮುಖವಾಡದ ರಾಘುನ ಗೂಳಿ ಚಾಳಿ ಶುರುವಾಗಿತ್ತು. ಯಾರ್‍ಯಾರದೋ ಮ
ಗೃಹಿಣಿಯರಿಗೆ ಗಾಳ ಹಾಕುವ, ಅಮಾಯಕ ಹುಡುಗ
ಬುಟ್ಟಿಗೆ ಹಾಕಿಕೊಳ್ಳುವ ಹೀನಾತಿಹೀನ ಸ್ಕೆಚ್ ಹಾಕು
ರಾಘುಗೆ ನಿತ್ಯಕರ್ಮದಂತಾಗಿ ಹೋಯಿತು. ಆಗಲೇ ಅ
'ಸಗಣಿ ಸ್ವಾಮಿ' ಎಂಬ ಪುನರ್ ನಾಮಕರಣ ಆಗಿ



ಗಿರಿನಗರ ಮ

ಗೋ ದಂಧೆ

ಯಾವಾಗ ವಿಶ್ವ ಗೋ ಸಮ್ಮೇಳನ ಎಂಬ ಜಾ
ಗೋ ದಂಧೆ ತಂತ್ರಗಾರಿಕೆ ಯಶಸ್ವಿಯಾಗಿ ರಾಘು
ಮುಗಿಸಿದನೋ, ಆಗಾತನ ಕಾವಿ ಕಳೆಯೇ ಬದ
ಹೋಯಿತು. ದೇಶಿ ಗೋವು ತಳಿ ಕಾಪಾಡುವ ನೆ
ರಾಮಚಂದ್ರಾಪುರ ಮಠ ದಶದಿಕ್ಕಿನಿಂದ ಭರ್ಜರಿ
ಎತ್ತಿತು. ದೇಶದ ನಾನಾಕಡೆಯಿಂದ ನಾನಾ ನಮೂ
ತಳಿಯ ಗೋವು-ಗೂಳಿಗಳನ್ನು ರಾಘು ತರಿಸಿಕೊ
ಯಾರ್‍ಯಾರೋ ಲೋಡುಗಟ್ಟಲೆ ಹಿಂಡಿ, ಹ
ನೀಡತೊಡಗಿದರು. ರಾಜ್ಯದ 13 ಕಡೆ ಗೋಶಾಲೆ
ತೆರೆದು ಕುಳಿತುಕೊಂಡ. ಗೋಶಾಲೆಗೆಂದು ಕಂಡ-ಕ
ಆರಣ್ಯ ಒತ್ತುವರಿ ಮಾಡಿಕೊಂಡ. ರಾಜಕೀಯ ಪ್ರ
ಬಳಸಿ ಅತಿಕ್ರಮಣ ಅರಣ್ಯ ಇಲಾಖೆ ತೆರವು ಮಾಡ
ನೋಡಿಕೊಂಡ. ರಾಘುನ ಮಂತ್ರಾಕ್ಷತೆಯ ತಾಕತ್ತಿಗೆ
ಆಳುವವರು ಆತನ ಕೆಲವು ಗೋಶಾಲೆಗಳಿಗೆ ಸ
ಅನುದಾನವೂ ಕೊಟ್ಟರು.

ರಾಘುನ ಗೋಶಾಲೆಗಳು ಮಜಬೂತಾಗಿ ಬೆಳ
ದಷ್ಟ-ಪುಷ್ಟ ಹಸು-ಎತ್ತು-ಹೋರಿಗಳು ಗೋ
ತುಂಬಿತುಳುಕಿತು. ರಾಜಸ್ಥಾನ ಮುಂತಾದ ಕಡೆಯ
ಗೋತಳಿಗಳು ಬಂದವು. ಗೋಶಾಲೆ ನಿರ್ವಹಣೆಗೆ
ಕೊರತೆಯಂತೂ ಆಗಲೇ ಇಲ್ಲ.

ಈ ಪ್ರಸಿದ್ಧಿಯನ್ನು ಬಿಸ್ನೆಸ್ ಆಗಿ ಎನ್
ಮಾಡಿಕೊಳ್ಳುವ ದುರಾಸೆಗೆ ರಾಘು ಬಿದ್ದ.
ರಾಮದೇವನಂತೆ ಗೋದಂಧೆ ನಡೆಸುವ ಯೋಜನೆ ಹ
ಗೋತಳಿ ರಕ್ಷಿಸುವ, ಸಾಕುವ ಮಾತಾಡುತ್ತಲೇ
ಉತ್ಪನ್ನ ತಯಾರಿಕೆಯ ದೊಡ್ಡ ವ್ಯವಹಾರ ಮಾ
ಮಾತಾಡಿದ. ಗೋ ಮೂತ್ರ ಅರ್ಕ, ಗೋ ಮ
ಸೋಪು, ಸೊಳ್ಳೆ ಬತ್ತಿ, ತರತರದ ಔಷಧಿ-
ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು.
ಗೋದಂಧೆ ಬರ್ಕತ್ತಾಗಲಿಲ್ಲ.

ಕಸಾಯಿಖಾನೆಗೆ ರವಾನೆ

ಪ್ರಚಾರದ ಹುಚ್ಚಿಗೆ ದೊಡ್ಡ ದೇಶಿ ತಳಿ ದನ-
ಸಾಕುತ್ತೇನೆ, ಹೈನೋದ್ಯಮ, ಗೋ ಮೂತ್ರ-ಸಗಣಿ
ತಯಾರಿಕೆ ಮಾಡುತ್ತೇನೆ ಎಂದು ಕೊಚ್ಚಿಕೊಂಡಿದ್ದ ರಾ




ಆಕಳು-ಹೋರಿಗಳು

ಯುತ್ತ ಗೋವಿನ ಬಗ್ಗೆ ಆಸಕ್ತಿ ಕಡಿಮೆ ಆಯ್ತು. ತನ್ನ ಲಿಮಸ್' ಪಶುಪಾಲನೆಯಲ್ಲಿ ತೊಡಗಿಸುವುದು ವಾಯ್ತು. ಗೋಕರ್ಣ ದೇವಸ್ಥಾನ ಅಧೀನಕ್ಕೆ ತ್ತಿದ್ದಂತೆಯೇ ನಿರಾಯಾಸವಾಗಿ ಕೊಪ್ಪರಿಗೆಗಟ್ಟಲೆ ಕಾಸು ಸುವ ಮಹಾಬಲೇಶ್ವರ ಬಗ್ಗೆಯೇ ಭಕ್ತಿ ಹೆಚ್ಚಾಯ್ತು. ದ ಗೋ ಕಾಳಜಿ ಬೇಡವಾಯ್ತು. 2010ರ ಹೊತ್ತಿಗೆ ಕಥಾ' ಪ್ರಹಸನ ರಾಘು ಆರಂಭಿಸಿದ್ದ. ಇದರಿಂದ ನ ಜತೆಗೆ ಕಾಮಿನಿಯರ ಸಹವಾಸವೂ ಸಲೀಸಾಗಿ ತ್ತು. ಹೀಗಾಗಿ ರಾಘುನ 13 ಕೊಟ್ಟಿಗೆಯಲ್ಲಿದ್ದ ಗೋವುಗಳು ಒಣಗತೊಡಗಿದವು.

ಗುರುವಿನ ದೌರ್ಬಲ್ಯ ಬಲ್ಲ ಯಾರ್‍ಯಾರೋ ಶಾಲೆಗಳಲ್ಲಿ ಕಮಿಷನ್ ವ್ಯವಹಾರ, ಗೋ ಮಾರಾಟ, ಲ್ಲು-ಹಿಂಡಿಯ ಸುಳ್ಳು ಲೆಕ್ಕಾಚಾರ ನಡೆಸಿ ಡಗಾಗಿಹೋದರು. ಗೋವುಗಳು ಕಾಯಿಲೆ ಬಿದ್ದು ವಾಗಿ-ಹುಳುವಾಗಿ ಸಾಯತೊಡಗಿದವು. ಗಟ್ಟಿ-ಟ್ಟಾದವು ಕಸಾಯಿಖಾನೆಗೆ ರವಾನೆಯಾದವು. ಗೋ ಳನದ ಮೂಲಕ ಇಡೀ ದೇಶದ ಗೋವು-ಗೂಳಿ ಕೆಯ ಗುತ್ತಿಗೆ ತಾನೊಬ್ಬನೇ ಪಡೆದಿದ್ದೇನೆಂದು ರಿಸಿಕೊಂಡಿದ್ದ ರಾಘು ಮಾರುಕಟ್ಟೆಯಲ್ಲಿ ಗೋ ಉತ್ಪನ್ನ ಹೊಡೆಯುತ್ತಿದ್ದಂತೆಯೇ ರಾಮಕತೆ ನೆಪದ ಕತೆಯಲ್ಲೇ ಹೆಚ್ಚೆಚ್ಚು ತೊಡಗಿಸಿಕೊಳ್ಳಲಾರಂಭಿಸಿದ. ದ ನಾನಾಕಡೆಯಿಂದ ತರಿಸಲಾಗಿದ್ದ ಗೋವುಗಳು ಲೆನಾಡು-ಕರಾವಳಿಯ ವಾತಾವರಣಕ್ಕೆ ಂದಿಕೊಳ್ಳಲಾರದೇ ಜೀವಬಿಟ್ಟವು. ರಾಮಚಂದ್ರಾಪುರ ದಿಂದ ಕಸಾಯಿಖಾನೆಗೆ ಸಾಗಿಸುತ್ತಿದ್ದ ಗೋವುಗಳ ಸ ಸಿಕ್ಕಿಬಿದ್ದು ಪೊಲೀಸರ ಪಾಲೂ ಆಗಿತ್ತು. ಆದರೆ ನ ರಾಜಕೀಯ ಪ್ರಭಾವಕ್ಕೆ ಸಿಕ್ಕಿದ ಕೇಸು ಹಳ್ಳ ದುಹೋದವು!!

ಈಗ ರಾಘುನ ಹದಿಮೂರು ಗೋಶಾಲೆಗಳಲ್ಲೂ -ಎತ್ತು-ಹೋರಿಗಳು ಬೆರಳೆಣಿಕೆಯಷ್ಟಿವೆ. ಇದರಲ್ಲೂ ು ಕೊಡುವ ಗೋವುಗಳಿಗೆ, ಊಳುವ ಎತ್ತುಗಳಿಗಷ್ಟೇ ಡಿ-ಹುಲ್ಲು-ಆರೈಕೆ. ಉಳಿದವುಗಳು ಎದುಸಿರುಬಿಡುತ್ತಿವೆ. ಶದ ಬೇರೆ-ಬೇರೆ ಭಾಗದಿಂದ ರಾಘು ಒಣ ಬಿಗೆಂದು ತರಿಸಿಕೊಂಡಿದ್ದ ವೈವಿಧ್ಯಮಯ ತಳಿಯ -ಕರುಗಳನ್ನು ಸಾಕುವ ವಿಧಾನ ಗೊತ್ತಿಲ್ಲದೆ



ಯಿಸಲಾಗಿದೆ! ಮಠದ ಗೋಶಾಲೆಯ ಕೆಲವು ಸ್ತುವಾರಿಗಳಿಗೆ ದನ-ಕರು-ಗೂಳಿ ಕಸಾಯಿಖಾನೆಗೆ ರಾಟ ಮಾಡುವ ಬಿಸಿನೆಸ್ ಕೈಗೂಡಿದೆ. ಕಳೆದ ತಿಂಗಳು ತ್ತರ ಕನ್ನಡದ ಕುಮಟಾದ ಹೊಸಾಡ ಎಂಬಲ್ಲಿಯ ಘುನ ಗೋಶಾಲೆಯಿಂದ ಕಸಾಯಿಖಾನೆಗೆ ಾಟವಾಗುತ್ತಿದ್ದ ದನಗಳನ್ನು ಹಿಂದೂ ಪುಂಡರು ಡಿದುಕೊಟ್ಟದ್ದೂ ಆಗಿದೆ. ಗೋಕಳ್ಳರಿಗೆ ಮಠದ ಶಾಲೆಯ ನಿಕಟ ನಂಟಿದೆ ಎಂದು ಹಿಂದೂ ಜಾಗರಣಾ ಕೆಯೇ ಆರೋಪಿಸಿದೆ.

ರಾಜಸ್ತಾನದ ಪತ್ಮೇಡಾ ಗೋಶಾಲೆಯಿಂದ ರಾಘು ಗೋ ಸಮ್ಮೇಳನದ ಜೋಶ್‌ನಲ್ಲಿ 2992 ಧ್ಯಮಯ ತಳಿಯ ಹಸುಗಳನ್ನು ತರಿಸಿದ್ದ. ಅದರಲ್ಲಿ ಡಾ 10ರಷ್ಟು ಜಾನುವಾರುಗಳೀಗ ರಾಘುನ ಟ್ಟಿಗೆಗಳಲ್ಲಿ ಇಲ್ಲ, ಇವುಗಳೆಲ್ಲ ಕಸಾಯಿಖಾನೆಗೆ ಸಲ್ಪಟ್ಟಿವೆ ಎಂದು ಮಠದ ಮಾಣಿಗಳೇ ಪಿಸುಗುಡುತ್ತಾರೆ. ಸ ಮಠಕ್ಕೂ ಕಸಾಯಿಖಾನೆಗೂ ಅಂಟಿದ ನಂಟಿನ ಮಜ್‌ಮಜಾ ಸುದ್ದಿಗಳಿವೆ! ಇಷ್ಟಾದರೂ ಬೇರೆ-ಕಡೆಯಿಂದ ದೊಡ್ಡ-ದೊಡ್ಡ ತಳಿಯ ದನಗಳನ್ನು ಸ ಹಲುಬೇನೂ ಮಠದ ಮಾಫಿಯಾಕ್ಕೆ ಕಮ್ಮಿಯಾಗಿಲ್ಲ. ದೆ ಪತ್ಮೇಡಾದ ಗೋಶಾಲೆಯವರು ಮತ್ತೆ ಗೋವು ಡಲು ನಿರಾಕರಿಸಿದ್ದಾರೆ! "ಕೊಟ್ಟ ಗೋವುಗಳ ಲೆಕ್ಕವೇ ನಾಗಿಟ್ಟಿಲ್ಲ, ಕಾಳಜಿಯಿಂದ ಸಾಕದೇ ಸಾಯಿಸಿದ್ದೀರಿ. ಹಸುಗಳ ಕೇಳಲು ನಾಚಿಕೆ ಆಗದಾ?" ಎಂದು ಗೆ ಪತ್ಮೇಡಾ ಗೋಶಾಲೆ ಉಸ್ತುವಾರಿಗಳು ತರಾಟೆಗೆ ದುಕೊಂಡಿರುವುದು ಗಿರಿನಗರ ಶಾಖಾಮಠದಲ್ಲಿ ಹವ್ಯಕರ ಸು ರಸಗವಳದಂತಾಗಿದೆ!! ಇದೊಂದು ದುಡ್ಡು ಡುವ ಗೋ ಜಾಲ.

...ತ್ತೊಂದು ಗೋ ಯಾತ್ರೆ ಗಿಮಿಕ್!

ಸನ್ಯಾಸಿಯಾದವನು ಹೆಣ್ಣು-ಹೊನ್ನು-ಮಣ್ಣಿಂದ ದೂರ ಲಿರಬೇಕೆಂದು ಸನ್ಯಾಸ ಸಂಹಿತೆ. ಆದರೆ ರಾಘು ಈ ಗ್ಗಳು ಕಾಸು ಹೊದ್ದುಕೊಂಡೇ ಅನುಭವಿಸುತ್ತಿರುವುದು

ಜಗಜ್ಜಾಹೀರಾಗಿರುವ ಸತ್ಯ. ನ್ಯಾಯಾಲಯವೇ ಈತ ಬ್ರಹ್ಮಚರ್ಯ ಭಂಗ ಮಾಡಿಕೊಂಡಿರುವ ಸನ್ಯಾಸಿ ಎಂದು ಹೇಳಿದೆ; ರೇಪ್ ಮುಕ್ತ ಆದರೆ ಸಂಭೋಗ ಸಂತೃಪ್ತನೆಂದು ಸ್ಪಷ್ಟವಾಗಿ ವ್ಯಾಖ್ಯಾನಿಸಿದೆ. ಈ ಡ್ಯಾಮೇಜಿನ ಜತೆಗೇ ಮಠಬಾನಿ ಗೂಂಡಾಗಿರಿ ಮಾಡಿರುವ ರಾಘು ಸ್ವ-ಜಾತಿ ಹವ್ಯಕರ ನಡುವೆ ತಲೆ ಎತ್ತಿ ನಿಲ್ಲದ ದುಸ್ಥಿತಿ ತಲುಪಿದ್ದಾನೆ. ಡಾ. ಟಿ.ಟಿ. ಹೆಗಡೆಯಂಥ ಸಜ್ಜನ ವಯೋವೃದ್ಧ ಹವ್ಯಕ ಮುಖಂಡನ ಮೇಲೆ ರೌಡಿಗಳಿಂದ ಹಲ್ಲೆ ಮಾಡಿಸಿದ ಪಾಪ, ಸಾತ್ವಿಕ ಹವ್ಯಕ ಸಮಾಜ ಒಡೆದು ಹಣಿದ ಅನಾಚಾರ, ಗೋಲ್‌ಮಾಲ್‌ಗಳಿಂದ ರಾಘು ಕಾವಿ ಲೋಕದಲ್ಲೂ ಮಾನ-ಮರ್ಯಾದೆ ಕಳೆದುಕೊಂಡಿದ್ದಾನೆ. ಈ ಎಲ್ಲ ಡ್ಯಾಮೇಜ್ ಕಂಟ್ರೋಲ್‌ಗೆ ರಾಘು ಮತ್ತೆ ಗೋ ಯಾತ್ರೆಗೆ ರೆಡಿಯಾಗಿದ್ದಾನೆ.

ಈ ಎರಡು ವರ್ಷ ಆತ ಕಳೆದುಹೋದ ಇಮೇಜು ಗಳಿಸಲು ಮಾಡದ ಸರ್ಕಸ್ಸೇ ಇಲ್ಲ. ನ್ಯಾಯ ಕೊಂಡುಕೊಳ್ಳಲು ಕೊಪ್ಪರಿಗೆ ಕಾಸು ಕರಗಿಸಿದರೂ ಮಾನ ಮಾತ್ರ ಸಿಕ್ಕಿಲ್ಲ. ಈಗಾತ ಕೊನೆಯ ಪ್ರಯತ್ನ ಎಂಬಂತೆ ಗೋವಿಗೇ ಗಂಟುಬಿದ್ದಿದ್ದಾನೆ. ಹಿಂದೆಲ್ಲಾ ತನಗೆ ದೇಶಾದ್ಯಂತ ಗೌರವ-ಪ್ರಸಿದ್ಧಿ-ಕಾಂಚಾಣ-ಕಾಮಿನಿಯರ ಕರುಣಿಸಿದ್ದ ಗೋವೇ ಈಗಲೂ ಕಾಪಾಡುತ್ತದೆಂಬ ನಂಬಿಕೆಯಲ್ಲಿ ಗೋ ಪ್ರಹಸನಕ್ಕೆ ರಾಘು ಈಗ ಬಣ್ಣ ಹಚ್ಚುತ್ತಿದ್ದಾನೆ.

ಗೋ ಚತುರ್ಮಾಸ ಮುಗಿದ ತಕ್ಷಣವೇ ದೇಶದ ಏಳು ರಾಜ್ಯಗಳಲ್ಲಿ ಗೋ ಯಾತ್ರೆ ರಾಘು ನಡೆಸುತ್ತಾನಂತೆ. ಒಂದು ದೊಡ್ಡ ನಂದಿ ರಥದ ಜತೆಗೆ 9 ರಥಗಳು ತಮಿಳುನಾಡು, ಗೋವಾ, ಮಹಾರಾಷ್ಟ್ರ, ಸೀಮಾಂಧ್ರದ ಆಯ್ದ ಪಟ್ಟಣಗಳು ಹಾಗು ರಾಜ್ಯದ 224 ಸ್ಥಳಗಳಲ್ಲಿ ಹೋರಿ ಸವಾರಿ ಹೋಗಲಿದೆ. ಆಂಧ್ರಪ್ರದೇಶದ ಓಂಗೋಲ್ ತಳಿಯ ನಂದಿಯೇ ರಾಘುನ ಪರ್ಯಟನದ ಪ್ರಮುಖ ಆಕರ್ಷಣೆ. ಇದನ್ನೇ ಮುಂದಿಟ್ಟುಕೊಂಡು ಗೋ ಚತುರ್ಮಾಸ ನಡೆಸುತ್ತಿರುವ ರಾಘು ತಾನಿದನ್ನು ಭಟ್ಕಳದ ಕಸಾಯಿಖಾನೆಗೆ ಹೋಗುತ್ತಿದ್ದುದನ್ನು ತಡೆದು ತಂದು ಸಾಕಿದೆನೆಂದು ಪೋಸು ಕೊಡುತ್ತಿದ್ದಾನೆ. ಈ ಮುಗ್ಧ ನಂದಿಯನ್ನು ತೋರಿಸಿ 'ಭಿಕ್ಷೆ' ಎತ್ತಿದ್ದಾನೆ. ರಾಘುನ 13 ಗೋಶಾಲೆಗಳ ದನಗಳೇ ಕಸಾಯಿಖಾನೆಗೆ ಹೋಗುತ್ತಿರುವಾಗ ಆತ ಈ ನಂದಿಯನ್ನು ರಕ್ಷಿಸಿದ್ದಾನೆಂಬುದೇ ವಿಪರ್ಯಾಸ. ಜನರ ಮರಳು ಮಾಡಲು ಆತ ಸಂದರ್ಭಕ್ಕೆ ತಕ್ಕಂತೆ ಆಟ ಆಡಬಲ್ಲನೆಂಬುದಕ್ಕೆ ಈ ನಂದಿಯೇ ಸಾಕ್ಷಿಯಾಗಿದೆ.


ಈ ಬಾರಿಯದು ರಾಘುನ ಗೋಯಾತ್ರೆ ಎರಡು ಹಂತದ್ದು. ಅಂದರೆ ಅದೇ ಸೆಪ್ಟೆಂಬರ್‌ನಿಂದ. ಬರುವ ಜನವರಿ 2017ರ ತನಕ ಗೋವನ್ನು ಹಿಡಿದುಕೊಂಡು ರಾಘು ಪ್ರಚಾರದಲ್ಲಿರುತ್ತಾನೆ. ತನ್ಮೂಲಕ ತನ್ನ ರಾಸಲೀಲಾ ವಿನೋದಗಳ ಹಾನಿಯಿಂದಾದ 'ಆತ್ಮ ಧಕ್ಕೆ' ನಿಭಾಯಿಸಲು ತಿಪ್ಪರಲಾಗ ಹಾಕಲಿದ್ದಾನೆ. ಆರ್‌ಎಸ್‌ಎಸ್‌ನ ದತ್ತಾತ್ರೇಯ ಹೊಸಬಾಳೆಯಂಥ ಆಯಕಟ್ಟಿನ ಚೆಡ್ಡಿ ಚತುರನ ವಿರೋಧ ಕಟ್ಟಿಕೊಂಡಿರುವ ರಾಘು ಆತನ ಎದುರಾಳಿ ಕಲ್ಲಡ್ಕ ಪ್ರಭಾಕರ ಭಟ್ಟನ ಒಲಿಸಿಕೊಂಡು ಆಟ ಆಡುತ್ತಿದ್ದಾನೆ. ರಾಘುನ ಹೊಸ ಗೋಯಾತ್ರೆ ಗಿಮಿಕ್‌ನ ಸ್ಕೆಚ್‌ಧಾರನೇ ಈ ಪಡಪೋಸಿ ಹಿಂದೂ ಮುಂದಾಳು ಕಲ್ಲಡ್ಕನದು ಎಂದು ಮಠದಲ್ಲಿ ಗುಸುಗುಸು ಎದ್ದಿದೆ. ಗೋ ಚಾತುರ್ಮಾಸದ ನೆಪದಲ್ಲಿ ಒಂದಿಷ್ಟು ಸಂಘ ಪರಿವಾರದ ಗೋ ಬ್ರಿಗೇಡ್‌ಪುಂಡರನ್ನು ಸನ್ಮಾನಿಸಿರುವ ರಾಘು-ಕಲ್ಲಡ್ಕ ಇವರೆಲ್ಲರೂ ಹೊಸ ಗೋ ಯಾತ್ರಾ ಗಿಮಿಕ್‌ಗೆ ಬಳಸಿಕೊಳ್ಳುವ ಪ್ಲಾನ್ ಹಾಕಿದೆ. ಈ ಸ್ವಯಂಘೋಷಿತ ಗೋ ಭಕ್ತರ ಹುರಿದುಂಬಿಸಲೆಂದೇ ಸನ್ಮಾನ-ಸತ್ಕಾರ ಮಾಡಲಾಗಿದೆ. ಗೋ ರಕ್ಷಣೆಯ ಹೆಸರಲ್ಲಿ ದೇಶದಲ್ಲಿ ಆಗಿರುವ ಕ್ಷೋಭೆಯ ದುರ್ಲಾಭ ಪಡೆದು ಇಮೇಜು ಬದಲಿಸಿಕೊಳ್ಳುವ ಖತರ್‌ನಾಕ್ ಹುನ್ನಾರ ರಾಘು ಮಾಡಿದಂತಿದೆ.

ಸ್ತ್ರೀ ಕಂಟಕ ಸ್ವಾಮಿ ಎಂದೇ ಜಗತ್ಪ್ರಸಿದ್ಧನಾಗಿರುವ ರಾಘು ಮೂಕ ಗೋವುಗಳ ಮುಂದಿಟ್ಟುಕೊಂಡು ಯಾತ್ರೆ ಮಾಡಿದರೆ ಜನ ನಂಬುತ್ತಾರಾ? ಈ ಬಾರಿ ರಥಯಾತ್ರೆಯಲ್ಲಿರುವ ಸ್ವಾಮಿ ರೇಪಿಸ್ಟ್ ಸ್ವಾಮಿ ಎಂದೇ ಜನ ಗುರುತಿಸುತ್ತಾರೆ; ಗೋಸ್ವಾಮಿ ಎಂದಲ್ಲವೆಂದು ಮಠದ ಪಡಸಾಲೆಯಲ್ಲಿ ಮೋಜಿನ ಚರ್ವಿತ ಚರ್ವಣ ಈಗ ನಡೆದಿದೆ! ರಾಘುನ ಈ 'ದಂಡ' ಯಾತ್ರೆಯಿಂದ ಹವ್ಯಕ ಸಮುದಾಯಕ್ಕೆ ಮುಜುಗರವೇ ಹೆಚ್ಚಾಗಲಿದೆ! ಗೋರಕ್ಷಣೆ ಹೆಸರಲ್ಲಿ ದೇಶದ ಉದ್ದಗಲಕ್ಕೆ ಹಿಂಸಾಚಾರ ಭುಗಿಲೆದ್ದಿರುವ ಈ ಹೊತ್ತಲ್ಲಿ ರಾಘು 'ಗೋ ಕಿಂಕರ-ಯಾತ್ರೆ' ಹೊರಟಿರುವುದು ಅನೇಕ ಅನುಮಾನ ಹುಟ್ಟು ಹಾಕಿದೆ. ತನ್ನ ಕಚ್ಚೆಹರುಕುತನ ಮುಚ್ಚಿಕೊಳ್ಳಲು ಅನಾಹುತಕಾರಿ ಕಾರ್ಯಾಚರಣೆಗೆ ಕರಾಮತ್ತು ಮಾಡುತ್ತಿರುವ ರಾಘುಗೆ ಅಂಕುಶ ಇಡಬೇಕಿದೆ. ಇಲ್ಲದಿದ್ದರೆ ಈತ ದೇಶದ ನೆಮ್ಮದಿಗೆ ಬೆಂಕಿ ಹಾಕುವುದು ಖಂಡಿತ!

■ ಶುದ್ಧೋಧನ



ಮಠಬಾನಿಗಳು ವಿಡಿಯೋಗ್ರಾಫರ್‌ಗೆ ಬಡಿದರೇಕೆ?



ಡಾ. ಟಿ.ಟಿ. ಹೆಗಡೆ


ಕಾಮಿ ಸ್ವಾಮಿ ಎಂಬ ಕುಖ್ಯಾತಿಯಿಂದ ಆಗುತ್ತಿರುವ ಡ್ಯಾಮೇಜ್ ಕಂಟ್ರೋಲ್‌ಗೆ ನವರಥಗಳೊಂದಿಗೆ ಸಪ್ತ ರಾಜ್ಯಗಳಲ್ಲಿ ಗೋ ಯಾತ್ರೆ ಮಾಡಲು ರೇಪಿಸ್ಟ್ ರಾಘು ರೆಡಿಯಾಗುತ್ತಿದ್ದಂತೆಯೇ ಗಿರಿನಗರ ಮಠದಲ್ಲಿ ಮಠಬಾನಿಗಳ ಕ್ರೌರ್ಯ ಕಾಂಡಕ್ಕೂ ಬಿರುಸು ಬಂದುಬಿಟ್ಟಿದೆ. ಗೋರಕ್ಷಣಾ ಕಾರ್ಯಕರ್ತರ ಸಂಘಟನೆಗಾಗಿಯೇ ಈ "ಗೋಕಿಂಕರ" ಯಾತ್ರೆ ಎಂದು ರಾಘು ರಾಗ ತೆಗೆದಿರುವುದು ಆತ ಗೋ ರಾಜಕಾರಣದ ಮೂಲಕ ತನ್ನ ಪಾಪಕೃತ್ಯಗಳ ಮರೆ ಮಾಚಲು ಮಸಲತ್ತು ಮಾಡುತ್ತಿರುವುದನ್ನು ನಿಸ್ಸಂಶಯವಾಗಿ ಸಾಬೀತು ಮಾಡುವಂತಿದೆ. ಗೋಕಿಂಕರರ ಹೆಸರಲ್ಲಿ ತನ್ನ ರೌಡಿ ಕಿಂಕರರ ಪಡೆ ಬೆಳೆಸುತ್ತಿರುವ ರಾಘು ಈಚೆಗೆ ಪಾಪದ ವಿಡಿಯೋಗ್ರಾಫರ್ ಒಬ್ಬನ ಮೇಲೆ ಬರ್ಬರ ಹಲ್ಲೆ ಮಾಡಿಸಿ ಕೇಕೆ ಹಾಕಿದ್ದಾನೆ.

ಆತ ಕೇರಳದ ಕಾಸರಗೋಡಿನ ಮಿಯ್ಯಾಪದವು ಎಂಬ ಊರಿನ ಹವ್ಯಕ ಬ್ರಾಹ್ಮಣ ಕುಲದ ಹುಡುಗ. ವೃತ್ತಿಯಲ್ಲಿ ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್. ರಾಘು ಸ್ವಾಮಿಯ ಪರಮಭಕ್ತನೂ ಹೌದು. ಹೀಗಾಗಿ ಆತ ರಾಘುನ ರಂಗುಬಿರಂಗಿ ಪ್ರವಚನ, ಪಾದ ಪೂಜೆ-ಭಿಕ್ಷೆ-ಚತುರ್ಮಾಸವೇ ಮುಂತಾದ ಸಡಗರ-ಸಮಾರಂಭಗಳ ವಿಡಿಯೋಗ್ರಾಫ್ ಮಾಡುತ್ತಿದ್ದ. ಹಲವು ವರ್ಷ ರಾಘುನ ಆಸ್ಥಾನದಲ್ಲೇ ಇದ್ದ. ಇತ್ತೀಚೆಗೆ ಮಠದಲ್ಲಿ ಬೋರಾಗಿ ಸ್ವತಂತ್ರವಾಗಿ ದುಡಿದು ತಿನ್ನಲೆಂದು ಊರಿಗೆ ಹೋಗಿದ್ದ.

ವಿಡಿಯೋಗ್ರಾಫರ್ ಇದ್ದಕ್ಕಿದ್ದಂತೆ ಮಠ ಬಿಟ್ಟು ಹೋಗುತ್ತಿದ್ದಂತೆಯೇ ರಾಘುಗೆ ಷಡ್ಯಂತ್ರದ ಕನಸು ಬಿದ್ದಿದೆ. ಒಂಥರಾ ಚಡಪಡಿಕೆ ಶುರುವಾಗಿದೆ. ತನ್ನ ಏಕಾಂತ ದರ್ಶನ, ಸರಸಸಲ್ಲಾಪ, ಮಠಕ್ಕೆ ಬಂದ ಹೆಂಗಸರು-ಹುಡುಗಿಯರ ಮೇಲೆ ವಿಕೃತ ದೃಷ್ಟಿ ಹರಿಸುವ ಚಲನವಲನದ ವಿಡಿಯೋ-ಫೋಟೋ ಆ ಮಿಯ್ಯಾಪದವು ಹುಡುಗ ಒಯ್ದಿರಬಹುದೆಂಬ ಭಯಕ್ಕೆ ರಾಘು ಬಿದ್ದಿದ್ದಾನೆ. ಆತನ ಮೇಲೆ ಮಠಬಾನಿ ಪಡೆ ಛೂಬಿಟ್ಟು ಹಳಗಿಸಿ 'ರಹಸ್ಯ' ಸೋರಿಕೆ ಆಗದಂತೆ ಮಾಡಲು ಸ್ಕೆಚ್ ಹಾಕಿ ಕುಂತಿದ್ದಾನೆ.

ಆಗಸ್ಟ್ 23ರಂದು ಈ ಫೋಟೋಗ್ರಾಫರ್ ಚಾತುರ್ಮಾಸ ವ್ರತದಲ್ಲಿರುವ ಗುರುವಿನ ಪಾದಪೂಜೆಗೆಂದು ಊರವರ ಸಂಗಡ ಬೆಂಗಳೂರಿನ ಗಿರಿನಗರ ಶಾಖಾಮಠಕ್ಕೆ ಬಂದಿದ್ದಾನೆ. ಆತನ ಕಂಡದ್ದೇ ರಾಘುನ ರೌಡಿ ಕಿಂಕರರು ಮುಗಿಬಿದ್ದಿದ್ದಾರೆ. ಭಯಾನಕವಾಗಿ ಹೊಡೆದಿದ್ದಾರೆ. ಮಠಬಾನಿಗಳ ಹೊಡೆತಕ್ಕೆ ಆ ಹುಡುಗ ತತ್ತರಿಸಿ ನೆಲಕ್ಕುರುಳಿದ್ದಾನೆ. ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ. ಆಗ ಒಂಚೂರು ಕಂಗಾಲಾದ ರಾಘು ಪಟಾಲಮ್‌ನ ಪೋಕರಿಗಳು ಆ ಹುಡುಗನನ್ನು ಎತ್ತಿಕೊಂಡು ಕೋಣೆಯೊಂದಕ್ಕೆ ಹೋಗಿದ್ದಾರೆ.

ಅಲ್ಲಿಗೆ ಆ ಹುಡುಗನ ಪತ್ತೆಯೇ ಇಲ್ಲದಾಯ್ತು. ಮಿಯ್ಯಾಪದವಿನಿಂದ ಗುರುಸೇವೆಗೆ ಬಂದವರು ಹುಡುಕಾಟ ನಡೆಸಿದರೂ ಪ್ರಯೋಜನ ಆಗಲಿಲ್ಲ. ಆತನ ಮೊಬೈಲೂ ಮಾತಾಡುತ್ತಿರಲಿಲ್ಲ. ನಿರುಪಾಯವಾಗಿ ಅವರೆಲ್ಲ ಊರಿಗೆ ವಾಪಸಾದರು. ಹಾಗೆ ಹೋಗುವಾಗ ಮಠದ ಮಾಣಿಗಳು ಒಂದು ಸುಳ್ಳು ಸಮಜಾಯಿಷಿ ಕೊಟ್ಟಿದ್ದರು. ಆತನನ್ನು ಗೋ ಕಳ್ಳ ಸಾಗಾಣಿಕೆ ಆರೋಪದಲ್ಲಿ ದಕ್ಷಿಣ ಕನ್ನಡದ ಮುಲ್ಕಿ ಪೊಲೀಸರು ಹೊತ್ತೊಯ್ದಿದ್ದಾರೆಂದು ಹೇಳಿದ್ದರು.



ಶ್ಯಾಮಶಾಸ್ತ್ರಿ

ಮೂರ್‍ನಾಲ್ಕು ದಿನದ ನಂತರ ಆತ ಮುಲ್ಕಿ ಸ್ಟೇಷನ್‌ನಲ್ಲಿ ಕಂಡುಬಂದಿದ್ದಾನೆ. ಆದರೆ ಆತನ ಮೇಲೆ ದನದ ಕೇಸೇನೂ ಇರಲಿಲ್ಲ. ಬದಲಿಗೆ ಮುಲ್ಕಿ ಬಸ್ ಸ್ಟ್ಯಾಂಡಿನಲ್ಲಿ ಮತಿಭ್ರಮಿತನಂತೆ ಪಿಕ್ರೇಸ್ ಕೇಸ್‌ನಲ್ಲಿ ತೊಡಗಿದ್ದನೆಂಬ ಆರೋಪ ಹಾಕಲಾಗಿತ್ತು. ಕತೆ ಕಟ್ಟುವುದರಲ್ಲಿ- ಕಣ್ಕಟ್ಟು ವಿದ್ಯೆಯಲ್ಲಿ ನಿಸ್ಸೀಮನಾದ ರಾಘು ಮತ್ತವನ ಮಠಬಾನಿಗಳು ಆ ಹುಡುಗನ ಬಾಯಿ ಮುಚ್ಚಿಸಿಬಿಟ್ಟಿದ್ದಾರೆ. ಈಗಾತ ಮನೆ ಸೇರಿದ್ದಾನಾದರೂ ಯಾರೊಂದಿಗೂ ಮಾತಾಡುತ್ತಿಲ್ಲ. ಅಂಥದೊಂದು ಆಘಾತದಲ್ಲಿದ್ದಾನೆ. ಏನಾಯಿತೆಂದು ಕೇಳಿದರೂ ಸ್ಪಷ್ಟವಾಗಿ ಉತ್ತರಿಸುತ್ತಿಲ್ಲ. ರಾಘು ತನ್ನ ಡಿಂಗ್‌ಡಾಂಗ್ ದೃಶ್ಯಗಳ್ಯಾವುದೂ ಬಹಿರಂಗ ಆಗದಂತೆ ಬಂದೋಬಸ್ತ್ ಮಾಡಿಕೊಂಡಿದ್ದಾನೆ. ಪುತ್ತೂರಿನ ನಿಷ್ಪಾಪಿ ಶ್ಯಾಮಶಾಸ್ತ್ರಿಯನ್ನು ಕೊಂದು ತಿಂದ, ಕುಮಟಾದ ಟಿ.ಟಿ. ಹೆಗಡೆಯನ್ನು ಕೊಲ್ಲಲು ಹವಣಿಸಿದ, ಹಲವು ಹವ್ಯಕ ಕುಟುಂಬಗಳನ್ನು ಬಹಿಷ್ಕಾರದ ಬೆಂಕಿಗೆ ನೂಕಿ ವಿಕೃತಾನಂದ ಅನುಭವಿಸಿದ ರಾಘುನ ಹಿಟ್‌ಲಿಸ್ಟ್‌ನಲ್ಲಿ ಮತ್ಯಾರ್‍ಯಾರಿದ್ದಾರೋ? ಗುರು 'ಸೇವೆ' ಮಾಡಿದ ಯಾರ್‍ಯಾರಿಗೆ ಗ್ರಹಚಾರ ಕಾದಿದೆಯೋ?

2020 ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ 100 ಪದಕಗಳ

ಮುಂಬರುವ 2020 ರ ಒಲಿಂಪಿಕ್ಸ್ ಕ್ರೀಡೋತ್ಸವಕ್ಕೆ ಈಗಿನಿಂದಲೇ ಸಿದ್ಧತೆಗಳನ್ನು ನಡೆಸುವುದಾಗಿ ಪ್ರಧಾನಿ ಮೋದಿ ಮೊನ್ನೆ ಹೇಳಿಕೆ ಕೊಟ್ಟದ್ದು ಎಲ್ಲರಿಗೂ ಖುಷಿಯಾಗಿದೆ. ಕೇವಲ ಪೂಜೆ ಭಜನೆ ಮಂತ್ರ ಪಠಣ ಹೋಮ ಹವನ ಇವುಗಳಿಂದ ಮುಂದಿನ ಒಲಿಂಪಿಕ್ಸ್‌ನಲ್ಲಿ ಭಾರತ ಕನಿಷ್ಠ 100 ಚಿನ್ನದ ಪದಕ ಗೆಲ್ಲಬಹುದು ಎಂದು ಆರ್‌ಎಸ್‌ಎಸ್ ನೇತಾರ ಮೋಹನ್ ಭಾಗ್ವತ್ ಹೇಳಿದ್ದಾನಂತೆ. ಗಂಡು ಹುಡುಗರೂ ಒಲಿಂಪಿಕ್ಸ್ ಪದಕ ಗೆಲ್ಲ ಬೇಕಾದರೆ ಬ್ರಹ್ಮಚಾರಿ (ಕಚ್ಚೆ ಹರುಕ) ಆಗಿದ್ದುಕೊಂಡೇ ಗೋಪೂಜೆಯ ಜತೆಗೆ ಶತ್ರುನಾಶ ಯಜ್ಞ ಹೋಮ ಹವನ ಮಾಡುತ್ತಿದ್ದರೆ ಒಲಿಂಪಿಕ್ಸ್‌ನಲ್ಲಿ ಸುಲಭವಾಗಿ ಪದಕ ಗೆಲ್ಲಬಹುದಂತೆ. ಮುಂದಿನ ಒಲಿಂಪಿಕ್ಸ್‌ನಲ್ಲಿ ಭಾರತದ ಪ್ರಧಾನಿಯ ಕೋರಿಕೆಯ ಮೇರೆಗೆ ಈ ಕೆಳಗಿನ ಹಲವು ಹೊಸ ಆಟಗಳು ಸೇರ್ಪಡೆಗೊಳ್ಳಲಿವೆ.


2020 ರಲ್ಲಿ ದೇವಸ್ಥಾನಗಳ ಅಷ್ಟಬಂಧ-ಬ್ರಹ್ಮಕಲಶ-ಜೀರ್ಣೋದ್ಧಾರಕ್ಕೆ ಪ್ರತ್ಯೇಕ ಸ್ಪರ್ಧೆಯಿದ್ದು ಅದರಲ್ಲಿ ಕೇವಲ ನಮ್ಮ ಕರಾವಳಿಯ ಅರ್ಚಕರು, ಕಾವಿಧಾರಿಗಳು ಹಾಗೂ ಅವರ ಚೇಲಾ ಬಂಟರು ಮಾತ್ರ ಭಾಗವಹಿಸಬಹುದಂತೆ.

ಗೋಮಾಂಸ ರಫ್ತಿನ ಸ್ಪರ್ಧೆಯಲ್ಲಿ ಕೇವಲ ಈರುಳ್ಳಿ ಬೆಳ್ಳುಳ್ಳಿ ಸಹ ತಿನ್ನದ ಪಕ್ಕಾ ಅಹಿಂಸಾವಾದಿ ಜೈನರಿಗೆ ಮಾತ್ರ ಸ್ಥಾನವಂತೆ. ಜೈನರ ಮುಂದಾಳು ಅಮಿತ್ ಶಾ ಇದಕ್ಕೆ ತನ್ನ ಜಾತಿಯ ಸ್ಪರ್ಧಿಗಳನ್ನು ತಯಾರು ಮಾಡಲು ಹಲಾಲ್ ಮಾಂಸ ತಯಾರಿಸುವ ವಿಧಾನ ಕಲಿಸುತ್ತಿದ್ದಾನಂತೆ.

ಮುಂದಿನ ಒಲಿಂಪಿಕ್ಸ್‌ನಲ್ಲಿ ನಕಲಿ ದೇಶಭಕ್ತಿ ಹಾಗೂ ದೊಂಬಿ ಗಲಾಟೆಗಳ ಸ್ಪರ್ಧೆಯೂ ಇರಲಿದೆ. ದೊಂಬಿ ಗಲಾಟೆಯ ಸ್ಪರ್ಧೆ ಹಾಗೂ ನಕಲಿ ದೇಶ ಭಕ್ತಿಯ ಸ್ಪರ್ಧೆಯಲ್ಲಿ ಎಬಿವಿಪಿಯವರಿಗೆ ಚಿನ್ನದ ಪದಕ ಗ್ಯಾರಂಟಿ. ಇವೆಲ್ಲಕ್ಕೆ ಅಂಬಾನಿ-ಅದಾನಿಗಳು ಸ್ಪಾನ್ಸರ್ ಮತ್ತು ಮೀಡಿಯಾ ಪಾರ್ಟ್ನರ್ ಆಗಲಿದ್ದಾರಂತೆ.

ಅಮಿತ್ ಶಾ ಸ್ವತಃ ಶೂಟಿಂಗ್ ಮತ್ತು ಆರ್ಚರಿ (ನಕಲಿ ಎನ್‌ಕೌಂಟರ್) ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರಂತೆ. ಇನ್ನು ನಾಟಕ ಸ್ಪರ್ಧೆ ಹಾಗೂ ಸುಳ್ಳಿನ ಸ್ಪರ್ಧೆಯಲ್ಲಿ ಸ್ವತಃ ನಮ್ಮ ಬೂಸಿ ಬಸ್ಯಾ ಪ್ರಧಾನಿಗಳೇ ಏಕೈಕ ಸ್ಪರ್ಧಿಯಂತೆ. ಅವರಿಗೆ ವಿಶ್ವದಲ್ಲೆಲ್ಲೂ ಸರಿಸಾಟಿ ಸ್ಪರ್ಧಿಯೇ ಇಲ್ಲ ಬಿಡಿ.

ಇಡಿ ಇಡೀ ರಸ್ತೆಗಳನ್ನೇ ನುಂಗುವ ಸ್ಪರ್ಧೆಯಲ್ಲಿ ಗಡ್ಕರಿಗೆ ಚಿನ್ನದ ಪದಕ ಗ್ಯಾರಂಟಿ. ಕೋಟಿಗಟ್ಟಲೆ ಟನ್ನು ಉಕ್ಕಿನ ಅದಿರು ನುಂಗುವ ಸ್ಪರ್ಧೆಗೆ ಬಳ್ಳಾರಿ ಗಣಿಗಳ್ಳ ರೆಡ್ಡಿಗಳೇ ಬೆಸ್ಟ್. ಇನ್ನು ಬೆಸ್ಟ್ ಕಪಲ್ ಸ್ಪರ್ಧೆಯಲ್ಲಿ ಯಡ್ಡಿ-ಶೋಭ ಜೋಡಿಗೆ ಸಾಟಿಯಿಲ್ಲ, ಹೆಣ್ಣು ಭ್ರೂಣಹತ್ಯೆ ಹಾಗೂ ಮರ್ಯಾದಾ ಹತ್ಯೆಯ ಸ್ಪರ್ಧೆಯಲ್ಲಿ ಎಲ್ಲ ಸ್ಪರ್ಧಿಗಳು ಕೇವಲ ಹರ್ಯಾಣ-ರಾಜಸ್ಥಾನದ ರಜಪೂತ



ಮತ್ತು ಜಾಟ್ ಜಾತಿಯವರಂತೆ.

ದನದ ಚರ್ಮ ಸುಲಿಯುವಾಗ ದಲಿತರಿಗೆ ಅಮಾನುಷವಾಗಿ ಬಡಿಯುವ ಸ್ಪರ್ಧೆಯೂ ಇದೆಯಂತೆ. ಅದರಲ್ಲಿ ಗುಜರಾತಿಗಳಿಗೆ ಪ್ರಥಮ ಪ್ರಾಶಸ್ತ್ಯ, ಕಾರಣ ಭಾರತದ ಕ್ರೀಡಾಕ್ಷೇತ್ರದಲ್ಲಿ ಹಾಗೂ ಸೇನಾಪಡೆಗೆ ಸೇರುವಲ್ಲಿ ಗುಜರಾತಿಗಳು ಈವರೆಗೆ ಅತ್ಯಂತ ಹಿಂದುಳಿದಿರುವುದರಿಂದ ಕನಿಷ್ಠ ದಲಿತ ಚರ್ಮಕಾರರಿಗೆ ಬಡಿಯುವ ಸ್ಪರ್ಧೆಯಲ್ಲಾದರೂ ಅವರು ತಮ್ಮ ವೀರತ್ವ ತೋರಿಸಿ ಚಿನ್ನ ಗೆಲ್ಲುವುದು ಸಾಧ್ಯ.

ರಾಜಕೀಯ ಭ್ರಷ್ಟಾಚಾರದ ಸ್ಪರ್ಧೆಗೆ ಬಿಜೆಪಿ ಮತ್ತು ಕಾಂಗ್ರೆಸ್ ಈ ಎರಡೂ ಕಡೆಯಿಂದ ಹುರುಸಿನ ಸ್ಪರ್ಧಿಗಳು ಇದ್ದಾರೆ. ಕೋಮುವಾ… ಬಿಜೆಪಿ ಏಕೈಕ ಸ್ಪರ್ಧಿಯಾದರೆ ಜಾತಿವಾದದಲ್ಲಿ ಕಾಂಗ್ರೆಸ್ ಸಹ ಸ್ಪರ್ಧಿ… ನೆಹರೂ ಕುಟುಂಬದ ಕಾಲು ನೆಕ್ಕುವ ಸ್ಪರ್ಧೆಯಲ್ಲಿ ಕಾಂಗ್ರೆಸ್ ಏಕೈ… ಸ್ಪರ್ಧಿ.

ಪ್ರಮೋದ್ ಮುತಾಲೀಕ್, ಪ್ರವೀಣ್ ತೊಗಾಡಿಯಾ, ಕಲ್ಲಡ್ಕ… ಚಕ್ರಮ್ ಸೂಳೆಬೆಲಿ ಇವರಿಗೆ ನಾಲಿಗೆಯಿಂದಲೇ ಬೆಂಕಿ ಹಚ್ಚುವ ಸ್ಪರ್ಧೆ… ಚಿನ್ನ ಬೆಳ್ಳಿ ಕಂಚು ಈ ಮೂರು ಪದಕ ಸಿಗಲಿದೆ. ಸುಪಾರಿ ಕೊ… ಸ್ಪರ್ಧೆಯಲ್ಲಿ ನರೇಶ್ ಶೆಣೈ ಜೈಲಿನಿಂದಲೇ ಸ್ಪರ್ಧಿಸುತ್ತಾನೆ.

ಅನೈತಿಕ ಪೊಲೀಸ್‌ಗಿರಿ ಸ್ಪರ್ಧೆಯಲ್ಲಿ ನಮ್ಮ ಕರಾವಳಿಯ ಶೂದ್ರ ಮ… ಮಾತ್ರ ಸ್ಥಾನವಂತೆ. ಇನ್ನು ಕೇವಲ ಗೋ-ಭಕ್ತರಿಗಾಗಿ ಗೋಮೂತ್ರ ಗೋ-ಸೆಗಣಿ ಸೇವನೆಯ ಸ್ಪರ್ಧೆ ಇರಲಿದೆ. ಗೋಸ್ವಾಮಿ ಮತ್ತು ಬಾಬಾ ರಾಮದೇವ್ … ಆಗಲಿದ್ದಾರೆ. ಇದರಲ್ಲೂ ನಮಗೆ ಚಿನ್ನದ ಗ್ಯಾರಂಟಿ.

ವಿಡಂಬನೆ

ಆಪಾಥಭೂತಿ ಸ್ಥಾನಕ್ಕೆ ಹಾಗೂ ಚ… ಲೀಡರ್ ಕುಣಿತಕ್ಕೆ ಪೇಜಾವರರು … ರವಿಶಂಕರ್‌ಗುರು ಒಪ್ಪಿಕೊಂಡಿದ್ದಾರಂತೆ (ಇದಕ್ಕಾಗಿ ದೇವರು ಅವರಿಗೆ … ರ ವರೆಗೆ ದೀರ್ಘಾಯುಷ್ಯ ಕೊಡಲಿ). ದೇವರ ಹೆಸರಲ್ಲಿ ವ್ಯಾಪಾರ ಮ… ಸ್ಪರ್ಧೆಯಲ್ಲಿ ಹರೇಕೃಷ್ಣ ಪಂಥ ಸಹಿತ ಅನೇಕ ಚಾಂಪಿಯನ್‌ಗಳು ನಮ್ಮಲ್ಲಿ… ಕಾಣಸಂತೆ ಹಾಗೂ ರೈತರ ಶೋಷಣೆಯಲ್ಲಿ ಸ್ಪರ್ಧಿಸಲು ಅನೇಕ ಬನಿಯಾ-… ತಯಾರಿದ್ದಾರೆ.

ಪತ್ನಿಯ ಹೆಣ ಹೊತ್ತು 12 ಕಿ.ಮೀ. ನಡೆಯುವ ಹೃದಯವಿ… ಸ್ಪರ್ಧೆಯೂ ಇರಲಿದೆಯಂತೆ. ಜತೆಗೆ ಬರಗಾಲದಲ್ಲಿ ಹುಲ್ಲಿನ ಬೀಜ … ಕಪ್ಪೆ ಇಲಿ ಇರುವೆ ಹುಳು ಹುಪ್ಪಟೆ ತಿನ್ನುವ ಸ್ಪರ್ಧೆಯೂ ಇರಲಿದೆ. ಅ… ಒಡಿಶಾದ ಕಾಲಹಂಡಿಯ ಬುಡಕಟ್ಟು ಜನಾಂಗದ ಬಡವರು … ಭಾಗವಹಿಸಬಹುದಂತೆ.

ಹಾಗಾಗಿ ಕೇಸರಿ ದೇಶಭಕ್ತರೇ ನೀವು 2020 ರಲ್ಲಿ ವಿಶ್ವಗುರು ಆಗ… ಭಾರತದ ಭಯಂಕರ ಒಲಿಂಪಿಕ್ಸ್ ಸಾಧನೆಯನ್ನು ಸೆಲೆಬ್ರೇಟ್ ಮಾ… ಚೈನಾ ಪಟಾಕಿ ಹಾಗೂ ನೈಜೀರಿಯ ಗಾಂಜಾ-ಡ್ರಗ್ಸ್‌ಗಳೊಂದಿಗೆ ಈಗಿನಿ… ತಯಾರಾಗಿರಬೇಕೆಂದು ನನ್ನ ವಿನಮ್ರ ಸಲಹೆ.

■ *ಪ್ರವೀಣ್ ಎಸ್ ಶೆಟ್ಟಿ, ಮಂಗಳೂ…*

ತುಳುನಾಡು ಧರ್ಮದ ಮತ್ತು ಡ್ರಗ್ಸ್ ಅಮಲಿನ ಲ್ಯಾಬ್ ಆಗುತ್ತಿ…

ನಾವು ಕರಾವಳಿಯವರು. ಬೆಂಗಳೂರು, ಮೈಸೂರು, ಬೆಳಗಾವಿ ಹೀಗೆ ಕರ್ನಾಟಕದ ಒಳನಾಡಿನಲ್ಲಿ ಎಲ್ಲಿಯೇ ಉದ್ಯೋಗ ನಿಮಿತ್ತ ಹೋದರೂ ಅಲ್ಲಿಯವರಿಗೆ ನಾವು ತುಳು ಭಾಷಿಕರು ಎಂದು ತಿಳಿದಕೂಡಲೇ ಒಂದು ಪ್ರಶ್ನೆ ನಮ್ಮ ಮುಂದಿಡುತ್ತಾರೆ.

"ನಿಮ್ಮ ತುಳುನಾಡನ್ನು ಹಿಂದೂತ್ವ ಲ್ಯಾಬ್ ಮಾಡಿಕೊಂಡಿದ್ದೀರಿ. ಆದರೆ ನಿಮ್ಮಲ್ಲಿ ಹಿಂದೂಗಳೇ ಹಿಂದೂಗಳನ್ನು ನಿರ್ದಯವಾಗಿ ಬಡಿದು ಕೊಲ್ಲುತ್ತಾರೆ" ಎಂದು ಅವರು ಆರೋಪಿಸಿದಾಗ ನಾವು ತುಳುವರು ತಲೆತಗ್ಗಿಸಬೇಕಾಗುತ್ತದೆ. ನಮ್ಮ ದಕ್ಷಿಣ ಕರಾವಳಿ ಅರ್ಥಾತ್ ತುಳುನಾಡು ಹಿಂದೂತ್ವದ ಲ್ಯಾಬ್ ಆಗಿದೆ ಎಂಬ ಆರೋಪ ಹಿಂದಿನ ಹದಿನೈದು ವರ್ಷಗಳಿಂದ ಮುಂಬೈ ಹಾಗೂ ಉತ್ತರ ಭಾರತದಲ್ಲೂ ಕೇಳಿಬರುತ್ತಿರುವುದು ನಿಜ.

ಲವ್-ಜಿಹಾದ್ ಎಂಬ ಹೊಸ ಶಬ್ದ ನಮ್ಮ ತುಳುನಾಡಿನಲ್ಲಿಯೇ ಹುಟ್ಟಿ ನಂತರ ಅದು ಭಾರತದ ಎಲ್ಲಾ ಭಾಷೆಯ ನಿಘಂಟಿನಲ್ಲಿ ಸೇರಿತು ಎನ್ನುವುದೂ ನಿಜ. (ಆರ್‌ಎಸ್‌ಎಸ್‌ನವರಿಗೆ ಚಡ್ಡಿಗಳು ಎನ್ನುವುದು, ಸಂಘ ಪರಿವಾರದವರಿಗೆ ಸಂಘಿಗಳು ಎನ್ನುವುದು ಮತ್ತು ಬಜರಂಗ ದಳದವರಿಗೆ ಬಜರಂಗಿಗಳು ಎಂಬ ವ್ಯಂಗ್ಯಭರಿತ ಚುಟುಕು ಹೆಸರುಗಳನ್ನು ಮೊಟ್ಟಮೊದಲು ಹುಟ್ಟು ಹಾಕಿದ್ದು ಪ್ರಸಿದ್ಧ ಕನ್ನಡ ಸಾಹಿತಿ ಪಿ.ಲಂಕೇಶರು. ಆನಂತರ ಅದು ಹಿಂದಿಸಹಿತ ಭಾರತದ ಎಲ್ಲಾ ಭಾಷೆಗೆ ಪಸರಿಸಿತು).

ಹೊರಗಿನ ಜನರಿಗೆ ಗೊತ್ತಿಲ್ಲದ ನಿಜಸಂಗತಿ ಏನೆಂದರೆ ತುಳುನಾಡನ್ನು ಹಿಂದೂತ್ವ ಲ್ಯಾಬ್ ಮಾಡಿದವರು ತುಳುವರು ಅಲ್ಲವೇ ಅಲ್ಲ. ನಿಜವಾಗಿ ನಮ್ಮ ತುಳುನಾಡನ್ನು ಹಿಂದೂತ್ವದ ಪ್ರಯೋಗಶಾಲೆ ಮಾಡಿರುವವರು ಹೊರಗಿನಿಂದ ವಲಸೆ ಬಂದ ಕೊಂಕಣಿ-ಮರಾಠಿ-ಕನ್ನಡ ಭಾಷಿಗರು.

ಪೋರ್ಚುಗೀಸರ ಕಾಲದಲ್ಲಿ ಗೋವೆಯಿಂದ ಓಡಿಬಂದವರು ಕೊಂಕಣಿ ಸಾರಸ್ವತ ಬ್ರಾಹ್ಮಣರು. ಪೇಶ್ವೆ ರಾಜರು ಶೃಂಗೇರಿ ಮಠದ ಮೇಲೆ ದಾಳಿ ಮಾಡಿ ಅಲ್ಲಿಯ ಸಂಪತ್ತು ಲೂಟ ಮಾಡಿದಾಗ ಅವರ ಸೇನೆಯೊಟ್ಟಿಗೆ ಬಂದು ಶಿವಮೊಗ್ಗ-ಚಿಕ್ಕಮಗಳೂರು ಪ್ರದೇಶದ ದೇವಸ್ಥಾನ ಮತ್ತು ಶ್ರೀಮಂತರನ್ನು ಲೂಟಿ ಮಾಡಿ ನಂತರ ಆ ಲೂಟಿಯೊಂದಿಗೆ ನಮ್ಮ ತುಳುನಾಡಿಗೆ ಬಂದು ನೆಲೆ ನಿಂತವರೇ ಮರಾಠಿಗ ಚಿತ್ಪಾವನ್ ಬ್ರಾಹ್ಮಣರು.

ಕನ್ನಡ ಭಾಷಿಕ ಹವ್ಯಕ ಬ್ರಾಹ್ಮಣರು ಉತ್ತರ ಕನ್ನಡ ಜಿಲ್ಲೆಯ ಶಿರಸಿ ಘಟ್ಟ ಪ್ರದೇಶದಿಂದ ತುಳುನಾಡಿಗೆ ವಲಸೆ ಬಂದವರು. ಈಗ ಈ ಮೂರು ವಲಸಿಗ ಬ್ರಾಹ್ಮಣರಾದ ಕೊಂಕಣಿ ಸಾರಸ್ವತರು, ಮರಾಠಿ ಚಿತ್ಪಾವನರು ಮತ್ತು ಕನ್ನಡಿಗ ಹವ್ಯಕರೇ ನಮ್ಮ ತುಳುನಾಡಿನ ಆರ್‌ಎಸ್‌ಎಸ್ ಮತ್ತು ಎಲ್ಲಾ ಸಂಘ ಪರಿವಾರದ ಕುತಂತ್ರಿ ಮೆದುಳುಗಳಾಗಿದ್ದಾರೆ. ಅವರಿಗೆ ಕಾಲಾಳುಗಳಾಗಿ ಕೆಲಸ ಮಾಡಿ ಹೊಡೆದಾಡಿ ಕೊಲೆ ಮಾಡಿ ಜೈಲಿಗೆ ಹೋಗಿ ತಮ್ಮ ಜೀವನ ಹಾಳು ಮಾಡಿಕೊಳ್ಳುವವರು ಮಾತ್ರ ಬುದ್ಧಿಗೇಡಿ ತುಳುವ ಶೂದ್ರರು ಅಷ್ಟೇ.

ತುಳುನಾಡಿನ ಮೂಲ ತುಳು ಭಾಷಿಕ (ದ್ರಾವಿಡ) ಬ್ರಾಹ್ಮಣರಲ್ಲಿ ಮಾತ್ರ ಕೊಂಕಣಿ-ಮರಾಠಿ-ಹವ್ಯಕ ಬ್ರಾಹ್ಮಣರಲ್ಲಿ ಇರುವಷ್ಟು ಕ್ರಿಮಿನಲ್ ಮೆದುಳು ಇಲ್ಲದಿರುವುದರಿಂದ ತುಳು ಬ್ರಾಹ್ಮಣರು ಹಿಂದೂತ್ವದ ಲ್ಯಾಬ್‌ನಲ್ಲಿ ನೇರ ಭಾಗಿಯಾಗುವುದು ಕಡಿಮೆ. ಏನಿದ್ದರೂ ತುಳು ಬ್ರಾಹ್ಮಣರು ಆಸಕ್ತಿ ವಹಿಸುವುದು ಹಿಂದೂ ದೇವಸ್ಥಾನಗಳನ್ನು ಕೈವಶ ಮಾಡಿಕೊಂಡು ಮೌಢ್ಯ ಹರಡಿ ಮುಂಬಯಿಯಲ್ಲಿ ಲೇಡಿಸ್ ಬಾರ್ ಎಂಬ ವೇಶ್ಯಾವಾಟಿಕೆ ನಡೆಸುವ ಬಂಟ ಶೆಟ್ಟಿಗಳನ್ನು ಸುಲಿದು ಹಣ ಮಾಡುವುದರಲ್ಲಿ ಮಾತ್ರ.

ತುಳು ಬ್ರಾಹ್ಮಣರಲ್ಲಿ ಇರುವ ನಾಲ್ಕೈದು ಉಪಜಾತಿಗಳಲ್ಲಿ ಕೇವಲ ಮಾಧ್ವ ವೈಷ್ಣವ ಬ್ರಾಹ್ಮಣರು ಸ್ವಲ್ಪಮಟ್ಟಿಗೆ ಹಿಂದೂತ್ವ ಲ್ಯಾಬಿಗೆ ಬೆಂಬಲ ಕೊಡುತ್ತಿದ್ದಾರೆ ನಿಜ. ಕಾರಣ ತಮ್ಮ ಆರಾಧ್ಯ ದೈವ ಕೃಷ್ಣನ ಕುತಂತ್ರ ಬುದ್ಧಿಯಲ್ಲಿ ಸ್ವಲ್ಪವಾದರೂ ಭಕ್ತರಿಗೆ ಆನುವಂಶಿಕವಾಗಿ ಬರಲೇ ಬೇಕು ತಾನೇ. ಆದರೆ ಇವರಿಗೆ ನೇರ ಮೈದಾನಕ್ಕಿಳಿಯುವಷ್ಟು ಧೈರ್ಯ ಇಲ್ಲ. ಉಳಿದ ತುಳುವ ಸ್ಮಾರ್ತ ಬ್ರಾಹ್ಮಣರು ಹಿಂದೂತ್ವವಾದಿಗಳ ಗುಂಪಿನಲ್ಲಿ ನೇರ ಭಾಗಿಗಳಾಗುವುದು ಕಡಿಮೆ. ಅದರಲ್ಲೂ ಶೈವ ಸ್ಥಾನಿಕ ಬ್ರಾಹ್ಮಣರು ಚುನಾವಣೆಯಲ್ಲಿ ಯಾವುದೋ ಒಂದು ಪಕ್ಷಕ್ಕೆ ಮತ ಕೊಟ್ಟು ನಂತರ ತಮ್ಮಷ್ಟಕ್ಕೇ ತಟಸ್ಥರಾಗಿರುತ್ತಾರೆ.



ಹಾಗಾಗಿ ಪ್ರಜ್ಞಾವಂತ ತುಳುವರು ತಮ್ಮ ತುಳುನಾಡಿಗೆ ಬಂದಿರುವ 'ಹಿಂದೂತ್ವ ಲ್ಯಾಬ್' ಎಂಬ ಕಳಂಕ ತೊಳೆಯಬೇಕಾದರೆ ಹೊರಗಿನಿಂದ ವಲಸೆ ಬಂದ ಈ ಮೂರು ಕೊಕ್ಕೆ ಬುದ್ಧಿಯ ವೈದಿಕರನ್ನು ಮೊದಲು ದೂರವಿಡಬೇಕು. ನಮ್ಮ ಎರಡು ತುಳು ಜಿಲ್ಲೆಗೆ ಬುದ್ಧಿವಂತರ ಜಿಲ್ಲೆ ಎಂಬ ಅರ್ಥವಿಹೀನ ಬಿರುದು ಹೋಗಿ ಸೋಮಾರಿ ಅನೈತಿಕ ಪೊಲೀಸರ ಜಿಲ್ಲೆ ಎಂಬ ಹಣೆಪಟ್ಟಿ ಈಗಾಗಲೇ ತಗುಲಿಕೊಂಡಿದೆ. ತುಳುನಾಡಿಗೆ ಗೋವಾ ಮಹಾರಾಷ್ಟ್ರದಿಂದ ಬರಿಗೈಯಲ್ಲಿ ವಲಸೆ ಬಂದವರು ಇಲ್ಲಿಯ ತುಳು ಜನರ ಔದಾರ್ಯದಿಂದ ಬೇರೂರಿ ಭಾರಿ ಶ್ರೀಮಂತರಾಗಿ ಈಗ ತುಳುವ ಸಮಾಜವನ್ನೇ ತಮ್ಮ ಹಿಡಿತದಲ್ಲಿ ತೆಗೆದುಕೊಂಡು ಅಪಾಯಕಾರಿ ಕೋಮುವಿಷ ಹರಡುತ್ತಿದ್ದಾರೆ. ಮರಾಠಿ ಕೊಂಕಣಿ ಹವ್ಯಕ ಈ ಕರಟಕ-ದಮನಕ-ಪಿಂಗಳಕರನ್ನು ಅವರ ಮೂಲ ಊರುಗಳಿಗೆ ಓಡಿಸಲು ಸಾಧ್ಯವಾಗದಿದ್ದರೂ ಅವರ ಅಪಾಯಕಾರಿ ಕಾರ್ಯತಂತ್ರಗಳನ್ನು ಮಾತ್ರ ನಿಲ್ಲಿಸುವುದು ಅಗತ್ಯ. ಇಲ್ಲದಿದ್ದರೆ ತುಳುವರಿಗೆ ತುಳುನಾಡಿನಲ್ಲಿಯೇ ಉಳಿಗಾಲವಿಲ್ಲ, ನಾವು ತುಳುವರು ನಮ್ಮನಮ್ಮಲ್ಲಿಯೇ ಹೊಡೆದಾಡಿ ಸಾಯುವಂತೆ ಮಾಡಿ ಅದರ ಲಾಭ ಕೊನೆಗೆ ಹೊರನಾಡಿನಿಂದ ಬಂದ ಈ ಮೂರು ಕ… ವೈದಿಕ ಗುಂಪು ಉಣ್ಣುವುದು ಖಚಿತ.

ತುಳುವ ನಾಡವ-ಬಂಟರು ಹಿಂದೂತ್ವವಾದ… ಹಣಬಲ ಒದಗಿಸಿದರೆ ಬಿಲ್ಲವರು ಮತ್ತು ಇತರ ಹಿಂ… ಜಾತಿಯ ತುಳುವರು ಜನಬಲ ಒದಗಿಸುತ್ತಿದ್ದಾರೆ. ಬ… ಹಿಂದೂತ್ವವಾದದ ಮೂಲಕ ತಮಗೆ ಇನ್ನೂ … ಹಣ ಮತ್ತು ಅಧಿಕಾರ ಗಳಿಸುವ ಸಾಧ್ಯತೆ ಇರುವ… ಮಾತ್ರ ಸಂಘ ಪರಿವಾರಕ್ಕೆ ಬೆಂಬಲ ಕೊಡು… ಒಂದುವೇಳೆ ಹಿಂದೂತ್ವದ ಹೆಸರಲ್ಲಿ ಹಣ ಮತ್ತು ಅ… ಗಳಿಸಲು ಸಾಧ್ಯವಿಲ್ಲ ಎಂದು ಈ ಬಂಟ ಶೆಟ್ಟಿ… ಮನದಟ್ಟಾದ ತಕ್ಷಣ ತಮ್ಮ ಎಂದಿನ ವ್ಯಾಪಾರಿ ಬು… ಅನುಗುಣವಾಗಿಯೇ ಅವರು ಸಂಘ ಪರಿವಾರ… ದೂರವಾಗುತ್ತಾರೆ. ಆದರೆ ಮುಗ್ಧ ಅರೆ-ಸಾಕ್ಷರ ನಿರುದ್… ಬಿಲ್ಲವರು ಮಾತ್ರ ಆ ಕರಟಕ ದಮನಕ ಪಿಂಗ… ತೋಡಿರುವ ಕೊಚ್ಚೆ ಗುಂಡಿಗೆ ಬಿದ್ದು ಸೊಂಟದ… ಈಗಾಗಲೇ ಹೂತುಹೋಗಿದ್ದಾರೆ. ಹಾಗಾಗಿ ಬಿಲ್ಲ… ಈ ಕೊಚ್ಚೆ ಗುಂಡಿಯಿಂದ ಹೊರತೆಗೆದು ವಿವೇಕವಂತ… ಮಾಡಬೇಕಾದರೆ ಅವರನ್ನು ಜಿಲ್ಲೆಯಿಂದ ಹೊರ … ಬೆಂಗಳೂರಿನಂತಹ ಮಹಾನಗರದಲ್ಲಿ ಉದ್… ಒದಗಿಸಿಕೊಟ್ಟರೇನೇ ತುಳುನಾಡಿನಲ್ಲಿ ಕರಟಕ ದಮ… ಸ್ಥಾಪಿಸಿರುವ ಹಿಂದುತ್ವ ಲ್ಯಾಬ್‌ಗಳು ಬಿ… ಕಳೆದುಕೊಂಡು ಮುಚ್ಚಿಹೋಗುವುದು ಸಾಧ್ಯ.

ಹಿಂದೂತ್ವ ಲ್ಯಾಬ್ ಸೇರಿರುವ ನಿರುದ್ಯೋಗಿ … ತುಳುವ ಯುವಕರಲ್ಲಿ 80% ಯುವಕರು ಗ… ವ್ಯಸನಿಗಳಾಗಿದ್ದಾರೆ ಎಂಬುದು ಉತ್ಪ್ರೇಕ್ಷೆಯಲ್ಲ. ಕರಾ… ನಗರಗಳಲ್ಲಿ ಮಾತ್ರವಲ್ಲ, ಹಳ್ಳಿಹಳ್ಳಿಗಳಲ್ಲೂ ಕಾಲೇ… ಹತ್ತಿರವಲ್ಲದೇ ಎಳೆ ಹುಡುಗರು ಕಲಿಯುವ ಹೈಸ್ಕೂ… ಹತ್ತಿರವೂ ಗೂಡಂಗಡಿಗಳಲ್ಲಿ ಗಾಂಜಾ ಮಾರಾಟವಾ… ಎಂದರೆ ಅಪಾಯದ ಮಟ್ಟ ಊಹಿಸಿ. ಈ … ಅಪಾಯಕಾರಿ ಸ್ಥಿತಿ ಉಂಟಾಗಲು ಕರಾವಳಿಯ … ಪೊಲೀಸರು ಹಾಗೂ ಶತಭ್ರಷ್ಟ ಕಾಂಗ್ರೆಸ್ಸಿಗರೂ … ಮಟ್ಟಿಗೆ ಕಾರಣ. ಹಿಂದೂತ್ವ ಲ್ಯಾಬ್‌ನೊಂದಿಗೆ ಗ… ಡ್ರಗ್ ಜಾಲಗಳ ಹಣಕಾಸು ವ್ಯವಸ್ಥೆ ನೇರ… ಹೆಣೆದುಕೊಂಡಿರುವ ಆರೋಪವೂ ಇದೆ. ಇದಕ್ಕೆ … ಪರಿಹಾರ ಹುಡುಕದಿದ್ದರೆ ಮುಂಬೈಯೊಂದಿಗೆ … ಸಂಬಂಧ ಹೊಂದಿರುವ ತುಳುನಾಡು ಧರ್ಮದ ಅ… ಲ್ಯಾಬ್‌ನೊಂದಿಗೆ ಡ್ರಗ್ಸ್ ಅಮಲಿನ ಲ್ಯಾಬ್ ಸಹ ಆಗ… ಖಂಡಿತ.

■ *ಪಿ. ಶಿವರಾಮ ಶೆಟ್ಟಿ, ಕಾ…*

ಮೋದಿ ಸಾಹೇಬ ಓದಲೇಬೇಕಾದ ಪುಸ್ತಕಗಳು


'ನಮೋ' ಅಂದ್ರೆ ಯಾರಿಗೆ ತಾನೇ ಗೊತ್ತಿಲ್ಲ. 'ಭಕ್ತ'ರ ...ದ ವರ್ಲ್ಡ್ ಫೇಮಸ್ ಸೂಪರ್ ಹೀರೋ! ಭಕ್ತರಲ್ಲದ ...ಹಿ'ಗಳಿಗೂ ನಮೋ ಬಗ್ಗೆ ಸಾಕಷ್ಟು ತಿಳಿದಿದೆ. ...ಅವ್ಯಾಹತ ವಿದೇಶಿ ಹಾರಾಟಗಳು, ಶಾಕೂರೀಕಿನ ...ಷಣಗಳು, ತನ್ನ ಮಾತನ್ನು ತಾನೇ ಆನಂದಿಸುವ ...ತಿ.... ಅಬ್ಬಬ್ಬಾ ಪಟ್ಟಿ ದೊಡ್ಡದಾಗುತ್ತಲೇ ಸಾಗುತ್ತದೆ. ...ದರೆ ಇಡೀ ಇಂಡಿಯಾಕ್ಕೆ ಗೊತ್ತಿಲ್ಲದ ಸಂಗತಿ ಅಂದ್ರೆ ...ಹಾಮಾನವ ಯಾವ್ಯಾವ ಪುಸ್ತಕ ಓದುತ್ತಾನೆ?

...ನ್ನೆಯಷ್ಟೇ ನಮೋನ ಪರಮಾಪ್ತ ಗೆಳೆಯ ಬರಾಕ್ ...ಮಾ ತನ್ನ ನೆಚ್ಚಿನ ಸಂಗೀತಗಳ ಪಟ್ಟಿಯೊಂದನ್ನು ...ಷ್ಟ. ಈ ವಿಷಯ ಕಿವಿಗೆ ಬಿದ್ದಕೂಡಲೇ ನಮೋ ...ದ ಮೇಲೆ ಕೃತಕ ನಗೆಯೊಂದು ಹಾದುಹೋಗಿರುತ್ತೆ ... ತನ್ನ ಕ್ಷುಲ್ಲಕ ಗತಕಾಲವನ್ನು ನೆನೆದಲ್ಲ, ತಾನೊಬ್ಬ ...ನ ಪುರಾತನ ದೇಶದ ಜನನಾಯಕ ಅನ್ನೋದನ್ನು ...ಧಿಸಲೋಸುಗ. ಅದೂ ಎಂಥಾ ದೇಶ, ಪ್ರಪಂಚದ ...ಮೊದಲ ನಾಗರಿಕತೆಗಳು ಮೈನೆರೆಯುವ ಸಾವಿರಾರು ...ಗಳ ಹಿಂದೆಯೇ ಪ್ಲಾಸ್ಟಿಕ್ ಸರ್ಜರಿ ಕಂಡುಹಿಡಿದಿದ್ದ, ...ಪ್ಲೇನ್ ತಂತ್ರಜ್ಞಾನದಲ್ಲಿ ಹಾರಾಟ ನಡೆಸಿದ್ದ, ...ಟ್ಯೂಬ್ ಬೇಬಿಗಳನ್ನು ಉತ್ಪಾದಿಸಿದ್ದ ಇನ್ನೂ ಏನೇನೋ ...ೋ, ನ್ಯಾನೋ ಚಮತ್ಕಾರಗಳನ್ನೆಲ್ಲ ಮಾಡಿದ್ದ ದೇಶ. ...ಲ್ಲಿ ಹೋದಬಂದಲ್ಲೆಲ್ಲ ನಮೋ ಸಾಹೇಬನೆ ...ೊಂದು ತಿರುಗಾಡುತ್ತಾನೆ. ಇಂತದ್ದನ್ನೆಲ್ಲ ಹೇಳಬೇಕೆಂದರೆ ...ನವಾದ ಹೊತ್ತಿಗೆಗಳನ್ನೇ ಓದಿ ಉರುಳಾಡಿರಬೇಕು!

...ಾಗಾದರೆ, ನಮೋ ಸಾಹೇಬ ಏನೆಲ್ಲಾ ಓದುತ್ತಾನೆ? ...ದೃಕ್ಕಂತೂ ಇಂಡಿಯಾಕ್ಕೆ ಈ ಪ್ರಶ್ನೆಗೆ ಉತ್ತರ ...ಕೊಳ್ಳುವ ಭಾಗ್ಯ ಲಭಿಸಿಲ್ಲ, ಆದರೆ ಈಗಿನ ಪರಿಸ್ಥಿತಿಗೆ ... ನಮೋ ಓದಲೇಬೇಕಾದ ಒಂದಷ್ಟು ಇಂಟರೆಸ್ಟಿಂಗ್ ...ಗಳ ಪಟ್ಟಿ ಇಲ್ಲಿದೆ.

...ೊದಲನೆಯದಾಗಿ, ನಮೋ ಈಗ ತುರ್ತಾಗಿ ತನ್ನ ... ರಾಜ್ಯ ಗುಜರಾತ್‌ನತ್ತ ಗಮನಹರಿಸಬೇಕಿದೆ. ...ರ ಮೀಸಲಾತಿ ಹೋರಾಟ ಶುರುವಾದ ಕ್ಷಣದಿಂದ ...ಯ ಊನಾ ಘಟನೆಯ ಮುಹೂರ್ತಕ್ಕೆ ಸರಿಯಾಗಿ ... ಕಷ್ಟಪಟ್ಟು ಗಾಳಿಯೂದಿ ಉಬ್ಬಿಸಿದ್ದ 'ಗುಜರಾತ್ ...ಲ್' ಧಸಕ್ಕನೆ ಕುಸಿದು ಕುಳಿತಿದೆ. ಶೋಷಿತರು ...ಷಕರ ದಬ್ಬಾಳಿಕೆಯನ್ನು ಧಿಕ್ಕರಿಸಿ ನಿಂತಿದ್ದಾರೆ. ಅಲ್ಲೀಗ ... ಉಪಸ್ಥಿತಿ ಎದ್ದು ಕಾಣುತ್ತಿದೆ. ನಮೋ ಉನ್ಮಾದಿತ ... ರಕ್ಷಕರನ್ನು ನಿಭಾಯಿಸಬೇಕೆಂದರೆ ಆತ ಡಿ.ಎನ್. ...ಅವರು ಬರೆದಿರುವ 'ದಿ ಮಿಥ್ ಆಫ್ ದಿ ಹೋಲಿ ... (ಗೋವು ಪವಿತ್ರ ಎಂಬ ಮಿಥ್ಯ) ಪುಸ್ತಕವನ್ನು ...ೀಬೇಕು.

...ಮೋನ ಈ ಸಾಹಸಕ್ಕೆ ಮೀರಾ ವೇಲಾಯುಧನ್‌ರು ... ಬ್ಲಾಗ್‌ನಲ್ಲಿ ಬರೆದುಕೊಂಡಿರುವ 'ದಲಿತ್ಸ್ ಅಂಡ್ ...ೋಲಿ ಕೌ' (ದಲಿತರು ಮತ್ತು ಪವಿತ್ರ ಗೋವು) ...ನವೂ ನೆರವು ನೀಡಲಿದೆ. ನಮೋ ಸಾಹೇಬ ಅದನ್ನೂ ...ೊಳ್ಳುವುದು ಒಳಿತು.



ಇನ್ನು ನಮೋ ಓದಲೇಬೇಕಾದ ಮೂರನೇ ಪುಸ್ತಕವೆಂದರೆ ಎ.ಜಿ. ನೂರಾನಿ ಬರೆದಿರುವ 'ದಿ ಕಾಶ್ಮೀರ್ ಡಿಸ್ಪ್ಯೂಟ್' (ಕಾಶ್ಮೀರಿ ವಿವಾದ) ಪುಸ್ತಕ. ಇದರ ಸಂಪುಟ ಒಂದು ಮತ್ತು ಎರಡನ್ನೂ ಓದುವುದು ಒಳಿತು. ಯಾಕೆಂದರೆ ಕಾಶ್ಮೀರದಲ್ಲಿ ಶಾಂತಿಯುತ ಪರಿಹಾರ ಬಯಸುವುದಾಗಿ ನಮೋ ಉದ್ಘರಿಸಿದ್ದಾನೆ. ಪರಿಹಾರ..., ಇರಲಿ, ಆದ್ರೆ ನಮೋ ಸಾಹೇಬನಿಗೆ ಕಾಶ್ಮೀರದ ಸಮಸ್ಯೆ ಏನೆಂಬುದು ಗೊತ್ತಿದೆಯೇ? ಅದನ್ನು ಗೊತ್ತು ಮಾಡಿಕೊಳ್ಳುವುದಕ್ಕಾದರೂ ಆತ ಈ ಪುಸ್ತಕಗಳನ್ನು ತಿರುವಿಹಾಕಲೇಬೇಕು. ಆಮೇಲೆ ಪರಿಹಾರದ ಬಗ್ಗೆ ಮಾತನಾಡಿದರೆ ಅದರಲ್ಲೊಂದಷ್ಟು ತೂಕ ಕಾಣಿಸಿಕೊಂಡೀತು.

ಅದೇರೀತಿ 'ಅಚ್ಚೇ ದಿನ್' ಹರಿಕಾರ ನಮೋ ಓದಬೇಕಾದ ನಾಲ್ಕನೇ ಪುಸ್ತಕ ವಿಜಯ್ ಪ್ರಸಾದ್ ಬರೆದಿರುವ 'ದಿ ಪೂರರ್ ನೇಷನ್ಸ್' (ಬಡ ದೇಶಗಳು). ಕುಸುರಿ ಮತ್ತು ಸ್ವಾರಸ್ಯಗಳನ್ನೆ ಬೆರೆಸಿ ಬರೆದಿರುವ ಈ ಪುಸ್ತಕವನ್ನು ನೆಕ್ಸ್ಟ್ ಟೈಮ್ ನಮೋ ವಾಷಿಂಗ್ಟನ್ ಡಿಸಿಯಂತಹ ದೂರದ ಊರಿಗೆ ಹಾರುವಾಗ ವಿಮಾನದೊಳಗೇ ಓದಿ ಮುಗಿಸಬಹುದು.

ಐದನೇ ಪುಸ್ತಕವಾಗಿ, ಆತನ ಪರಮಾಪ್ತ ದೋಸ್ತಿಗಳಾದ ಅಂಬಾನಿಗಳ ಬಗ್ಗೆ ಪರಂಜೋಯ್ ಗುಹಾ ಥಾಕುರ್ತಾ ಬರೆದಿರುವ 'ಗ್ಯಾಸ್ ವಾರ್ಸ್' (ಅನಿಲ ಯುದ್ಧ) ಪುಸ್ತಕವನ್ನು ನಮೋ ಓದಬೇಕಿದೆ ಅಂತ ನಮಗನ್ನಿಸುತ್ತೆ. ಇದು ಬಂಡವಾಳಶಾಹಿ ಚಮಚಾಗಿರಿಯ ಕುರಿತಾಗಿ ಬರೆದ ಪುಸ್ತಕ. ಈ ವಿಷಯದಲ್ಲಿ ನಮೋ ಸಾಹೇಬ ಡಬಲ್ ಡಿಗ್ರಿ ಮುಗಿಸಿರೋದರಿಂದ ಈ ಪುಸ್ತಕದ ಆವಶ್ಯಕತೆ ಆತನಿಗೆ ಇಲ್ಲದೇ ಇರಬಹುದು.

ತನ್ನನ್ನು ತಾನು ಮುತ್ಸದ್ದಿ ಅಂತ ಬಿಂಬಿಸಿಕೊಳ್ಳೋ ಶೋಕಿ ಆತನಿಗಿರುವುದರಿಂದ ಗೋವಿಂದ ಪನ್ಸಾರೆಯವರ 'ಹೂ ವಾಸ್ ಶಿವಾಜಿ' (ಶಿವಾಜಿ ಯಾರು) ಪುಸ್ತಕವನ್ನು ಆರನೇ ಆಯ್ಕೆಯಾಗಿ ಶಿಫಾರಸ್ಸು ಮಾಡಬಹುದು. ಪ್ರಸಿದ್ಧ ಐತಿಹ್ಯ ಆಡಳಿತಗಾರನನ್ನು ಕೇಸರಿ ಛಾಯೆಯಿಂದ ಹೊರಗಿಟ್ಟು ವಸ್ತುನಿಷ್ಠವಾಗಿ ನೋಡುವ ಕೃತಿ ಇದು. ಅಂದಹಾಗೆ, ಈ ಪುಸ್ತಕ ಬರೆದ ಕಾರಣಕ್ಕೆ ಪನ್ಸಾರೆಯವರನ್ನು ಗುಂಡಿಟ್ಟು ಕೊಲೆ ಮಾಡಿರುವುದರಿಂದ ಇದು 'ಅಪಾಯಕಾರಿ' ಪುಸ್ತಕವೇ ಸರಿ!

ನಮೋ ಮತ್ತವನ ಕೇಸರಿ ಬ್ರಿಗೇಡಿಗೆ ಹಿಂದೂತ್ವವೇ ಬಂಡವಾಳ. ಅಂತಹ ಅಪ್ರತಿಮ 'ಶ್ರೇಷ್ಠಭ್ರಮೆ'ಯ ಸಿದ್ಧಾಂತದ ಬಗ್ಗೆ ಕೊಳಕು ಹಿಂದೂತ್ವ-ದ್ವೇಷಿಗಳು ಏನೆಲ್ಲಾ ವಿಷಕಾರುತ್ತಾರೆ ಅಂತ ತಿಳಿದುಕೊಳ್ಳುವ ಸಲುವಾಗಿ ಪೆಟ್ರೀಷಿಯಾ ಜೆಫೆರ್ರಿ ಮತ್ತು ರೋಜರ್ ಜೆಫೆರ್ರಿ ಬರೆದಿರುವ 'ಕಂಫ್ರಾಂಟಿಂಗ್ ಸ್ಯಾಫ್ರನ್ ಡೆಮೊಗ್ರಾಫಿ' (ಕೇಸರಿ ಜನಪಿವರಣೆಯನ್ನು ಎದುರಿಸುವ ಬಗೆ) ಪುಸ್ತಕವನ್ನು ನಮೋ ಒಮ್ಮೆ ಓದಲೇಬೇಕು.

ನಮೋ ಓದಬೇಕಾದ ಎಂಟನೇ ಪುಸ್ತಕವೊಂದಿದೆ. ಅದು 'ದಿ ಆರ್ಮ್‌ಚೇರ್ ರೆವೊಲ್ಯೂಷನರಿ' (ಆರಾಮಕುರ್ಚಿ ಕ್ರಾಂತಿಕಾರಿ). ಈ ಪುಸ್ತಕದ ಲೇಖಕನಿಗೂ ನಮೋನಂತೆ ಸಿನಿಮಾ ಸ್ಟಾರ್‌ಗಳೆಂದರೆ ಇಷ್ಟ ಎನ್ನುವ ಆಯಾಮದಿಂದ ಆದನ್ನಾತ ಓದಬೇಕೆ ವಿನಾಃ ಯಾವುದೇ ಕಾರಣಕ್ಕೂ ಅದರ ಲೇಖಕ ದೇಶವಿಭಜನೆಯ ನಂತರ ಪಕ್ಕದ ರಾಷ್ಟ್ರದ ಪ್ರಜೆಯಾಗಿ ಹಂಚಿಕೆಯಾದ, ಅರ್ಥಾತ್ ಪಾರಿಕ್ಕರ್ ಪರಿಭಾಷೆಯ 'ನರಕ'ದ ನಿವಾಸಿಯಾದ, ಅನ್ನೋ ಸತ್ಯವನ್ನು ಮನಸ್ಸಿಗೆ ತಂದುಕೊಳ್ಳಲೇಬಾರದು. ಈ ಪುಸ್ತಕದಲ್ಲಿ ಸಿನಿಮಾ ನಟರೂ ಸೇರಿದಂತೆ ಆಗಿನ ಕಾಲಘಟ್ಟದ ಮಹಾನ್ ವ್ಯಕ್ತಿಚಿತ್ರಗಳನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಈ ಲೇಖಕ ಮಾತ್ರ ಕಟ್ಟಿಕೊಡಲು ಸಾಧ್ಯ ಎನ್ನುವಷ್ಟು ಅದ್ಭುತವಾಗಿ ಚಿತ್ರಿಸಲಾಗಿದೆ. ಅಷ್ಟಕ್ಕೂ ಆ ಪುಸ್ತಕ ಬರೆದಿರೋದು ಸಾದತ್ ಹಸನ್ ಮಾಂಟೊ.


ನಾವು ಇಷ್ಟಪಟ್ಟು ಹೇಳುವ ಆದರೆ ನಮೋ ಸಾಹೇಬನಿಗೆ ತುಂಬಾನೇ ಕಷ್ಟವೆನಿಸುವ ಒಂಬತ್ತನೇ ಪುಸ್ತಕದ ಹೆಸರು 'ಗುಜರಾತ್ ಫೈಲ್ಸ್'. ಇದರಲ್ಲಿ ಆತನ ಬಲಗೈ ಬಂಟ ಅಮಿತ್ ಶಾನದ್ದೇ ಪ್ರಧಾನ ಪಾತ್ರಪೋಷಣೆ. ಹಾಗೆ ಒಂದಷ್ಟು 'ಅವ್ಯಕ್ತ' ಕಾರಣಗಳಿಗಾಗಿ ಈ ಪುಸ್ತಕ ಇಷ್ಟವಿಲ್ಲ ಅನ್ನೋ ವರ್ತಮಾನಗಳು ನಮಗೆ ಬಂದು ತಲುಪಿವೆ. ಅಷ್ಟೇ ಅಲ್ಲ, ಈ ಪುಸ್ತಕದ ಆಸುಪಾಸಿನಲ್ಲಿ ಸುಳಿದಾಡಿದವರನ್ನು ಕಂಡರೆ ಸಾಕು ಆತ ಕೆಂಡಮಂಡಲ ಆಗಿಬಿಡುತ್ತಾನಂತೆ. ಆದ್ದರಿಂದ ಮೋದಿ ಸಾಹೇಬ ತನ್ನ ಈ ಬಂಟನಿಗೆ ಗೊತ್ತಾಗದಂತೆ ಈ ಪುಸ್ತಕವನ್ನು ಓದಿದರೆ ಆತನಿಗೇ ಒಳಿತು.

ಇನ್ನು ಕಟ್ಟಕಡೆಯ ಹಾಗೂ ಹತ್ತನೇ ಪುಸ್ತಕ ಅಂದರೆ ನಮೋ ಸಾಹೇಬನ ಅತ್ಯಾಪ್ತ ಲೇಖಕಿ ತೀಸ್ತಾ ಸೆಟ್ಲ್‌ವಾದರು ಮಹಾತ್ಮ ಗಾಂಧಿ ಹತ್ಯೆಯ ಕುರಿತಾಗಿ ದಾಖಲುಗೊಳಿಸಿದ 'ಬಿಯಾಂಡ್ ಡೌಟ್' (ಕಿಂಚಿತ್ತೂ ಸಂಶಯ ಇಲ್ಲದಂತೆ) ಪುಸ್ತಕ. ಓಹ್ ಕ್ಷಮಿಸಿ, ಇದು ರಾಹುಲ್ ಗಾಂಧಿ ಓದಬೇಕಾದ ಪುಸ್ತಕಗಳ ಪಟ್ಟಿಯಲ್ಲಿರಬೇಕಾದ ಕೃತಿ! ಗಾಂಧಿಯನ್ನು ಕೊಂದವರು ಯಾರೆಂಬುದನ್ನು ನಮೋ ಸಾಹೇಬನಿಗೆ ಮತ್ತೊಮ್ಮೆ ಹೇಳುವ ಅಗತ್ಯವೇ ಇಲ್ಲ ಬಿಡಿ...

ಈ ಪಟ್ಟಿಯನ್ನು ಓದಿದ ಪ್ರತಿಯೊಬ್ಬ 'ದೇಶಭಕ್ತ'ನೂ ಕನಿಷ್ಠ ಹತ್ತು ಜನರಿಗಾದರು ಇದನ್ನು ಓದುವಂತೆ ಶಿಫಾರಸ್ಸು ಮಾಡಬೇಕು. ಹಾಗೆ ಮಾಡಿದವರಿಗೆ, ವ್ಯಾವಹಾರಿಕ ಮತ್ತು ಪ್ರೀತಿ ತುಂಬಿದ ಗೌರವಗಳನ್ನು ನೀಡಲಾಗುತ್ತದೆ. ಹಾಗೆ ಮಾಡದಿದ್ದರೆ, ಅಂತವರಿಗೆ 'ದೇಶದ್ರೋಹಿ'ಗಳು ಅನ್ನೋ ಹಣೆಪಟ್ಟಿ ಕಟ್ಟಿ ಪಬ್ಲಿಕ್ ಟಿವಿಯ ಕಡ್ಡಿ ರಂಗನ ಶೋವನ್ನು ಒಂದು ವಾರದ ಕಾಲ ಪ್ರತಿದಿನ ನೋಡುವ ಶಿಕ್ಷೆ ಕಾದಿರುತ್ತೆ!

■ *ಗಿರೀಶ್ ತಾಳಿಕಟ್ಟೆ*
ಸ್ಫೂರ್ತಿ: ಲೆಫ್ಟ್ ವರ್ಲ್ಡ್

ಮೊಟ್ಟೆಗಳು ಒಡೆಯುತ್ತವೆ!



ಹಸಿವಿನ ಕಾವಲಿ
ಬಿಸಿಯೇರಿದಾಗ
ಮೊಟ್ಟೆಗಳು ಒಡೆಯುತ್ತವೆ
ಆಹಾರವಾಗುತ್ತವೆ...
ದೇಹಕ್ಕೆ ಶಕ್ತಿಯಾಗುತ್ತವೆ!

ಚಿಂತನೆಯ ಹೇಂಟೆ,
ಕಾವು ಕೂತಾಗ
ಮೊಟ್ಟೆಗಳು ಒಡೆಯುತ್ತವೆ
ಮರಿಯಾಗುತ್ತವೆ...
ಮನಸ್ಸಿಗೆ ಶಕ್ತಿಯಾಗುತ್ತವೆ!

ಬೌದ್ಧಿಕ ನಿತಾಣಿಗಳ
ಕೈ ನಡುಗುವಾಗಲೂ
ಮೊಟ್ಟೆಗಳು ಬೀಳುತ್ತವೆ
ಸುಮ್ಮನೆ ಒಡೆಯುತ್ತವೆ...
ದುರ್ಬಲತೆಯ ಅಭಿವ್ಯಕ್ತಿಯಾಗುತ್ತವೆ!

■ ವಿಲ್ಸನ್ ಕಟೀಲ್

ಉಗ್ರ ರಾಷ್ಟ್ರೀಯತೆಯ ಪ್ರದರ್ಶನ: ಫ್ಯಾಸಿಸಂನ ಲಕ್ಷ

ದಿನಗಳೆದಂತೆ ಮೋದಿ ಸರ್ಕಾರದ 'ಅಭಿವೃದ್ಧಿ'ಯ ಮುಖವಾಡ ಕಳಚುತ್ತ ಬರುತ್ತಿದೆ. ಫ್ಯಾಸಿಸಂನ ಕರಾಳಮುಖ ಗೋಚರವಾಗತೊಡಗಿದೆ. ಭಾರತದ ಪ್ರಜಾತಾಂತ್ರಿಕ ಸಂಸ್ಥೆಗಳು ಒಂದೊಂದಾಗಿ ಹಿಂದೂರಾಷ್ಟ್ರವಾದಿಗಳ ಕಪಿಮುಷ್ಟಿಯೊಳಗೆ ಸೇರುತ್ತಿವೆ. ಹೆಚ್ಚಿನ ಮಾಧ್ಯಮಗಳು ಕಾರ್ಪೋರೇಟುಗಳ ನಿಯಂತ್ರಣ ಅಥವಾ/ಮತ್ತು ಕೇಸರೀಕರಣಕ್ಕೆ ತುತ್ತಾಗಿ ಮೋದಿ ಸರ್ಕಾರದ ವಕ್ತಾರರಂತಾಗಿವೆ. ಮುಸೋಲಿನಿ, ಹಿಟ್ಲರ್‌ಗಳ ಕರಿಷರಟು, ಒವಿಆರ್‌ವಿ, ಕಂದುಷರಟು ಮಾದರಿಯ ಖಾಸಗಿ ಕಾವಲು ಪಡೆಗಳು ದೇಶಾದ್ಯಂತ ದೊಂಬಿ ಕಾರ್ಯಾಚರಣೆಗಳನ್ನು ನಡೆಸತೊಡಗಿವೆ. ಎಲ್ಲೆಡೆಗಳಲ್ಲಿ ಗೋಪ್ರೇಮ, ದೇಶಪ್ರೇಮಗಳ ಅಟ್ಟಹಾಸ ಮುಗಿಲು ಮುಟ್ಟಿದೆ. ಭಿನ್ನಮತದ ಹತ್ತಿಕ್ಕುವಿಕೆ, ರಾಷ್ಟ್ರಗೀತೆಗೆ ಕಡ್ಡಾಯವಾಗಿ ಎದ್ದುನಿಲ್ಲಬೇಕೆಂಬ ಹುಕುಂ, ಭಗವದ್ಗೀತೆ, ಸಂಸ್ಕೃತಗಳ ಕಲಿಕೆ ಇತ್ಯಾದಿಗಳನ್ನು ಒತ್ತಾಯಪೂರ್ವಕವಾಗಿ ಹೇರಲಾಗುತ್ತಿದೆ. "ಭಾರತ್ ಮಾತಾ ಕಿ ಜೈ" ಎನ್ನದವರು, ಸೇನಾಪಡೆಗಳಿಂದ ಮಾನವಹಕ್ಕು ಉಲ್ಲಂಘನೆಗಳ ವಿಷಯ ಎತ್ತುವವರು, ಪಾಕಿಸ್ತಾನಿ ಜನರೊಂದಿಗೆ ಉತ್ತಮ ಬಾಂಧವ್ಯ ಬಯಸುವ ರಮ್ಯ ಮೊದಲಾದವರಿಗೆಲ್ಲಾ ದೇಶದ್ರೋಹದ ಹಣೆಪಟ್ಟಿ ಹಚ್ಚಲಾಗುತ್ತಿದೆ. ಪಾಕಿಸ್ತಾನಿ ಜನರ ವಿಷಯದಲ್ಲಿ ನನ್ನ ವೈಯಕ್ತಿಕ ಅನುಭವವೂ ತುಂಬಾ ಒಳ್ಳೆಯದಾಗಿತ್ತು. 1989ರಲ್ಲಿ ನಾನು ನೌಕರಿ ಮಾಡುತ್ತಿದ್ದ ಸಂಸ್ಥೆಯ ವತಿಯಿಂದ ಒಂದು ಡೀಸಲ್ ಚಾಲಿತ ವಿದ್ಯುತ್ ಘಟಕದ ನಿರ್ಮಾಣ ಕಾರ್ಯನಿಮಿತ್ತ ಕರಾಚಿಗೆ ಹೋಗುವ ಸಂದರ್ಭ ಸಿಕ್ಕಿತ್ತು. ಅಂದು ಒಂದು ತಿಂಗಳ ಕಾಲ ಅಲ್ಲಿನ ಜನರೊಂದಿಗೆ ಕಳೆದ ದಿನಗಳು ನಿಜಕ್ಕೂ ಅವಿಸ್ಮರಣೀಯ. ಆ ಸ್ನೇಹಮಯ ಗಳಿಗೆಗಳನ್ನು ನಾನು ಇಂದಿಗೂ ಸ್ಮರಿಸಿಕೊಳ್ಳುತ್ತೇನೆ. ಇರಲಿ. ಇಂದು "ಸ್ವರ್ಗ, ನರಕ", "ದೇಶಪ್ರೇಮ, ದೇಶದ್ರೋಹ" ಇತ್ಯಾದಿ, ಇತ್ಯಾದಿ ಚರ್ಚೆಗಳು ಪೊಲೀಸ್ ಠಾಣೆ, ಕೋರ್ಟುಕಚೇರಿಗಳಲ್ಲಿ ಪರ್ಯವಸಾನ ಆಗುತ್ತಿರುವುದನ್ನು ಒಳಗೊಂಡಂತೆ ದೇಶದಲ್ಲಿ ಆಗುತ್ತಿರುವ ಆತಂಕಕಾರಿ ಬೆಳವಣಿಗೆಗಳ ಬಗ್ಗೆ ಖ್ಯಾತ ಸಮಾಜವಿಜ್ಞಾನಿ ಶಿವ್ ವಿಶ್ವನಾಥನ್ ಏನು ಹೇಳುತ್ತಿದ್ದಾರೆಂದು ನೋಡೋಣ. 26.8.2016ರ ದ ಹಿಂದು ಪತ್ರಿಕೆಯಲ್ಲಿ ಪ್ರಕಟವಾಗಿರುವ ಆ ಲೇಖನದ ಯಥಾವತ್ ಅನುವಾದ ಇಲ್ಲಿದೆ:

"ಒಬ್ಬ ಶ್ರೇಷ್ಠ ವಿದ್ವಾಂಸರೊಮ್ಮೆ 'ದೇಶಭಕ್ತಿ ಎಂಬುದು ಪುಂಡರ ಕೊನೆಯ ಆಸರೆಯಾಗಿದೆ' ಎಂದು ಹೇಳಿದ್ದರು. ಆತ ಇನ್ನೂ ನೂರು ವರ್ಷ ಬದುಕಿದ್ದಿದ್ದರೆ "ರಾಷ್ಟ್ರ ಪ್ರಭುತ್ವ ಎನ್ನುವುದು ಆತ್ಮವಿಶ್ವಾಸವಿರದ ಸರ್ವಾಧಿಕಾರಿ ಪ್ರವೃತ್ತಿಯವರ ಮೊದಲನೆ ಬಿಡಾರ" ಎಂಬ ಇನ್ನೊಂದು ವಾಕ್ಯವನ್ನು ಸೇರಿಸಬಹುದಿತ್ತು. ಇಂದು ರಾಷ್ಟ್ರ ಪ್ರಭುತ್ವ ಒಂದು ಪೊಲೀಸ್ ಕಾರ್ಯಾಚರಣೆಯಾಗಿ ಪರಿಣಮಿಸಿದೆ. ಅದು ಪೌರತ್ವ ಕುರಿತ ಅಧಿಕೃತ ಅರ್ಥನಿರೂಪಣೆಯ ತಾಳಕ್ಕೆ ತಕ್ಕಂತೆ ಹೆಜ್ಜೆಹಾಕದ ವಿಚಾರಧಾರೆಗಳಿಗೆ, ವರ್ಗಗಳಿಗೆ ಕತ್ತರಿ ಪ್ರಯೋಗ ಮಾಡುತ್ತಿದೆ.

ರಾಷ್ಟ್ರ ಪ್ರಭುತ್ವ ಒಂದು ವರ್ತುಲಾಕಾರದ ಸೆರೆಮನೆಯಾಗಿ, ವಿಚಾರಗಳನ್ನು ನಿಯಂತ್ರಿಸುವ ಸಂಸ್ಥೆಯಾಗಿ ಪರಿಣಮಿಸಿದೆ. ವಿಚಿತ್ರವೆಂದರೆ ಈ ಹಂತವನ್ನು ಇಂದು ಚುನಾವಣೆಯ ಹಕ್ಕುಗಳಿರುವ ಪ್ರಜಾಸತ್ತೆಯೊಳಗಿನ ವಿದ್ಯಮಾನದ ಒಂದು ಭಾಗವಾಗಿ ನೋಡಬೇಕಾಗುತ್ತದೆ. ಭಾರತದಲ್ಲಿ ಸಂಖ್ಯಾಬಲವಾದ ಮತ್ತು ಅಬ್ಬರದ ದೇಶಭಕ್ತಿಯ ಉಗ್ರ ರಾಷ್ಟ್ರೀಯತೆಗಳು ಒಟ್ಟು ಸೇರಿಕೊಂಡು ಎರಡು ಪ್ರತ್ಯೇಕವಾದ ನಿಯಂತ್ರಣ ಕಾರ್ಯಾಚರಣೆಗಳನ್ನು ನಡೆಸುತ್ತಿವೆ. ಸ್ಥಳೀಯ ಮಟ್ಟದಲ್ಲಿ ಬಜರಂಗ ದಳದಂತಹ ಕಾವಲುಪಡೆಗಳು ಸಮಾಜವನ್ನು ನಿಯಂತ್ರಿಸುತ್ತ ಉಡುಗೆತೊಡುಗೆಯ ಪರಿಭಾಷೆಯಲ್ಲಾಗಲಿ ಅಥವಾ ಕಲೆ, ಸಿನಿಮಾ ರಂಗಗಳ ಸೃಜನಶೀಲತೆಯ ಪರಿಭಾಷೆಯಲ್ಲಾಗಲಿ ಲೈಂಗಿಕತೆಗೆ ಯಾವುದೇ ಅಪಾಯ ತಟ್ಟದಂತೆ ಕಾವಲು ಕಾಯುತ್ತವೆ. ಹೀಗೆ ಸ್ಥಳೀಯ ಮಟ್ಟದಲ್ಲಿ ಲೈಂಗಿಕತೆಯ ನಿಯಂತ್ರಣ ನಡೆದರೆ ರಾಷ್ಟ್ರಮಟ್ಟದಲ್ಲಿ ವಿಚಾರ ನಿಯಂತ್ರಣ ನಡೆಯುತ್ತದೆ. ಅಮೆರಿಕದಲ್ಲಿ ಕು ಕ್ಲಕ್ಸ್ ಕ್ಲಾನ್ ಎಂಬ ಸಂಘಟನೆ ಜನಾಂಗದ ಸಲುವಾಗಿ ಹುಟ್ಟಿದ್ದರೆ ಭಾರತದಲ್ಲಿ ಸೃಷ್ಟಿಸಲಾಗುತ್ತಿರುವ ಕಾವಲುಪಡೆಗಳ ಜಾಲ ರಾಷ್ಟ್ರದ ಸಲುವಾಗಿದೆ.


ಪೌರತ್ವ ಮತ್ತು ವಿಚಾರ ನಿಯಂತ್ರಣ

ದೇಶಪ್ರೇಮಿ ಮತ್ತು ಕದನಶೀಲ ದೇಶಾಭಿಮಾನಿ ಗುಂಪುಗಳು ನಡೆಸುವ ಕಾವಲು ಕಾಯುವಿಕೆಗೆ ಅಧಿಕೃತ ಅನುಮತಿ ದೊರೆತಿದೆ. ಇವರ ಪ್ರಕಾರ ಉಡುಗೆತೊಡುಗೆ ಮೇಲೆ ಮಾತ್ರವಲ್ಲ ಮನಸ್ಸಿನ ಮೇಲೂ ನಿರ್ಬಂಧ ಹೊಂದಿರುವವನೆ ಉತ್ತಮ ಪ್ರಜೆ. ಸಂಖ್ಯಾಬಲದ ಉಗ್ರ ರಾಷ್ಟ್ರೀಯತೆ ಸೃಷ್ಟಿಸುವ ಹೊಸ ಬಗೆಯ ವಿಚಾರ ನಿಯಂತ್ರಣದಡಿ ಅನ್ಯ ಮಾರ್ಗೀಯರಿಗೆ, ಭಿನ್ನಾಭಿಪ್ರಾಯ ಉಳ್ಳವರಿಗೆ, ಅಂಚಿನಲ್ಲಿರುವವರಿಗೆ ಮತ್ತು ಅಲ್ಪಸಂಖ್ಯಾತಪರರಿಗೆ ರಾಷ್ಟ್ರ ಪ್ರಭುತ್ವದ ಕೂಟಗಾಯನಕ್ಕೆ ಸೇರಿಕೊಳ್ಳುವುದು ಬೇರೆ ಥರವೆಂದು ಅನಿಸುತ್ತದೆ. ನೌಕರಿ, ಭದ್ರತೆ, ಸಮುದಾಯ ಕುರಿತ ಆತಂಕಗಳು ಸೃಷ್ಟಿಸುವ ಭೇದ್ಯತೆಯನ್ನು, ಆ ದೌರ್ಬಲ್ಯವನ್ನು ರಾಷ್ಟ್ರ ಪ್ರಭುತ್ವ ತನ್ನ ಸ್ವಪ್ರಯೋಜನಕ್ಕೆ ಬಳಸಿಕೊಳ್ಳಲು ಸಾಧ್ಯ ಎಂಬುದನ್ನು ಬಿಜೆಪಿಯಂತಹ ಪಕ್ಷಗಳು ಅರಿತಿವೆ. ಹೀಗೆ ತನಗಿಂತ ಭಿನ್ನವಾದ ಅಭಿಪ್ರಾಯ ಇರುವವರೆಲ್ಲ ದೇಶದ್ರೋಹಿಗಳಾಗುತ್ತಾರೆ. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ನಾನಾ ವಿಚಾರಧಾರೆಗಳ ಒಗ್ಗೂಡುವಿಕೆ ಆಗಿದ್ದ ರಾಷ್ಟ್ರೀಯತೆ ಇಂದು ಸಂಪೂರ್ಣವಾಗಿ ಬದಲಾಗಿ ಏಕರೂಪದ ರಾಷ್ಟ್ರ ಪ್ರಭುತ್ವ ಆಗಿದೆ. ಪೌರತ್ವ ಎನ್ನುವುದು ವಿಚಾರ ನಿಯಂತ್ರಣದ ಪೂರ್ವಭಾವಿ ಕಲ್ಪನೆಯಾಗುತ್ತಿದೆ. ಅದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಜನ ಗುಂಪುಗೂಡುತ್ತಾರೆ, ಗಲ್ಲಿಗೇರಿಸುವ ಪಡೆಗಳು ಹಾಜರಾಗುತ್ತವೆ. ಈ ಬರಡು ಮನೋಭಾವದ ರಾಷ್ಟ್ರೀಯತೆಯಿಂದಾಗಿ ಪ್ರಜಾಸತ್ತೆಯು ಪ್ರಜಾಸತ್ತಾತ್ಮಕ ಜೀವನಕ್ರಮಕ್ಕೆ ಅಪಾಯಕಾರಿಯಾಗಿ ಪರಿಣಮಿಸುತ್ತಿದೆ. ಇಲ್ಲಿಗೆ ವ್ಯಂಗ್ಯ ವಸ್ತುತಃ ಪೂರ್ತಿಗೊಂಡಂತೆ.

ಅತ್ತ ನರೇಂದ್ರ ಮೋದಿ ಆಡಳಿತದ ಸಮಸ್ಯೆಗಳಲ್ಲಿ ಮುಳುಗಿರುವ ಮುತ್ಸದ್ದಿಯಂತೆ ನಟಿಸುತ್ತಾ ಇರುವಾಗ ಇತ್ತ ಮತದಾರರೆದುರಿನ ಮೋದಿಯ ಪ್ರತಿರೂಪ ಅಮಿತ್ ಶಾ ಈ ಥಟ್ಟನೆ ಉಕ್ಕೇರುವ ಉಗ್ರ ರಾಷ್ಟ್ರೀಯತೆಯ ಸಂಚಾಲಕನಾಗಿದ್ದಾನೆ. ಇದು ಹಾಸ್ಯಾಸ್ಪದವೂ ಮಾರಕವೂ ಆಗಿರುವ ಸನ್ನಿವೇಶಕ್ಕೆ ಒಂದು ಅತಿ ವಾಸ್ತವಿಕತೆಯ ಗಾಂಭೀರ್ಯವನ್ನು ತಂದುಕೊಡುತ್ತಿದೆ. ಭಯಭೀತಿ ಮೂಡಿಸುವಂಥಾ ಅಮಿತ್ ಶಾನ ಅಧಿಕಾರಯುಕ್ತ ಹೇಳಿಕೆಗಳು ಪಕ್ಷದ ಕಾರ್ಯಕರ್ತರ ಪಾಲಿಗೆ ವಸ್ತುಶಃ ಹುಕುಂಗಳೆ ಆಗಿರುತ್ತವೆ. ಆತ ರಾಷ್ಟ್ರೀಯತೆಯ ಸುತ್ತ ಒಂದು ವಿವೇಚನಾಶೂನ್ಯ ಅಂಧಶ್ರದ್ಧೆಯನ್ನು ಹುಟ್ಟುಹಾಕುತ್ತಾನೆ. ಅದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಪ್ರತ್ಯಕ್ಷ ಬೆದರಿಕೆ ಒಡ್ಡುತ್ತದೆ. ರಾಷ್ಟ್ರೀಯತೆಯು ಮುಕ್ತವಾಗಿ ಅಭಿಪ್ರಾಯಗಳನ್ನು ಮಂಡಿಸುವ ಮೂಲಕ ಪ್ರಶ್ನಿಸಲಾರದಷ್ಟು ಪವಿತ್ರವಾದುದು ಎಂದಾತ ಸ್ಪಷ್ಟಪಡಿಸುತ್ತಾನೆ. ಅದನ್ನಾತ ಒಂದು ಮತೀಯ ಸಿದ್ಧಾಂತವಾಗಿಯೂ ಪ್ರಭುತ್ವದ ಅಧಿಕೃತ ಸಿದ್ಧಾಂತವಾಗಿಯೂ ಪರಿವರ್ತಿಸುವ ರೀತಿ ಹೇಗಿದೆಯೆಂದರೆ ರಾಷ್ಟ್ರ ಪ್ರಭುತ್ವದ ಧ್ಯೇಯಗಳು ಪ್ರಜಾತಂತ್ರಕ್ಕಿಂತಲೂ ಹೆಚ್ಚು ಪರಮಪೂಜ್ಯ ಆಗಿಬಿಡುತ್ತವೆ. ಯಾವುದನ್ನು ತಾನು ರಾಷ್ಟ್ರದ ವಿರುದ್ಧ ಅಪಪ್ರಚಾರ ಎನ್ನುತ್ತೇನೊ ಅದನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗವಾಗಿ ಪರಿಗಣಿಸಕೂಡದು ಎಂದಾತ ಸ್ಪಷ್ಟವಾಗಿ ಹೇಳುತ್ತಾನೆ. ಆತನ ಪ್ರಕಾರ ಅಂತಹ 'ಅಭಿವ್ಯಕ್ತಿ ಸ್ವಾತಂತ್ರ್ಯ'ದಿಂದ ಸ್ವಾತಂತ್ರ್ಯ ಚಳವಳಿಯ ಹುತಾತ್ಮರಿಗೆ ಅವಮಾನವಾಗುತ್ತದೆ. ಇಲ್ಲಿ ಒಂದೇ ಏಟಿಗೆ ಇತಿಹಾಸ ಮತ್ತು ವರ್ತಮಾನಗಳೆರಡೂ ಸಂಖ್ಯಾಬಲ ಉಳ್ಳವರ ನಿಯಂತ್ರಣಕ್ಕೆ ಒಳಪಡುತ್ತವೆ. ಭಗತ್ ಸಿಂಗ್‌ನನ್ನು ಉಲ್ಲೇಖಿಸುವ ಆತನಿಗೆ ಭಗತ್ ಸಿಂಗ್ ತನಗಿಂತ ಹೆಚ್ಚು ಮುಕ್ತ ಮನಸ್ಸು ಹೊಂದಿದ್ದ ಬಗ್ಗೆ ಅರಿವಿಲ್ಲ. 2002ರ ಗುಜರಾತ್ ದಂಗೆಯನ್ನು ಭಗತ್ ಸಿಂಗ್ ಎಂದಿಗೂ ಒಪ್ಪುತ್ತಿರಲಿಲ್ಲ. ಇಸ್ಪೀಟಾಟದಲ್ಲಿ ಮಾಡುವ ಮೋಸದಂತೆ ಸ್ವಾತಂತ್ರ್ಯ ಚಳವಳಿಯನ್ನು ಆರೆಸ್ಸೆಸ್ ತನ್ನದಾಗಿಸಿಕೊಂಡುದನ್ನು ವಿಚಾರಣೆಗೊಳಪಡಿಸಬೇಕಾಗಿದೆ. ಉತ್ತಮ ಗುಣನಡತೆಯನ್ನು ಬೆಳೆಸುವುದು ಬಿಜೆಪಿಯ ಸಾಮರ್ಥ್ಯಕ್ಕೆ ಮೀರಿದ ವಿಷಯವೆಂದು ತೋರುತ್ತದೆ. ಆದುದರಿಂದಲೆ ಅದು 'ರಾಷ್ಟ್ರೀಯತಾವಾದಿ ಗುಣನಡತೆ'ಯ ರಕ್ಷಕ ತಾನೆಂಬ ಕಟ್ಟುಕತೆಯನ್ನು ಹುಟ್ಟುಹಾಕಿ ಆ ಮೂಲಕ ಬಿನ್ನಮತ ಅಥವಾ ಯಾವುದೇ ರೀತಿಯ ಭಿನ್ನತೆಯನ್ನು ಹಿಮ್ಮೆಟ್ಟಿಸುತ್ತಿದೆ.

ಅಮಿತ್ ಶಾನ ಹೇಳಿಕೆಗಳಿಗೆ ಹಿಮ್ಮೇಳ ಒದಗಿಸುತ್ತಿರುವ ಗೃಹಸಚಿವ ರಾಜನಾಥ್ ಸಿಂಗ್, ಪಾಕಿಸ್ತಾನ ಭಾರತದ ಯುವಕರನ್ನು ತಪ್ಪುದಾರಿಗೆಳೆಯಲು ಯೋಚಿಸುತ್ತಿದೆ ಎಂದು ವಾದಿಸುತ್ತಾನೆ. ಕೇಂದ್ರ ಸರ್ಕಾರ, ಪೊಲೀಸರು, ಸ್ಥಳೀಯ ಸರಕಾರಗಳು ಯಾವ ತಪ್ಪನ್ನೂ ಮಾಡಿಲ್ಲ ಎಂದು ಒಂದೇ ಏಟಿಗೆ ಅವರೆಲ್ಲರಿಗೂ ಸರ್ಟಿಫಿಕೇಟು ನೀಡುತ್ತಾ ಕಿಡಿಗೇಡಿ ಕೃತ್ಯಗಳ ಮೂಲ ಹೊರಗಿನ ಶತ್ರು ಎನ್ನುತ್ತಾನೆ. ಪಾಕಿಸ್ತಾನದ ಮೇಲೆ ದೂರು ಹೊರಿಸುವುದು ಸುಲಭ. ಆದರೆ ನಮ್ಮದೇ ತಪ್ಪುಗಳನ್ನು ಒಪ್ಪಿಕೊಳ್ಳಲು ಧೈರ್ಯ ಬೇಕು. ಇನ್ನು ತಾನೇಕೆ ಹಿಂದುಳಿಯಬೇಕೆಂದು ಯೋಚಿಸಿದ ರಕ್ಷಣಾ ಮಂತ್ರಿ ಪರಿಕ್ಕರ್ ಕೂಡಾ ಇತ್ತೀಚೆಗೆ, ಪಾಕಿಸ್ತಾನಕ್ಕೆ ಹೋಗುವುದೆಂದರೆ "ನರಕ"ಕ್ಕೆ ಹೋದಂತೆ ಎಂದು ವಾದಿಸಿದ.

ಆಗ ನಿಯೋಗವೊಂದರ ಭಾಗವಾಗಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದ ಮಾಜಿ ನಟಿ, ಕಾಂಗ್ರೆಸ್ ಸದಸ್ಯೆ ರಮ್ಯಾ ತಕ್ಷಣ "ಪಾಕಿಸ್ತಾನ ನರಕ ಅಲ್ಲ" ಎಂದು ಪ್ರತಿಕ್ರಿಯಿಸಿದಳು. ವಿನಯದಿಂದ "ಅಲ್ಲಿನ ಜನ ಥೇಟ್ ನಮ್ಮವರ ಹಾಗೆ. ಅವರು ನಮ್ಮನ್ನೆಲ್ಲ ಚೆನ್ನಾಗಿ ನೋಡಿಕೊಂಡರು" ಎಂದು ವಿವೇಕದ ಮಾತುಗಳನ್ನಾಡಿದಳು. ಇಷ್ಟು ಹೇಳಿದಕೂಡಲೆ ದೇಶದ್ರೋಹದ ಆರೋಪಗಳ ಜಡಿಮಳೆಯೆ ಸುರಿಯಲಾರಂಭಿಸಿತು. ಕರ್ನಾಟಕದ ವಕೀಲ ವಿಟ್ಟಲ್ ಗೌಡ ಎಂಬಾತ ರಮ್ಯಾ ವಿರುದ್ಧ ದೇಶದ್ರೋಹದ ದೂರು ದಾಖಲಿಸಿ ಆಕೆ ಪಾಕಿಸ್ತಾನವನ್ನು ಹೊಗಳುವ ಮೂಲಕ ಭಾರತದ ದೇಶಪ್ರೇಮಿಗಳ ಮಾನ ಕಳೆದಿದ್ದಾಳೆಂದು ಆರೋಪಿಸಿದ. ಹಿಂದೆ ಭಿನ್ನಮತೀಯರೆಲ್ಲ ರೈಲಿನಲ್ಲಿ ಪಾಕಿಸ್ತಾನಕ್ಕೆ ಹೋಗಿ ಎನ್ನುತ್ತಿದ್ದ ಬಿಜೆಪಿ ಹೋರಾಟಗಾರರು ಈಗ ಆಧುನಿಕತೆಯನ್ನು ಮೈಗೂಡಿಸಿಕೊಂಡು ಪಾಕಿಸ್ತಾನ ಸ್ವರ್ಗವೆಂದು ಭಾವಿಸುವವರೆಲ್ಲ ತಕ್ಷಣ ವಿಮಾನದಲ್ಲಿ ಹೋಗಿರೆಂದು ಆಗ್ರಹಿಸತೊಡಗಿದರು. ದೇಶದ್ರೋಹ ಎಂಬುದು ವಿರೋಧಿಗಳ ಹೆಸರಿಗೆ ಮಸಿ ಬಳಿಯಲು ಅತ್ಯಂತ ಸುಲಭವಾದ ಹಣೆಪಟ್ಟಿ ಆಗಿಬಿಟ್ಟಿದೆ. ಒಂದು ಸರಳ ಭಿನ್ನಾಭಿಪ್ರಾಯ ಇದ್ದರೆ ಸಾಕು, ಬೇರೇನೂ ಬೇಕಾಗಿಲ್ಲ.





ಥಟ್ಟನೆ ಕೆರಳುವ ರಾಷ್ಟ್ರೀಯ
ಉಪಯೋಗಗಳು

ಅದೃಷ್ಟಕ್ಕೆ ರಮ್ಯಾ ವಿವೇಚನೆಯುಳ್ಳ ವ್ಯ
ಲೇಖನವೊಂದನ್ನು ಬರೆದು "ನಾವು ನಮ್ಮ
ನೆರೆಕರೆಯವರ ಜೊತೆ ದೃಢ ಸಂಬಂಧಗಳನ
ಕಟ್ಟಬೇಕಾಗಿದೆ" ಎಂದು ಸತ್ಯಸಂಗತಿಯನ್ನೆ
ಚಹದ ಬಟ್ಟಲಲ್ಲಿ ಬಿರುಗಾಳಿ ಎಬ್ಬಿಸಲು
ಬಿಜೆಪಿಯನ್ನು ತಣ್ಣಗೆ ಸೋಲಿಸಿದಳು. ವಾಸ್ತ
ಮೆಲೊಡ್ರಾಮಾಕ್ಕೆ ಹೆಸರುವಾಸಿಯಾದ ಬಾಲಿ
ಎಲ್ಲಾ ಭಾವೋದ್ರೇಕದ ಪಾತ್ರಗಳ ಏಕಸ್ವಾಮ
ಬಿಜೆಪಿಗೆ ನೀಡುವ ಮೂಲಕ ವಿವೇಕ
ಪ್ರದರ್ಶಿಸಿದಂತಿದೆ. ರಮ್ಯಾಳ ವಿವೇಕ ಆಳು
ಸರ್ಕಾರದ ಭಾವೋದ್ರೇಕಕ್ಕೆ ತಕ್ಕುದಾದ ಮ

ಈಗ ಕೇಳಬೇಕಿರುವ ಪ್ರಶ್ನೆ ಏನೆಂದರೆ
ಮತ್ತದರ 'ಯೋಧ'ರ ಪಡೆಗಳು ಈ ತೆರನ
ಉಕ್ಕೇರುವ ಅಬ್ಬರದ ದೇಶಭಕ್ತಿಯ ಮೊರೆ
ಕಾರಣವೇನು? ಒಳಗೊಳ್ಳುವಿಕೆಯಲ್ಲಿ ನಿಜವ
ನಂಬಿಕೆಯೇನೂ ಇಲ್ಲದ ಪಕ್ಷವಾಗಿರುವ ಬಿ
ಒಂದು ಏಕರೂಪತೆಯ ಪ್ರಮೇಯದೊಂದಿ
ಸಾಧಿಸಲು ಯತ್ನಿಸಿರುವುದೇ ಇದಕ್ಕೆ ಭಾಗಶ
ಕಾರಣವಾಗಿದೆ. ಅದರ ರಾಜಕೀಯ ರಂಗಸ್ಥ
ಮುನ್ನೆಲೆ, ಹಿನ್ನೆಲೆಗಳ ಮಧ್ಯೆ ಒಗ್ಗಟ್ಟೆಂಬುದೆ
ಒಗ್ಗಟ್ಟಿನ ವಿಷಯದಲ್ಲಿ ನಿಜವಾಗಿ ಅದರ
ಎಂದರೆ ಬರೀ ಥಟ್ಟನೆ ಕೆರಳುವ ಉಗ್ರ ರಾ
ಮಾತ್ರ. ದಲಿತರ ವಿಷಯದಲ್ಲಿ ಅದು ತಳೆ
ಧೋರಣೆಯಿಂದಾಗಿ ಅವರನ್ನು ಒಳಗೊಳ್ಳು
ನಿರೀಕ್ಷೆಯೂ ಶಿಥಿಲವಾಗಿದೆ. ಚುನಾವಣೆಗಳ
ಸಮೀಪಿಸುತ್ತಿದ್ದಂತೆ ಈ ಥಟ್ಟನೆ ಕೆರಳುವ
ರಾಷ್ಟ್ರೀಯತೆಯ ಮೂಲಕ ಭಿನ್ನಮತದ ಪ್ರ
ಮೂಲದಲ್ಲೂ ಹೇನು ಹೆಕ್ಕುವುದೆ ಅದರ
ಚುನಾವಣಾ ವೇದಿಕೆ ಆಗುತ್ತಿದೆ. ಅದಕ್ಕೆ ತ
ರೂಢಿಗತ ಸಂಖ್ಯಾಬಲವಾದದ ಜೊತೆ ಅ
ಬೇರೆ ಯಾವ ವಿಷಯವೂ ಸಿಗುತ್ತಿಲ್ಲ ಎಂ
ಅದಕ್ಕೆ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸ
ಸಾಧ್ಯವಾಗಿಲ್ಲ; ಕಾಶ್ಮೀರದ ದಾರುಣ ವೇದನ
ಅರಿವಿಲ್ಲ. ಇದರಿಂದಾಗಿ ಸಮಸ್ಯೆಗಳನ್ನು ಬಗ
ಅದರ ವ್ಯವಹಾರಜ್ಞಾನ ದುರ್ಬಲಗೊಳ್ಳುತ್ತಿ
ಜೆಎನ್‌ಯು, ಹೈದರಾಬಾದ್ ವಿದ್ಯಾರ್ಥಿಗಳ
ಬಂಡಾಯದ ಪರಿಣಾಮವಾಗಿ ಯುವಜನರ
ಎಂಬ ಅದರ ಹೇಳಿಕೆಗೆ ಬಲವಾದ ಏಟು
ನ್ಯಾಯ ಮತ್ತು ದಕ್ಷ ಆಡಳಿತ ಒದಗಿಸುವ
ತಾನೆಂಬ ವಾದಗಳು ಪೊಳ್ಳು ಎಂದಾಗಿರು
ಸಂದರ್ಭದಲ್ಲಿ ಉಗ್ರ ರಾಷ್ಟ್ರೀಯತೆಯ ಡೋ
ಸದ್ದೊಂದೆ ಅದರ ಪರಿಚಯ ಪತ್ರವೆಂದು
ಅದು ಸಂಖ್ಯಾಬಲವಾದವನ್ನೂ ಉಗ್ರ ರಾಷ್ಟ್ರ
ಸಾರ್ವಜನಿಕ ಪ್ರದರ್ಶನವನ್ನೂ ಒಟ್ಟು ಬೆಸೆ
ಮೂಲಕ ಭಿನ್ನಮತವನ್ನು ರಾಷ್ಟ್ರದ ವಿರುದ್ಧ
ಎಂದಾಗಿಸುತ್ತದೆ. ಕೇವಲ ಈ ಹುಸಿ ಬೆಸು
ಅದಕ್ಕೆ ಒಗ್ಗಟ್ಟಿನ ಭಾವನೆಯನ್ನು ನೀಡುತ್ತಿದೆ

ಸಮೀಪದೃಷ್ಟಿಯಿಂದ ಬಳಲುವ ಈ
ಕಾರ್ಯತಂತ್ರದಿಂದಾಗಿ ವಿಚಾರಗಳ ಮಟ್ಟದ
ಅನಾಹುತಗಳಾಗುತ್ತವೆ. ಅದು ರಾಷ್ಟ್ರೀಯತೆ
ಪ್ರಕ್ರಿಯೆಯ ಶಕ್ತಿಯನ್ನು ವ್ಯರ್ಥಗೊಳಿಸಿ ಗಾ
ಟಾಗೋರರಂತಹ ಧೀರರಿಗೆ ರಾಷ್ಟ್ರೀಯತೆ
ಅನೇಕ ಸಂದೇಹಗಳನ್ನು ಮರೆಮಾಚುತ್ತದೆ.

...ಯಿಂದ ಅವರ ಮಾತುಗಳನ್ನು ಅಳಿಸಿ ತನ್ನದೇ ...ಆವೃತ್ತಿಯನ್ನು ಸೃಷ್ಟಿಸಲೆತ್ನಿಸುತ್ತದೆ. ಪ್ರತಿಯೊಂದು ...ಮತ, ಭಿನ್ನತೆಯನ್ನು ದೇಶದ್ರೋಹದ ಒಂದು ಸಿದ್ಧ ...ಗೆ ಪರಿವರ್ತಿಸಿ ನಾಗರಿಕ ಸಮಾಜದ ...ಶೀಲತೆಯನ್ನು ನಾಶಗೊಳಿಸುತ್ತದೆ. ...ರಾಷ್ಟ್ರೀಯತೆ ಮತ್ತು ಪ್ರಜಾತಂತ್ರವನ್ನು ...ಡಿಕೊಂಡು ಬಂದಿರುವುದು ಪ್ರತಿಭಟನೆ, ...ಮತಗಳು. ಆದರೆ ಈಗ ಅವೆಲ್ಲವನ್ನು ...ಬುಟ್ಟಿಗೆ ಎಸೆಯಲಾಗಿದೆ. ಈ ಹೊಸ ಉಗ್ರ ...ಯತೆಯ ಸುರುಳಿ ಬಿಚ್ಚಿಕೊಳ್ಳುತ್ತಿದ್ದಂತೆ ಅದರಲ್ಲಿ ...ವಸ್ಥಿತವಾದ ಸೇರಿಕೊಳ್ಳುವಿಕೆಯ ಕೊರತೆ ...ವುದರ ಅರಿವಾಗುತ್ತದೆ. ಅದರಲ್ಲಿರುವುದು ...ಂತವಾಗಿ ಹೇರಿದ ಏಕರೂಪತೆ. ಅದರಲ್ಲಿ ...ದಾಯಗಳ ಪ್ರಜ್ಞೆ ಇಲ್ಲ. ಹೀಗಾಗಿ ಹೊಸ ...ಯತೆಯು ಒಬ್ಬ ವ್ಯಕ್ತಿಗಿರುವ ಹೆಸರು ಮತ್ತು ... ತಥಾಕಥಿತ ಚರಿಷ್ಮಾಗಳನ್ನು ಅತಿಯಾಗಿ ...ವ ಮೂಲಕ ನಾಯಕತ್ವವೆಂಬ ಹುಸಿ ...ನೆಯನ್ನು ಬಲವಂತವಾಗಿ ನೆಚ್ಚಿಕೊಳ್ಳಬೇಕಾಗುತ್ತದೆ ...ಾ ತಂತ್ರಜ್ಞ ಪ್ರಭುತ್ವವು ತಂತ್ರಜ್ಞಾನವನ್ನು ...ರ್ಶೆಯಿಲ್ಲದೆ ಒಪ್ಪಿಕೊಂಡಿರುವುದಕ್ಕೆ ...ನಿಕತಾವಾದದ ಕವಚ ಹುಡುಕಲು ಹೊಸ ...ಯತೆ ಒಂದು ನೆಪ ಆಗುತ್ತದೆ. ಉಗ್ರ ...ಯತೆ ತೋರಿಸುವ ಇಂತಹ ಪೊಳ್ಳು ದಾದಾಗಿರಿ ...ಮವಾಗಿ ಕುಲಗೆಟ್ಟು ಪ್ರಜಾತಂತ್ರದ ಮೇಲೆರಗಿ ...ಸಂಗೆ ತಿರುಗುತ್ತದೆ. ಮಾತುಕತೆ ಅಸಾಧ್ಯವಾಗುತ್ತದೆ; ...ಮತ, ಸಂವಾದ ಅವ್ಯಾವಹಾರಿಕವಾಗುತ್ತವೆ. ಉಗ್ರ ...ಯತೆ ಅಲ್ಪಾವಧಿಗೆ ಅದೆಂತಹುದೊ ಜನಪ್ರಿಯತೆ ...ಯಬಹುದು. ಆದರೆ ಇದು ನೆಹರೂ, ಗಾಂಧಿ, ...ಲ್ ಕನಸುಕಂಡ ಲೋಕವಲ್ಲ ಎಂಬುದು ...ಾಗುತ್ತಿದೆ. ರಾಷ್ಟ್ರೀಯತೆ ಒಂದು ಜೀವನಕ್ರಮ ...ವ ಬದಲು ಕೀಳರಿಮೆಯ ಲಕ್ಷಣವಾಗಿ ಕೊನೆಗೆ ...ತ್ವದಲ್ಲಿ ಪಾಶ್ಚಿಮಾತ್ಯ ದೇಶಗಳನ್ನು ಅಥವಾ ...ವನ್ನು ಎದುರಿಸುವ ಸಾಂಸ್ಕೃತಿಕ ಕಲ್ಪನಾಶಕ್ತಿಯ ...ವ ಉಂಟಾಗುತ್ತದೆ. ರಾಷ್ಟ್ರಗೀತೆ ಹಾಡುವುದನ್ನು ...ಯವಾಗಿಸಿರುವುದು ರಾಷ್ಟ್ರೀಯತೆಯನ್ನು ಒಂಥರಾ ...ನಲ್ಲಿ ಹಾಜರಾತಿ ಹಾಕುವ ಪ್ರಕ್ರಿಯೆಯಾಗಿ ...ರ್ತಿಸಿದಂತಿದೆ. ಜೀವನಕ್ರಮ ಆಗಿರಬಹುದಾದ ...ಯತೆ ಸೂಕ್ಷ್ಮ ತನಿಖೆಯ ಆಚರಣೆಯಾಗಿಬಿಟ್ಟಿದೆ. ...ಹ ದೃಷ್ಟಿಕೋನದಲ್ಲಿ ಇತಿಹಾಸದ ಬಗ್ಗೆ ಅಜ್ಞಾನ ...ಿದೆ. ಅಲ್ಲಿ ಯಾವುದೇ ವಿಧದ ಸಂಕುಚಿತ ರಾಷ್ಟ್ರ ...ನೆ ಇಲ್ಲದ ವಿಶ್ವಮಾನವ ಭವಿಷ್ಯಕ್ಕಾಗಿ ಸಿದ್ಧತೆ ... ಇದು ಬಾವುಟದಡಿಯ ಐಕ್ಯತೆಯನ್ನು ತೆಗೆದು ...ಾಗದಲ್ಲಿ ಏಕರೂಪತೆ, ಕಾವಲುಪಡೆಗಳ ದೊಂಬಿ ...ೋವೃತ್ತಿಯನ್ನು ತರುತ್ತದೆ. ಕಾರ್ಯಕರ್ತ ಮತ್ತು ...ಬಿ ಎರಡರಲ್ಲಿಯೂ ಬಹುಸಾಂಸ್ಕೃತಿಕ ರಾಷ್ಟ್ರದ ...ವ್ಯತ್ಯಾಸ, ಸೂಕ್ಷ್ಮಗ್ರಾಹಕತೆ ಅಥವಾ ಮನೋವೃತ್ತಿ ... ಎಂಬುದನ್ನು ಗ್ರಹಿಸುವಲ್ಲಿ ವಿಫಲವಾಗುತ್ತದೆ.

...ಇತಿಹಾಸ ಮತ್ತು ರಾಷ್ಟ್ರದ ಬಗೆಗೆ ಬಿಜೆಪಿಯ ...ರ ನಿಲುವು ರಾಷ್ಟ್ರೀಯತೆಯ ಒಂದು ...ಕಾವ್ಯದ ಬದಲು ಕದನಶೀಲ ಉಗ್ರ ...ಯತೆ ಎಂಬ ದುರಂತವನ್ನು ಶುರುಮಾಡುತ್ತಿದೆ. ...ು ಜೀವನಕ್ರಮವೂ ಬಹುಸಂಸ್ಕೃತಿಗಳ ಕಲ್ಪನೆಯೂ ...ುವ ಪ್ರಜಾತಂತ್ರಕ್ಕೆ ಇದು ಅಪಾಯಕಾರಿ. ...ಪಿಯ ಉಗ್ರ ರಾಷ್ಟ್ರೀಯತೆ ಹಠಾತ್ತಾದ ನರ ...ದಂತಿದೆ. ಪಕ್ಷದಲ್ಲಿ ವಿಚಾರಗಳ ಕೊರತೆ ...ಬಂದಾಗಲೆಲ್ಲ ಅದು ಅಲುಗಾಡಲಾರಂಭಿಸುತ್ತದೆ.

■ ಸುರೇಶ್ ಭಟ್ ಬಾಕ್ರಬೈಲ್

ದೇವರು ಸತ್ತಿದ್ದರೆ ಭೇಷ್ ಇರ್‍ತಿತ್ತು

ದೇವರುಗಳು ಹುಟ್ಟಿದ ದಿನವನ್ನು ಕೆಲವು ಪಂಡಿತರು ನಿಖರವಾಗಿ ಹೇಳುತ್ತಾರೆ; ಹೀಗೆ ಹೇಳಬೇಕಾದರೆ ಅವರಿಗೆ ದೇವರುಗಳ ಬರ್ತ್‌ಸರ್ಟಿಫಿಕೇಟ್ ಎಲ್ಲೋ ದೊರೆಕಿರಬೇಕು. ಆ ದಿನವನ್ನು ದೈವಭಕ್ತರು ಬಹಳ ವಿಜೃಂಭಣೆಯಿಂದ ಆಚರಿಸಿ ಸಂಭ್ರಮಿಸುತ್ತಾರೆ. ದೇವರುಗಳಿಗೆ ಸಾವಿಲ್ಲ. ಹಾಗಾಗಿ ಅವರ ಡೆತ್‌ಸರ್ಟಿಫಿಕೇಟೂ ಇಲ್ಲ. ದೇವರುಗಳು ಸತ್ತಿದ್ದರೆ ಭೇಷ್ ಇತ್ತು. ಆ ದಿನವನ್ನೂ ಅದ್ದೂರಿಯಾಗಿ ಆಚರಿಸಬಹುದಾಗಿತ್ತು. ಅಂತಹ ಅವಕಾಶದಿಂದ ದೈವಭಕ್ತರು ವಂಚಿತರಾಗಿದ್ದರೂ ಕಪ್ಪು ಮೋಡಗಳ ನಡುವಿನ ಬೆಳ್ಳಿಗೆರೆಯಂತೆ ದೇವರುಗಳು ಮಾಡಿದ ಪುಣ್ಯ ಕಾರ್ಯಗಳು ಅವರವರ ಹೆಸರಿನಲ್ಲಿ ದಾಖಲಾಗಿವೆ. ಆ ಕಾರ್ಯಗಳು ಯಾವುದೆಂದರೆ ಮಹಿಷಾಸುರ, ನರಕಾಸುರ, ಕಂಸಾಸುರ ಮುಂತಾದವರನ್ನು ಕೊಂದಿದ್ದು. ಅವರ ಸಾವಿನ ಆ ಪುಣ್ಯ ದಿನವನ್ನು ಹಬ್ಬವನ್ನಾಗಿ ಆಚರಿಸುತ್ತಾರೆ. ಧೇವರು ಹುಟ್ಟಿದ ದಿನವೂ ಹಬ್ಬ. ಅವರ ಶತ್ರುಗಳು ಸತ್ತ ದಿನವೂ ಹಬ್ಬ. ದೈವಭಕ್ತರಿಗೆ ಹಬ್ಬದ ಸುರಿಮಳೆಯೋ ಸುರಿಮಳೆ!



ಶ್ರೀ ಕೃಷ್ಣನ ಜನ್ಮದಿನವೂ ಅಂತಹವುಗಳಲ್ಲಿ ಒಂದು. ಆ ಭಗವಂತನು ಆಡಿರುವ ಆಟವೇನು ಸ್ವಲ್ಪವೆ. ಕಂಸನನ್ನು ಕೊಂದ. ಪೂತನಿಯನ್ನು ಸಾಯಿಸಿದ. ಕಾಳಿಂಗ ಸರ್ಪವನ್ನು ಮರ್ಧನ ಮಾಡಿದ. ಗೋಪಿಯರ ಸೀರೆ ಕದ್ದ. ಯಾಕೋ ಏನೋ ಗೊತ್ತಿಲ್ಲ; ಇವುಗಳೆಲ್ಲವಕ್ಕಿಂತಲೂ ಬೆಣ್ಣೆ ಮೊಸರು ಕದ್ದದ್ದು ಮಾತ್ರ ಭಕ್ತರಿಗೆ ಅಚ್ಚುಮೆಚ್ಚು. ಅವನ ಕಳ್ಳಾಟವನ್ನು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಸಂಭ್ರಮಿಸುತ್ತಾರೆ. ಮಹಾರಾಷ್ಟ್ರದಲ್ಲಿ ಮಾನವ ಪಿರಮಿಡ್ ನಿರ್ಮಿಸುತ್ತಾರಂತೆ. ಆ ಭಗವಂತನ ಪ್ರೀತಿಯ ತಿನಿಸಾದ ಬೆಣ್ಣೆ ಮೊಸರಿನ 'ಮೊಸರ ಮಡಕೆ'ಯನ್ನು ಅದರ ಮೇಲೆ ಎತ್ತಿ ಹಿಡಿಯಲಾಗುತ್ತದಂತೆ. ಪಿರಮಿಡ್ಡಿನ ಎತ್ತರ ಹೆಚ್ಚಿದಂತೆಲ್ಲ ರೋಚಕತೆ ಹೆಚ್ಚುತ್ತಂತೆ. ಜನಸಂದಣಿಯೂ ಹೆಚ್ಚುತ್ತಂತೆ. ಅದಕ್ಕೇ ವರ್ಷದಿಂದ ವರ್ಷಕ್ಕೆ ಅದರ ಎತ್ತರ ಏರುತ್ತಲೇ ಹೋಗುತ್ತಂತೆ. ಚಿಕ್ಕ ಹುಡುಗರನ್ನು ಪಿರಮಿಡ್ ನಿರ್ಮಿಸಲು ಬಳಸುವುದು ಅನಿವಾರ್ಯವಾಗುತ್ತಂತೆ. ಇದು ಅಪಾಯಕಾರಿ ಎಂದು ಯಾರೋ ಸುಪ್ರೀಂಕೋರ್ಟ್‌ಗೆ ದೂರು ನೀಡಿದರಂತೆ.

ಅಲ್ಲ, ಈ ಪಿರಮಿಡ್‌ಗಳ ನಿರ್ಮಾಣದ ಹಿಂದಿರುವವರು ನಮ್ಮ ಭವ್ಯ ಪರಂಪರೆ, ಸಂಪ್ರದಾಯಗಳನ್ನು ಉಳಿಸಲು ಟೊಂಕಕಟ್ಟಿ ನಿಂತಿರುವ ಶಿವಸೇನೆಯವರು. ಅವರ ಬೆಂಬಲಿತ ಸರ್ಕಾರವೇ ಅಲ್ಲಿದೆ. ಆದರೂ ಕಂಡೂ ಕಂಡೂ ಹೆಣ್ಣೋ ಗಂಡೋ ಅಂದಂಗೆ ಸುಪ್ರೀಂಕೋರ್ಟು, ಇದನ್ನು ವಿಚಾರಣೆಗೆ ತೆಗೆದುಕೊಂಡಿತ್ತು. ಮಾಡಬೇಕಾದ ಕೆಲಸ ಮಾಡದೆ ಎಲ್ಲ ಕಡೆಯೂ ನನ್ನದನ್ನ ಎಲ್ಲಿ ಹೆಟ್ಲಿ ಎಂದು ಬರುವ ಹೈಕೋರ್ಟ್ ನಡೆ ಅವರಿಗೆ ತೀವ್ರ ಅಸಮಾಧಾನ ಉಂಟುಮಾಡಿತ್ತು. ಪರಂಪರೆಯಿಂದ ಹೀಗೇ ನಡೆದುಕೊಂಡು ಬರ್‍ತಿದೆ ಅನ್ನುವ ಅರಿವಿಲ್ಲದ ನ್ಯಾಯಾಲಯ 'ಹಿಂಗೆ ದೊಂಬರಾಟ ಮಾಡ್ತೀರಲ್ಲ, ಇದ್ರಿಂದ ಏನು ಒಲಿಂಪಿಕ್ಸ್ ಪದಕ ಬರ್‍ತದ' ಅಂತ ಕೇಳಿಬಿಟ್ಟಿದೆ.

ಅದಕ್ಕೆ ಶಿವಸೇನೆಯವರು 'ಇದು ಇವತ್ತಿನದ್ದೇನೂ ಅಲ್ಲ. ಬಾಲಗಂಗಾಧರ ತಿಲಕರ ಕಾಲದಿಂದಲೂ ಸಾರ್ವಜನಿಕವಾಗಿ ಮಾಡ್ತಾ ಬಂದಿದೀವಿ ಪೆದ್ದ ಮುಂಡೇವ. ಜನರ ಮನಸ್ಸನ್ನು ಒಲೈಸೋಕೆ ಸುಲಭದ ಮಾರ್ಗ ಇದು. ಒಲಿಂಪಿಕ್ಸ್ ಪದಕ ಬರದಿದ್ದರೆ ಕತ್ತೆ ಬಾಲ, ಕುದುರೆ ಜುಟ್ಟು. ಚುನಾವಣೇಲಿ ಮತಗಳಂತೂ ಬಿದ್ದೇಬೀಳ್ತವೆ' ಅನ್ನೊ ಸತ್ಯ ಹೇಳಬೇಕು ಎನಿಸಿದರೂ ತಡೆದುಕೊಂಡರಂತೆ. ನ್ಯಾಯಾಲಯ ಅಂತಿಮವಾಗಿ ಮಾನವ ಪಿರಮಿಡ್ ಎತ್ತರ ಇಪ್ಪತ್ತು ಅಡಿ ಮೀರಬಾರದು ಎಂದು ಆಜ್ಞೆ ಮಾಡಿತು.

ಕೋರ್ಟ್ ಆರ್ಡರ್ ಇತ್ತಲ್ಲ, ಅದರ ಪಾಡಿಗೆ ಅದು ಇತ್ತು. ಶಿವಸೇನೆಗೆ ಅದರದ್ದೇ ಪರಂಪರೆ ಸಂಪ್ರದಾಯದ ಅಲಿಖಿತ ಕಾನೂನು ಇತ್ತಲ್ಲ, ಅದನ್ನು ಪೂರ್ಣ ಪ್ರಮಾಣದಲ್ಲಿ ಪರಿಪಾಲಿಸಿತು. ಎಂದಿನಂತೆ ಮಾನವ ಪಿರಮಿಡ್ಡಿನ ಎತ್ತರ ನಲವತ್ತು ಐವತ್ತು ಅಡಿ ಇತ್ತು!

ನ್ಯಾಯಾಲಯದ ಆಜ್ಞೆ ಧಿಕ್ಕರಿಸಿ ನಡೆದುಕೊಂಡರಲ್ಲಾ ಶಿವಸೇನೆಯವರು ಅದು ನ್ಯಾಯಾಂಗನಿಂದನೆ ಆಗಲಿಲ್ಲವೆ ಅಂದರೆ... ಶ್ರೀಕೃಷ್ಣ ಪರಮಾತ್ಮನ ಅವಕೃಪೆಗೆ ಪಾತ್ರರಾಗಬೇಕಾದೀತೆಂಬ ಭಯ ಇಲ್ಲದಿದ್ದರೂ ಆ ದಯಾಮಯನ ಭಕ್ತರ ಅವಕೃಪೆಗೊಳಗಾಗಬೇಕು ಎಂಬ ದಿಗಿಲು ಕಾಡುತ್ತಿರಬಹುದೋ ಏನು ಕತೆಯೋ.... ಮುಂದೇನಾಗುತ್ತೋ ನೋಡಬೇಕು.

ಮಾಧ್ಯಮದವರಿಗೆ ರಮ್ಯಾ ಮೇನಿಯಾ

ನಿಮಗೂ ಇಂತಹ ಅನುಭವ ಆಗಿರಬಹುದು. ನೀವು

ಅಣಕ



• ಎಚ್.ಎಲ್.ಕೇಶವಮೂರ್ತಿ

ಯಾವುದೋ ವಿಷಯ ಹೇಳಬೇಕಾಗಿರುತ್ತದೆ. ಆದರೆ ಮಾತಿನ ಓಘದಲ್ಲಿ ಅದರ ವಿರುದ್ಧವಾದ ಸಂಗತಿ ಬಾಯಿತಪ್ಪಿ ಬಂದುಬಿಡುತ್ತದೆ. ಅದು ನಿಮ್ಮ ತಪ್ಪಲ್ಲ. ನಿಮ್ಮ ಅಂತರ್‌ಪ್ರಜ್ಞೆಯ ಆಳದಲ್ಲಿ ಕೊರೆಯುತ್ತಿರುವ ಆ ಸಂಗತಿ ಅಪ್ರಜ್ಞಾಪೂರ್ವಕವಾಗಿ ಬಂದುಬಿಟ್ಟಿರುತ್ತದೆ. ಇದನ್ನು Slip of the tongue ಅರ್ಥಾತ್ 'ಜಾರು ನಾಲಿಗೆ' ಎಂದು ಕರೆಯಬಹುದೇನೋ. ಹೇಳುವಾಗ ಮಾತ್ರ ಅಲ್ಲ, ಕೇಳುವಾಗಲೂ ಹೀಗೆ ಆಗಬಹುದು. ಇತರರ ಬಾಯಿಂದ ಬರುವ ಶಬ್ದತರಂಗಗಳು ನಮ್ಮ ಶ್ರವಣ ಕೇಂದ್ರ ಸ್ಥಾನವನ್ನು ತಲುಪುವಷ್ಟರಲ್ಲಿ ಬೇರೆಯೇ ರೂಪ ತಾಳಬಹುದು. ನಾವು ಕೇಳಿಸಿಕೊಳ್ಳುವುದು ಅವರು ಏನು ಹೇಳುತ್ತಾರೋ ಅದನ್ನಲ್ಲ, ನಾವು ಕೇಳಲು ಏನನ್ನು ಬಯಸುತ್ತೇವೋ ಅದನ್ನು. ಈ ಪ್ರವೃತ್ತಿಯನ್ನು 'ಜಾರು ಕಿವಿ' ಎನ್ನಬಹುದೇನೋ!

ಇತ್ತೀಚೆಗೆ ಈ 'ಜಾರು ನಾಲಗೆ', 'ಜಾರು ಕಿವಿ' ದರ್ಬಾರು ಎಲ್ಲ ಕಡೆ ನಡೆಯುತ್ತಿರುವಂತಿದೆ.

ಈ ಕೆಳಗಿನ ಮಾತುಗಳನ್ನು ಕೇಳಿಸಿಕೊಳ್ಳಿ

ಮಂಗಳೂರಲ್ಲೂ ನರಕ ಇದೆ.

ಮಂಗಳೂರು ನರಕ.

ಮಾಧ್ಯಮದವರು ಕೇಳಬಯಸಿದ್ದು ಎರಡನೆಯದ್ದನ್ನು. ಇದು ರೋಚಕ ಸುದ್ದಿಯಾಗುವ ಸಾಧ್ಯತೆ ಇತ್ತು. ಟಿಆರ್‌ಪಿ ಹೆಚ್ಚಿಸುವ ತಾಕತ್ತು ಅದಕ್ಕಿತ್ತು. ಇಂತಹ ಶಬ್ದ ತರಂಗಗಳೇ ಅವರ ಶ್ರವಣ ಕೇಂದ್ರ ಸ್ಥಾನವನ್ನು ತಲುಪಿದವು. ಅದನ್ನೇ ಸುದ್ದಿ ಮಾಡಿದರು:

ಮಂಗಳೂರು ನರಕ- ರಮ್ಯಾ

ನಮಗೂ ಸಾಮಾಜಿಕ ಜವಾಬ್ದಾರಿ ಇದೆ ಎನ್ನುವ ಮಾಧ್ಯಮದವರು ಹೀಗೇಕೆ ಮಾಡಿದರು?

ಅಥವಾ ರಮ್ಯಾ ಹೇಳಿದ್ದೇ ಹೀಗೊ?

ತಮ್ಮ ವಾಹಿನಿ ಎಷ್ಟು ನ್ಯಾಯಪರ ಇದೆ ಎಂಬುದನ್ನು ವೀಕ್ಷಕರಿಗೆ ದೃಢ ಪಡಿಸುವುದಕ್ಕೂ ಮಿಗಿಲಾಗಿ ತಾವೇ ಮನವರಿಕೆ ಮಾಡಿಕೊಳ್ಳಬೇಕಿತ್ತೇನೋ. ಈ ಹೇಳಿಕೆಯನ್ನು ಮತ್ತೆ ಮತ್ತೆ ತೋರಿಸುತ್ತಿದ್ದರು.

ಆದರೆ....

ಪ್ರತಿ ಬಾರಿಯೂ ಆ ವಾಹಿನಿ ನೋಡುತ್ತಿದ್ದ ನನಗೆ 'ಮಂಗಳೂರಲ್ಲೂ ನರಕ ಇದೆ' ಎಂದೇ ಕೇಳಿಸುತ್ತಿತ್ತು!

ಈಗ ನನಗೆ ಒಂದೇ ಗೊಂದಲ.

ಜಾರು ಕಿವಿ ಯಾರಿಗೆ?

ನನಗೊ? ವಾಹಿನಿಯವರಿಗೊ? ■

ಗೋರಕ್ಷಾ ಯಾತ್ರೆ

ಕಚೇರಿಗೆ ಹೋಗುವ ದಾರಿಯಲ್ಲಿ ಎಂದಿನ ಅಭ್ಯಾಸದಂತೆ ಬೈಕ್ ನಿಲ್ಲಿಸಿ ಕಿಟ್ಟನ ಅಂಗಡಿಗೆ ತೆರಳಿ ವೀಳ್ಯದೆಲೆಗೆ ಸುಣ್ಣ ಹಚ್ಚುತ್ತಿದ್ದೆ. ಕಿಟ್ಟ ಮಾಮೂಲಿನಂತೆ ಅಡಿಕೆ ತುಂಡರಿಸುತ್ತಾ "ನಿನಗೆ ವಿಷಯ ಗೊತ್ತುಂಟಾ....." ಎಂದು ಕೇಳಿದ.

ಗಂಭೀರವಾಗಿ ಹುಬ್ಬುಗಳನ್ನು ಮೇಲೆತ್ತಿ ಪ್ರಶ್ನಾರ್ಥಕವಾಗಿ ಕಿಟ್ಟನತ್ತ ನೋಡಿದೆ.

"ಅಂತಹ ದೊಡ್ಡ ಸುದ್ದಿಯೇನಲ್ಲ ಮಾರಾಯ. ಜನ್ನು ಸತ್ತು ಹೋದಳು....." ಅಂದ.


"ಹೌದು ಕಣೋ. ಅದು ಈ ಊರಿನಲ್ಲಿ ಯಾರಿಗೂ ದೊಡ್ಡ ಸುದ್ದಿಯೇನಲ್ಲ. ಅವಳ ಅವಳಿ ಸಹೋದರಿ ಪೊನ್ನು ಮತ್ತು ಅವರ ಸಾಕುನಾಯಿ ಬಾಡುಗೆ ಮಾತ್ರ ಅದೊಂದು ದೊಡ್ಡ ಸಂಗತಿ" ಎಂದು ಗೊಣಗಿದೆ.

****

ಜನ್ನು-ಪೊನ್ನು ಎಂಬ ಅವಳಿ ಸಹೋದರಿಯರಿಗೆ ವಯಸ್ಸು ನಲ್ವತ್ತರ ಆಜುಬಾಜಿರಬಹುದು. ಈ ಅವಳಿ-ಜವಳಿ ಹೆಣ್ಮಕ್ಕಳಿಗೆ ಜನ್ಮವಿತ್ತವಳೇ ಅವರವ್ವ ಅತಿರಕ್ತಸ್ರಾವದಿಂದ ಸತ್ತುಹೋದಳು, ಅವರಪ್ಪ ತನಿಯ ಅವರಿಗೆ ಹದಿಮೂರರ ಹರೆಯ ತುಂಬುವಷ್ಟರ ಹೊತ್ತಿಗೆ ಕುಡಿದು ಕುಡಿದೇ ಸತ್ತುಹೋದ. ಸ್ವಲ್ಪ ಬೋಳೆ ಬುದ್ಧಿಯ ಈ ಹೆಣ್ಮಕ್ಕಳನ್ನು ಸಂಬಂಧಿಕರ‍್ಯಾರೂ ಹತ್ತಿರ ಬಿಟ್ಟುಕೊಳ್ಳಲಿಲ್ಲ. ಈ ಅನಾಥ ಹೆಣ್ಮಕ್ಕಳು ಬೀಡಿಕಟ್ಟಿ ಬದುಕಿನ ಬಂಡಿ ಎಳೆಯತೊಡಗಿದವು. ಬೋಳೆ ಬುದ್ಧಿಯವಾದರೂ ಮದುವೆಯ ಕನಸು ಕಾಣುತ್ತಿದ್ದರು. ಊರ ಪಡ್ಡೆಗಳು ಸಿನಿಮಾ ನಟರ ಫೋಟೋ ತೋರಿಸಿ "ನಾಡಿದ್ದು ಇವನು ನಿನ್ನನ್ನು ನೋಡಲು ಬರುತ್ತಾನೆ" ಎಂದೆಲ್ಲಾ ಆಸೆ ಬರಿಸುತ್ತಿದ್ದರು. ಆ ಪಾಪದ ಹೆಣ್ಮಕ್ಕಳು ಸತ್ಯವೆಂದೇ ನಂಬಿ ಪಡ್ಡೆಗಳ ಬಳಿ ಆಗಾಗ ಕೇಳುತ್ತಿದ್ದುದುಂಟು "ನನ್ನನ್ನು ನೋಡಲು ಯಾವಾಗ ಬರುತ್ತಾರೆ.....?" ಹೊತ್ತು ಕಳೆಯಲು ಆ ಪಾಪದ ಹೆಣ್ಮಕ್ಕಳನ್ನು ಈ ರೀತಿ ಗೋಳು ಹೊಯ್ಯುತ್ತಿದ್ದ ಪಡ್ಡೆಗಳಿಗೆ ಅವರಿಗೂ ಹೃದಯವಿದೆ, ಸಂವೇದನೆಯಿದೆ ಎನ್ನುವುದು ಅರ್ಥವಾಗುತ್ತಲೇ ಇರಲಿಲ್ಲ.

ಸುಮಾರು 28 ವರ್ಷಗಳಿಂದ ಬೀಡಿ ಕಟ್ಟುತ್ತಿದ್ದರೂ ಬೀಡಿ ಕಂಟ್ರಾಕ್ಟರ್ ಭೋಜ ಅವರಿಗೊಂದು ಬೀಡಿ ಪಾಸ್ ಪುಸ್ತಕ ಮಾಡಿಕೊಡದೇ ಅವರು ಕಟ್ಟಿದ ಬೀಡಿಯ ಲೆಕ್ಕವನ್ನು ತನ್ನ ಹೆಂಡತಿಯ ಪಾಸ್ ಪುಸ್ತಕಕ್ಕೆ ಬರೆದು ವಾರ್ಷಿಕ ಬೋನಸ್ ಮತ್ತಿತರ ಸೌಲಭ್ಯವನ್ನು ತಾನೇ ಪಡೆಯುತ್ತಿದ್ದ. ಅಕ್ಕಪಕ್ಕದ ಇತರ ಮಹಿಳೆಯರ ಮಾತುಕೇಳಿ ಜನ್ನು-ಪೊನ್ನು ಬೀಡಿ ಪಾಸ್ ಪುಸ್ತಕಕ್ಕೆ ಹಠ ಹಿಡಿದರೆ "ಪಾಸ್ ಪುಸ್ತಕ ಕೊಟ್ಟರೆ ವಾರದ ಮಜೂರಿಯಲ್ಲಿ 25 ರೂಪಾಯಿ ಕಡಿಮೆ ಸಿಗ್ತದೆ. ನಿಮಗೆ ಮಂಡೆ ಸರಿ ಇಲ್ವಾ.....? ಪಾಸ್ ಪುಸ್ತಕ ಇಟ್ಟುಕೊಂಡು ಎಂತ ಮಾಡ್ಲಿಕ್ಕೆ, ನೆಕ್ಕಲಿಕ್ಕಾ.....?" ಎಂದು ಗದರುತ್ತಿದ್ದ.

"ಬೇರೆಯವರಿಗೆಲ್ಲಾ ಪಾಸ್ ಪುಸ್ತಕ ಉಂಟಲ್ಲಾ" ಎಂದು ಈ ಬೋಳೆ ಹೆಣ್ಮಕ್ಕಳು ಕೇಳಿದರೆ "ಅವರಿಗೆಲ್ಲಾ ಈ ಬೀಡಿ ಕಟ್ಟಿ ಎಂತದೂ ಆಗ್ಲಿಕ್ಕಿಲ್ಲ. ನಿಮಗೆ ಈ ಬೀಡಿಯ ಮಜೂರಿ ಬಿಟ್ಟರೆ ಎಂತ ಉಂಟು ಮಣ್ಣು? ಅವರಿಗೆಲ್ಲಾ ತೋಟ ಗದ್ದೆ ಉಂಟು. ನಿಮಗೆ ವಾರಕ್ಕೆ 25 ರೂಪಾಯಿ ಜಾಸ್ತಿ ಸಿಗ್ತದೆ ಅಂತ ಮಚ್ಚರದಿಂದ ಅವರು ನಿಮ್ಮ ಮಂಡೆ ಹಾಳು ಮಾಡುವುದು" ಎಂದು ಬಾಯಿ ಮುಚ್ಚಿಸುತ್ತಿದ್ದ.



****

ಜನ್ನು-ಪೊನ್ನು ಏನಾದರೂ ಹಬ್ಬ ಹರಿದಿನ ಬಂದರೆ ಅಕ್ಕಪಕ್ಕದವರ ಮನೆಗೆ ಹೋಗಿ ಇಡ್ಲಿ, ಮೂಡೆ, ಕೋಳಿಸಾರು, ಪಾಯಸ ಹಿಡ್ಕೊಂಡು ಬಂದು ತಿಂದು ಖುಷಿಪಡುತ್ತಿದ್ದರು. ಬ್ಯಾರಿಗಳ ಪೆರ್ನಾಲ್ ಇದ್ದಾಗೆಲ್ಲಾ ಅಕ್ಕಪಕ್ಕದ ಬ್ಯಾರಿಗಳ ಮನೆಗೆ ಹೋಗಿ ನೈಚೋರು, ಕೋಳಿಸಾರು ಅಥವಾ ದನದ ಮಾಂಸದ ಪದಾರ್ಥ ತಂದು ಖುಷಿಯಾಗಿ ತಿನ್ನುತ್ತಿದ್ದರು. ದೊಡ್ಮನೆ ಶೆಟ್ರ ತೋಟದ ಕೆಲಸದಾಳು ಅದ್ರಾಮ ಬ್ಯಾರಿ ಆಗೊಮ್ಮೆ ಈಗೊಮ್ಮೆ ತನ್ನ ಮನೆಯಲ್ಲಿ ಹಿಂದಿನ ದಿನ ಮಾಡಿದ ದನದ ಮಾಂಸದ ಪದಾರ್ಥವನ್ನು ಇವರಿಗೆ ತಂದು ಕೊಡುತ್ತಿದ್ದ. ಹೀಗೆ ತಿನ್ನುತ್ತಾ ತಿನ್ನುತ್ತಾ ದನದ ಮಾಂಸದ ರುಚಿ ಹತ್ತಿಸಿಕೊಂಡಿದ್ದ ಪೊನ್ನು-ಜನ್ನು ಶನಿವಾರದ ಬೀಡಿಯ ಮಜೂರಿಯಿಂದ ಒಂದೈವತ್ತು ರೂಪಾಯಿಯನ್ನು ಆದಿತ್ಯವಾರ ಮಾಂಸ ಖರೀದಿಸಲೆಂದೇ ತೆಗೆದಿಡುತ್ತಿದ್ದರು. ಪ್ರತೀ ಆದಿತ್ಯವಾರ ಬೆಳಗ್ಗೆ ಕಸಾಯಿ ಅಮ್ಮದೆ ಬ್ಯಾರಿಯ ಮಂಡಿಯಿಂದ ಮಾಂಸ ತರುತ್ತಿದ್ದರು. ಆತ ಇವು ಪಾಪದ ಹೆಣ್ಮಕ್ಕಳೆಂದು ತೂಕಕ್ಕಿಂತ ಸ್ವಲ್ಪ ಜಾಸ್ತಿಯೇ ಮಾಂಸ ಕೊಡುತ್ತಿದ್ದ.

ಕತೆ

ಒಮ್ಮೆ ಕವಾಯತು ಮುಗಿಸಿ ಬರುತ್ತಿದ್ದ ವಾಸುದೇವರಾಯನ ಪಟಾಲಂನ ಹುಡುಗರು ಜನ್ನು ಕಸಾಯಿಯ ಅಂಗಡಿಯಿಂದ ಮಾಂಸ ಕೊಂಡು ಹೋಗುವುದನ್ನು ನೋಡಿ ಹಿಂಬಾಲಿಸಿದರು.

ಗುಡ್ಡೆಕೊಪ್ಲದ ದೊಡ್ಡ ತೋಡಿನ ಬಳಿ ಜನ್ನುವನ್ನು ತಡೆದು ವಿಚಾರಿಸಿದಾಗ ಆಕೆ ಮಾಂಸ ಎಂದಳು. ಆಕೆಯ ಕೈಯಿಂದ ಮಾಂಸದ ತೊಟ್ಟೆಯನ್ನು ಕಿತ್ತು ತೆಗೆದರು. ಆಕೆ ಎಷ್ಟೇ ಅರಬಾಯಿ ಹಾಕಿ ಕೇಳಿದರೂ "ದನದ ಮಾಂಸ ತಿನ್ನಲು ಬ್ಯಾರಿಗೆ ಹುಟ್ಟಿದ್ದೀರಾ..... ಬೇವರ್ಸಿಗಳಾ" ಎಂದು ಆ ಬಡಪಾಯಿಗಳ ಮೇಲೆ ಪೌರುಷ ತೋರಿ ಮಾಂಸವನ್ನು ಹರಿಯುವ ತೋಡಿಗೆ ಎಸೆದಿದ್ದರು.

****

ಸುಮಾರು ಮೂರು ತಿಂಗಳ ಹಿಂದೆ ಮಂಗಳೂರಿನಲ್ಲಿ ನಡೆದ ಗೋರಕ್ಷಾ ಯಾತ್ರೆಗೆ ನಮ್ಮೂರಿನಿಂದ ನಾಲ್ಕು ಜೀಪು ಜನ ಹೋಗಿದ್ದರು. ಜನ ಕರೆದುಕೊಂಡು ಹೋಗಿದ್ದಕ್ಕೆ ಬೀಡಿ ಕಂಟ್ರಾಕ್ಟರ್ ಭೋಜನಿಗೆ ವಾಸುದೇವರಾಯರಿಂದ ಶಹಬಾಸ್‌ಗಿರಿ ಸಿಕ್ಕಿತ್ತು. ಆ ನಾಲ್ಕು ಜೀಪಿನಲ್ಲಿ ಎರಡು ಜೀಪು ಭೋಜನ ಬೀಡಿ ಕಟ್ಟುವ ಮಹಿಳೆಯರೇ ಇದ್ದರು. ಪೊನ್ನು-ಜನ್ನು ಕೂಡಾ ಇದ್ದರು. ಫ್ರೀಯಾಗಿ ಮಂಗಳೂರಿಗೆ ಕರೆದುಕೊಂಡು ಹೋಗುತ್ತೇನೆ ಎಂದಿದ್ದರಿಂದ, ಹಿಂದಿನ ದಿನದ ಬಕ್ರೀದ್‌ನಂದು ಅದ್ರಾಮ ಬ್ಯಾರಿಯ ಮನೆ... ಕಟ್ಟಿ ತಂದಿದ್ದ ಇಡ್ಲಿ ಮತ್ತು ದನದ ಮಾಂಸದ ಪದಾ... ತಿಂದು ಬೇಗನೆ ತಯಾರಾಗಿ ಪದವಿಗೆ ಬಂದು ಜೀ... ಕಾಯುತ್ತಿದ್ದರು. ಮಹಿಳೆಯರಿದ್ದ ಎರಡೂ ಜೀಪಿನಲ್ಲಿ... ಸೀಟುಗಳು ಭರ್ತಿಯಾಗಿದ್ದವು. ಸ್ವಲ್ಪ ಅಡ್ಜಸ್ಟ್ ಮಾ... ಎಂದು ಭೋಜ ಎಷ್ಟೇ ಕೇಳಿಕೊಂಡರೂ ಮೈಕೈ... ಕಜ್ಜಿಯಿರುವ ಪೊನ್ನು-ಜನ್ನುವನ್ನು ಹತ್ತಿಸಿಕೊ... ಮಹಿಳೆಯರು ಸುತಾರಾಂ ಒಪ್ಪಲಿಲ್ಲ. ಇದನ್ನೆಲ್ಲಾ... ಬಳಿ ಕೂತು ನೋಡುತ್ತಿದ್ದ ಬ್ಯಾರಿ ಹುಡುಗರು ಮು... ನಗುತ್ತಿದ್ದರಿಂದ ಭೋಜ ಪೇಚಿಗೆ ಸಿಲುಕಿದಂತಾಗಿತ್ತು... ನಿರ್ವಾಹವಿಲ್ಲದೇ ಗಂಡಸರಿದ್ದ ಜೀಪಿನಿಂದ ಭೋಜ... ಆತನ ಮಗ ನರೇಂದ್ರ ಕೆಳಗಿಳಿದು ಅವರನ್ನು... ಹತ್ತಿಸಿದರು. ಬಳಿಕ ಮಗ ನರೇಂದ್ರನ ಬೈಕ್‌ನಲ್ಲಿ... ಗೋ ರಕ್ಷಾ ಯಾತ್ರೆಗೆ ಹೋದ.

ಗೋ ರಕ್ಷಾ ಯಾತ್ರೆ ಮುಗಿಸಿ ಮರಳುವಾಗ ಜೀ... ಆಯತಪ್ಪಿ ಬಿದ್ದ ಜನ್ನುವಿನ ತಲೆಯ ಹಿಂಭಾಗಕ್ಕೆ ದಾ... ರಸ್ತೆಯ ಏಟು ತಗಲಿ ರಕ್ತಸ್ರಾವವಾಗಿತ್ತು. ಕರೆದು... ಹೋದ ಕರ್ಮಕ್ಕೆಂದು ವೆನ್ಲಾಕ್ ಆಸ್ಪತ್ರೆಗೆ ಕೊಂಡು... ಬ್ಯಾಂಡೇಜು ಕಟ್ಟಿಸಿ ಔಷಧಿ ಕೊಡಿಸಿ ತಂದು ಬಿ...

ತಲೆಯ ಗಾಯಕ್ಕೆ ಹಚ್ಚಿದ ಬ್ಯಾಂಡೇಜನ್ನು... ಕಾಲ ಬಿಚ್ಚದೇ ಗಾಯ ಕೊಳೆತು ನಾರತೊಡಗಿತು... ಮುಂಜಾನೆ ಸಡಿಲವಾದ ಬ್ಯಾಂಡೇಜು ತನ್ನಿಂತಾನೆ... ಹೋಯಿತು. ಗಾಯದಲ್ಲಿ ಕೀವು ತುಂಬಿತು. ಸದಾ... ಜೊತೆಯೇ ಇರುತ್ತಿದ್ದ ಬಾಡು ನಾಯಿ ಪ್ರೀತಿ... ಅವಳ ಮೈಯೆಲ್ಲಾ ನೆಕ್ಕುತ್ತಿತ್ತು. ಸಹಜವಾಗಿಯೇ... ತುಂಬಿದ್ದ ಗಾಯವನ್ನು ಸ್ವಲ್ಪ ಹೆಚ್ಚೇ ನೆಕ್ಕುತ್ತಿತ್ತು. ದಿ... ಉರುಳುತ್ತಲೇ ಗಾಯದಲ್ಲಿ ಹುಳು... ಮಿಜಿಗಿಟ್ಟತೊಡಗಿದವು. ಪೊನ್ನು ಆಗಾಗ ಇನೋಳಿ ಪ... ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿ ಮಾತ್ರೆ ಮು... ತಂದು ಸಹೋದರಿಯನ್ನು ಉಪಚರಿಸುತ್ತಿದ್ದಳಾದರೂ... ದಿನೇದಿನೇ ಉಲ್ಬಣಿಸುತ್ತಿತ್ತೇ ವಿನಃ ಕಡಿಮೆಯಾಗುವ... ಕಾಣಲಿಲ್ಲ. ಸೋಂಕು ತಲೆಯಿಂದ ಕುತ್ತಿಗೆವರೆಗೂ ವ್ಯಾ... ಜನ್ನು ಊಟ ತಿಂಡಿ ಬಿಟ್ಟು ನರಳತೊಡಗಿದಳು... ನೋವಿಗೆ ಪೊನ್ನು ಮತ್ತು ಬಾಡುವೂ ರೋದಿಸು... ಅದ್ರಾಮ ಬ್ಯಾರಿ ಬೆಳಗ್ಗೆ ತೋಟದ ಕೆಲಸಕ್ಕೆ ಹೋಗ... ಸ್ವಲ್ಪ ಅನ್ನ ಸಾರು ತಂದು ಪೊನ್ನುವಿನ ಕೈಯಲ್ಲಿ ಕ... ಹೋಗುತ್ತಿದ್ದುದು ಬಿಟ್ಟರೆ ಮತ್ತಾವ ನರಪಿಳ್ಳೆಯೂ... ಸುಳಿಯುತ್ತಿರಲಿಲ್ಲ. ಪೊನ್ನು ಬೀಡಿ ಕಂಟ್ರಾಕ್ಟರ್ ಭೋ... ಬಳಿ ಹೋಗಿ ಸಹೋದರಿಯ ಸ್ಥಿತಿ ಹೇಳಿ... ರೋದಿಸಿದರೂ ಆತನ ಮನ ಕರಗಲಿಲ್ಲ. ಹೀಗೆ ನರ... ನರಳುತ್ತಾ ಜನ್ನು ಒಂದು ಮುಂಜಾನೆ ಪ್ರಾಣ ಬಿ... ಪೊನ್ನು ಮತ್ತು ಬಾಡುನಾಯಿಯ ರೋದನ ಮ... ಮುಟ್ಟಿತು. ಆದರೆ ಜನ್ನುವಿನ ಸಾವು ಅದ್ರಾಮ ಬ್ಯಾರಿ... ಬಿಟ್ಟರೆ ಊರಿನಲ್ಲಿ ಯಾರಿಗೂ ದೊಡ್ಡ ಸುದ್ದಿಯೇ... ಇಲ್ಲ......

■ ಇಸ್ಮತ್ ಫಜ...

ಇದು ದಿನನಿತ್ಯದ ಹೃದಯ ಹಿಂಡುವ ದೃಶ್ಯ

ಒಡಿಶಾದ ಕಾಲಹಂಡಿಯಲ್ಲಿ ಒಬ್ಬ ಬುಡಕಟ್ಟು ಜನಾಂಗದ ಬಡವ ಸರಕಾರಿ ಆಸ್ಪತ್ರೆಯಲ್ಲಿ ಸತ್ತ ತನ್ನ ಹೆಂಡತಿಯ ಶವವನ್ನು 60 ಕಿ.ಮೀ ದೂರವಿರುವ ತನ್ನ ಹಳ್ಳಿಗೆ ಸಾಗಿಸಲು ಆಸ್ಪತ್ರೆಯವರು ಆಂಬುಲೆನ್ಸ್ ನಿರಾಕರಿಸಿದ್ದರಿಂದ ಅವನು ಪತ್ನಿಯ ಶವವನ್ನು ತಾನೇ ಹೊತ್ತು ಕಾಲುನಡಿಗೆಯಲ್ಲಿಯೇ 12 ಕಿ.ಮೀ ದೂರ ತನ್ನ ಚಿಕ್ಕ ಮಗಳೊಂದಿಗೆ ಹೋಗಿದ್ದ ಫೋಟೋಗಳು ವಿಶ್ವದಲ್ಲೆಲ್ಲಾ ಸುದ್ದಿಯಾಗಿ ಎಲ್ಲೆಡೆಯಿಂದ ಸಹಾನುಭೂತಿಯ ಮಹಾಪೂರ ಹರಿದುಬಂದಿದೆ. ಆದರೆ ನಮ್ಮದೇ ದೇಶದ ಸರಕಾರಿ ಯಂತ್ರ ಮಾತ್ರ ಇದರ ನಡುವೆಯೂ ತಮ್ಮ ಪರಮ ನೀಚತನ ಹಾಗೂ ಸ್ವಾರ್ಥ ಬಿಡಲಿಲ್ಲ. ಆ ಬಡವನಿಗೆ ತನ್ನ ಹೆಂಡತಿಯ ಅಂತ್ಯಸಂಸ್ಕಾರವನ್ನೂ ಸರಿಯಾಗಿ ಮಾಡಲು ಬಿಡದೇ ಸರಕಾರಿ ಅಧಿಕಾರಿಗಳು ಹಾಗೂ ಪೊಲೀಸರು ಆ ನಿರಕ್ಷರಿಯನ್ನು ಮೂರು ದಿನ ತಮ್ಮ ಜೀಪಿನಲ್ಲಿ ಎಲ್ಲೆಲ್ಲೋ ಅಲೆದಾಡಿಸಿ ಯಾವ ಯಾವದೋ ಕಾಗದಕ್ಕೆ ಅವನ ಹೆಬ್ಬೆಟ್ಟು ಒತ್ತಿಸಿ, ಕೊನೆಗೆ ಅವನ ಮೂಲ ಹೇಳಿಕೆಯನ್ನು ಬಲಾತ್ಕಾರದಿಂದ ಬದಲಾಯಿಸುವಂತೆ ಮಾಡಿ ತಮ್ಮ ಮುಖ ಹಾಗೂ ನೌಕರಿ ಉಳಿಸಿಕೊಂಡರು. ಬಹುಶಃ ತನ್ನ ಹೆಂಡತಿಯ ಶವ ಹೊತ್ತು 12 ಕಿ.ಮೀ ನಡೆದದ್ದಕ್ಕಿಂತ ಹೆಚ್ಚು ಮಾನಸಿಕ ವೇದನೆ ಹಾಗೂ ದೈಹಿಕ ಹಿಂಸೆ ಈ ಸರಕಾರಿ ಅಧಿಕಾರಿಗಳಿಂದ ಆ ಬಡವನಿಗೆ ಆಗಿದೆ.

"ನಡುರಾತ್ರಿಯಲ್ಲಿ ಸತ್ತ ನನ್ನ ಹೆಂಡತಿಯ ಶವವನ್ನು ನಾನೇ ಆಸ್ಪತ್ರೆಯವರಿಗೂ ತಿಳಿಸದೇ ತೆಗೆದುಕೊಂಡು ಹೋಗಿದ್ದೆ ಹಾಗೂ ಆಸ್ಪತ್ರೆಯವರಲ್ಲಿ ನಾನು ಆಂಬುಲೆನ್ಸ್ ಕೇಳಿರಲೇ ಇಲ್ಲ" ಎಂದು ಅವನಿಂದ ಬಲಾತ್ಕಾರವಾಗಿ ಸರಕಾರಿ ಅಧಿಕಾರಿಗಳು ಪತ್ರಿಕಾಹೇಳಿಕೆ ಕೊಡಿಸಿದ್ದಾರೆ. ವಿಪರೀತ ತತ್ವಜ್ಞಾನ ಮಾತನಾಡುವ ಹಾಗೂ ನೂರಾರು ವಿಚಿತ್ರ ದೇವರನ್ನು ಪೂಜಿಸುವ ಭಾರತೀಯರು ಮೂಲದಲ್ಲಿ ಎಷ್ಟು ಅಮಾನವೀಯರು ಹಾಗೂ ಸ್ವಾರ್ಥಿಗಳು ಎಂಬುದು ಜಗತ್ತಿನೆದುರು ಮತ್ತೊಮ್ಮೆ ಸಾಬೀತಾಯಿತು. ಇಂತಹ ಮನುಷ್ಯತ್ವವೇ ಇಲ್ಲದ ಭಾರತವನ್ನು ಪ್ರೀತಿಸದಿದ್ದರೆ ದೇಶದ್ರೋಹಿ ಎಂಬ ಹಣೆಪಟ್ಟಿ ಅಂಟಿಸುತ್ತಾರಂತೆ ನಮ್ಮ ಕೇಸರಿ ದೇಶಭಕ್ತರು.

ಕಾಲಹಂಡಿಯ ಯಾವುದಾದರೂ ಕ್ರೈಸ್ತ ಚಾರಿಟಿ ಸಂಸ್ಥೆ ಶವ ಸಾಗಿಸಲು ಆ ಬಡವನಿಗೆ ವಾಹನ ಕೊಡಲು ಮುಂದೆ ಬಂದಿದ್ದರೆ ತಕ್ಷಣ ಅಲ್ಲಿ ಕೇಸರಿ ಪಡೆಗಳು ದಾಳಿ ಮಾಡಿ ಇದು ಮಾನವತೆ ಅಥವಾ ಸಮಾಜ ಸೇವೆ ಅಲ್ಲ, ಇದು ಮತಾಂತರದ ಪ್ರಯತ್ನ ಎಂದು ಹುಯಿಲೆಬ್ಬಿಸುತ್ತಿದ್ದವು. ಮೂರು ಮೂರು ವಿದೇಶಿ ಕ್ರೈಸ್ತ ಮಿಷನರಿಗಳನ್ನು ಜೀವಂತ ಸುಟ್ಟು ಕೊಂದ ರಾಜ್ಯವೇ ಈ ಒರಿಸ್ಸಾ ತಾನೇ.

ಒಂದು ವೇಳೆ ಗಣಪತಿ ಅಥವಾ ಕೃಷ್ಣನ ನಿರ್ಜೀವ ಮೂರ್ತಿ ಸಾಗಿಸಲು ವಾಹನ ಬೇಕೆಂದು ಕೇಳಿದ್ದರೆ ಹತ್ತಾರು ಜನರು ತಮ್ಮ ವಾಹನ ಕೊಡಲು ಮುಂದೆ ಬರುತ್ತಿದ್ದರು. ಆದರೆ ಒಬ್ಬ ಬುಡಕಟ್ಟು ಜನಾಂಗದ ದಲಿತಳ ಹೆಣ ಸಾಗಿಸಲು ವಾಹನ ಕೊಟ್ಟರೆ ಅದು ಅಶುದ್ಧವಾಗುತ್ತದೆ, ತಮಗೆ ಸೂತಕ ಬಡಿಯುತ್ತದೆ ಎಂದು ಭಾವಿಸುವ ಮನುಷ್ಯತ್ವವಿಲ್ಲದ ಮೌಢ್ಯಭರಿತ ಜನರಿರುವ ವಿಚಿತ್ರ ದೇಶ ನಮ್ಮದು. ನಿರ್ಜೀವ ದೇವರ ಮೂರ್ತಿ ತಮ್ಮ ವಾಹನದಲ್ಲಿ ಸಾಗಿಸುವುದಕ್ಕಿಂತ ಬಡವರ ಹೆಣ ಸಾಗಿಸುವುದು ಹೆಚ್ಚು ಪುಣ್ಯ ಕಾರ್ಯ ಎಂದು ಜನರಿಗೆ ತಿಳಿ ಹೇಳಲು ಯಾವುದಾದರೂ ಕಾವಿಧಾರಿ ಸ್ವಾಮಿ ಎಂದಾದರೂ ಪ್ರಯತ್ನಿಸಿದ್ದಾನೆಯೇ? ಸ್ವಾಮಿ ವಿವೇಕಾನಂದರು ಮಾನವ ಸೇವೆಯೇ ಮಾಧವ ಸೇವೆ ಎಂದು ಹೇಳಿದ್ದರು. ಆದರೆ ಈ ಭೋದನೆಯನ್ನು ತಿರುವುಮುರುವು ಮಾಡಿ ಮಾಧವ ಸೇವೆಯೇ ಮಾನವ ಸೇವೆ ಎಂದು ಹೇಳಿ ... ಸ್ವಾರ್ಥ ಮತ್ತು ಅಮಾನವೀಯತೆ ತುಂಬಿದ ಹ... ಪಂಥದ ಮುಖ್ಯಾಲಯ ಇರುವ ರಾಜ್ಯವೇ ಒಡಿ...



ಅಭಿವೃದ್ಧಿಯಲ್ಲಿ ಹಿಂದುಳಿದ ಒಡಿಶಾದಲ್ಲಿ ಸತ್ತ... ಮರಗಟ್ಟಿದ ಶವದ ಕೈಕಾಲು ಮುರಿದು ಅದನ್ನು ಗಂ... ಕೊಂಡೊಯ್ಯುತ್ತಾರೆ. ಆದರೆ ಭಾರತದ ಭೂಪ... ಒಡಿಶಾಗೆ ವಿರುದ್ಧ ದಿಕ್ಕಿನಲ್ಲಿರುವ ಗುಜರಾತ್ ಎಷ್ಟೆ... ಅಭಿವೃದ್ಧಿ ಹೊಂದಿದೆಯೆಂದರೆ ಅಲ್ಲಿ ಧರ್ಮದ ... ಜೀವಂತ ಜನರ ಕೈಕಾಲು ಮುರಿದು ಶವ ಮಾಡ... ಅದಕ್ಕಿಂತ ಮಿಗಿಲಾಗಿ ಸತ್ತ ಗೋವಿನ ಕೈಕಾಲು... ಮುರಿದು ಅದರ ಕಳೇಬರವನ್ನು ಹೀಗೆ ಕ... ಕಟ್ಟಿಕೊಂಡು ದಲಿತರು ಸಾಗಿಸಿದ್ದರೆ ಗೋ-ರಾ... ಸಾಗಿಸುವವರ ಕೈಕಾಲೇ ಮುರಿಯುತ್ತಿದ್ದರು!

ಉತ್ತರ ಪ್ರದೇಶದ ಕಾನ್ಪುರ, ವಾರಾಣಸಿ, ಅಲಹಾ... ಇಂತಹ ದೊಡ್ಡ ನಗರಗಳಲ್ಲಿ 12 ವರ್ಷಕ್ಕಿಂತ... ಮಕ್ಕಳು ಸತ್ತಾಗ ಅಲ್ಲಿಯ ಧಾರ್ಮಿಕ ಪದ್ಧತಿಯಂತೆ... ಶವವನ್ನು ಸುಡುವ ಹಾಗಿಲ್ಲ. ಗಂಗಾ ನದಿಯಲ್ಲಿ... ಶವವನ್ನು ಇಡಿಯಾಗಿ ತೇಲಿಬಿಡುತ್ತಾರೆ. ಇಂತಹ ಜ... ನಗರಗಳ ಬಡವರು ರಸ್ತೆಯಲ್ಲಿ ತುಂಬಿದ ಟ್ರಾಫಿಕ್... ಸತ್ತ ಮಕ್ಕಳ ಶವವನ್ನು ತಲೆ ಹಾಗೂ ಕಾಲು ಕಾಣ... ಸೈಕಲ್ ಕ್ಯಾರಿಯರ್‌ಗೆ ಕಟ್ಟಿ ನಿರ್ಭಾವುಕರಾಗಿ... ಸೈಕಲ್ ಚಲಾಯಿಸಿಕೊಂಡು ಶವ ಒಯ್ಯುವುದನ್ನು... ಆ ನಗರಗಳಲ್ಲಿ ಉದ್ಯೋಗ ನಿಮಿತ್ತ ಇದ್ದಾಗ... ಬಾರಿ ಕಂಡಿದ್ದೇನೆ. ವಿದೇಶಿ ಪ್ರವಾಸಿಗರು ಈ... ದೃಶ್ಯ ನೋಡಿ ಅದರ ಫೋಟೋ ತೆಗೆದು ತಮ್ಮ ದೇ... ತೋರಿಸುತ್ತಾರೆ. ಇದುವೇ ಭಾರತದ ಸನಾತನ ... ಸಂಸ್ಕೃತಿ ಎಂದು ಜಗತ್ತು ತಿಳಿಯುತ್ತದೆ. ಮೋದಿಯ... ವಾರಾಣಸಿಯಲ್ಲಿ ಇದು ದಿನನಿತ್ಯದ ಹೃದಯ ಹಿ... ದೃಶ್ಯ. ಅಲ್ಲೆಲ್ಲೂ ಇಲೆಕ್ಟ್ರಿಕ್ ಚಿತಾಗಾರಗಳು ಇಲ್ಲ... ಅಭಿವೃದ್ಧಿಯ ಬೊಗಳೆ ಬಿಡುವವರಿಗೆ ಇದು ಗೊತ್ತಿ...

■ ವೀರಪ್ಪ ದಿ.ಎನ್. ಮಡಿ...

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕೆಂಪು ಕುಂಕುಮದ ಉಗಮ

ತಂತ್ರದ ಮೂಲ

ಯಂತ್ರ ಮಂತ್ರ ಮತ್ತು ತಂತ್ರ ಎಂದು ಮೂರು ಗಳಿಂದ ಹೇಳಿದರೂ ಈ ಮೂರೂ ತಂತ್ರವೇ ಆಗಿದೆ. ಭಾರತದ ಸಂಸ್ಕೃತಿಯಲ್ಲಿ ಎರಡು ಪದ್ಧತಿಗಳನ್ನು ವಾಗಿ ಗುರುತಿಸಬಹುದು. ಒಂದು ವೈದಿಕ ಪದ್ಧತಿ ತ್ತೊಂದು ಅವೈದಿಕ ಪದ್ಧತಿ. ವೈದಿಕ ಪದ್ಧತಿಗಳಿಗಿಂತ ಗೆ ಆಪ್ತವಾಗುವುದು ಅವೈದಿಕ ಪದ್ಧತಿಗಳು. ಏಕೆಂದರೆ, ನೇರವಾಗಿ ಸ್ತ್ರೀ ತತ್ವವಾದಕ್ಕೆ ಪೂರಕವಾಗಿವೆ. ಸ್ತ್ರೀ ವಾದಕ್ಕೆ ಎರಡು ಮುಖಗಳನ್ನು ಗುರುತಿಸಬಹುದು. ದು ಪ್ರಕೃತಿ ಮತ್ತೊಂದು ಕೃಷಿ. ಪ್ರಕೃತಿ ಸ್ವಾಭಾವಿಕ ರ್ಗವಾದರೆ, ಕೃಷಿ ಉದ್ದೇಶಿತ ನಿಸರ್ಗ. ಪ್ರಕೃತಿ ಮತ್ತು ಈ ಎರಡೂ ಸ್ತ್ರೀ ತತ್ವವಾದಕ್ಕೆ ಮೂಲ. ಇದೇ ತ್ರಕ್ಕೂ ಮೂಲ.

ಪ್ರಕೃತಿಯೆಂಬುದೇ ಒಂದು ಅಚ್ಚರಿ. ಭೂಮಿ, ಆಕಾಶ, ರ್ಯ ಚಂದ್ರಾದಿ ಆಕಾಶ ಕಾಯಗಳು, ನಕ್ಷತ್ರಗಳು, , ಮಳೆ, ಬಿಸಿಲು, ನದಿ, ಬೆಟ್ಟಗಳು, ಸುರಿಯುವ , ಸಸ್ಯಸಂಪತ್ತು, ಪ್ರಾಣಿ ಸಂಪತ್ತು, ಜೀವಸಂಕುಲ; ಈ ವೂ ಜೀವದಾತವಾಗಿದ್ದೇ ಅಲ್ಲದೇ ಸುಂದರ ಮತ್ತು ೇಷಕ ಅನುಭವಗಳನ್ನು ನೀಡುತ್ತಿದ್ದವು. ಬಿರುಗಾಳಿ, ಾಹ ಮೊದಲಾದ ಪ್ರಕೃತಿಯ ವಿಕೋಪಗಳು ರಿಕೆಯನ್ನು ಹುಟ್ಟಿಸಿದ್ದೇ ಅಲ್ಲದೇ ಪ್ರಕೃತಿಯ ಮುನಿಸನ್ನು ನುಷ್ಯನ ಅನುಭವಕ್ಕೆ ತಂದಿದ್ದವು. ಇದೇ ಪ್ರಕೃತಿಯ ಗ್ರಹವು ಕುಂಠಿತವಾದರೆ ಉಂಟಾಗುವ ಕ್ಷಾಮ ಬರಗಳು ನನ್ನು ಕಂಗೆಡಿಸಿದ್ದವು ಹಾಗೂ ಪ್ರಕೃತಿಯನ್ನು ಸಿಕೊಳ್ಳಲು ಹಾತೊರೆಯುವಂತೆ ಮಾಡಿದ್ದವು.

ಪ್ರಕೃತಿಯೆಂಬ ಸ್ವಾಭಾವಿಕ ನಿಸರ್ಗದ ಮೇಲೆ ನುಷ್ಯನಿಗೆ ಹೆಚ್ಚು ಅಧಿಕಾರವೇನೂ ಇರಲಿಲ್ಲ. ಹೆಚ್ಚೆಂದರೆ ಗ್ರಹಗಳಿಗೆ ಕೃತಜ್ಞತೆಯನ್ನು ಸಲ್ಲಿಸುವುದು ಅಥವಾ ನಿಸಬೇಡವೆಂದು ಪ್ರಾರ್ಥಿಸುವುದು. ಆದರೆ ಕೃಷಿಯೆಂಬ ದ್ದೇಶಿತ ನಿಸರ್ಗದಲ್ಲಿ ಮನುಷ್ಯನ ಆಶಯಗಳಿದ್ದವು. ಕಿನ ಭರವಸೆಗಳಿದ್ದವು. ಜೊತೆಗೆ ಈ ಕೃಷಿಯೂ ತಿಯ ವರದಾನವೇ ಎಂಬ ಸ್ಪಷ್ಟ ಅರಿವೂ ಇತ್ತು. ರಿಂದಲೇ ಕೃಷಿಯ ಪ್ರಾರಂಭದ ದಿನಗಳಲ್ಲಿ ಪ್ರಪಂಚದ ಹುಪಾಲು ಎಲ್ಲಾ ಭಾಗದ ಬುಡಕಟ್ಟಿನವರೂ, ಕೃಷಿಕರೂ ತಿಯ ಸಂಗತಿಗಳನ್ನು ಅನುಕರಣೆ ಮಾಡುವ ರೀತಿಯಲ್ಲಿ ವಾರು ಮಾಂತ್ರಿಕ ನಂಬಿಕೆಗಳನ್ನು ಅನುಸರಿಸುತ್ತಿದ್ದರು.

ಮಾಂತ್ರಿಕ ಮಹಿಳೆಯರು

ದಕ್ಷಿಣ ಆಫ್ರಿಕಾದ ಸುಂಬ ಬುಡಕಟ್ಟಿನ ಮಹಿಳೆ ವನ್ನು ಮಾಡಿಯೇ ಗುದ್ದಲಿಯನ್ನು ಹಿಡಿದು ಕೃಷಿಯ ಸಕ್ಕೆ ತೊಡಗುತ್ತಿದ್ದದ್ದು. ಪ್ರಾಚೀನ ಮೆಕ್ಸಿಕೋದಲ್ಲಿ ಾರಂಭ ಮತ್ತು ಮಂತ್ರೋಚ್ಚಾರಣೆ ಇಲ್ಲದೇ ಗೆಲಸಗಳು ಪ್ರಾರಂಭವಾಗುತ್ತಲೇ ಇರಲಿಲ್ಲ. ಭಾರತೀಯ ಡಕಟ್ಟುಗಳಲ್ಲಾಗಲಿ, ಗ್ರಾಮ್ಯದ ಕೃಷಿಕರಲ್ಲಾಗಲಿ ಅವರದೇ ಗೋಳಿಕ ಪ್ರಭಾವದಿಂದ ಉಗಮವಾಗಿರುವಂತಹ ಅನೇಕ ಸ್ಕೃತಿಕ ಪದ್ಧತಿಗಳನ್ನು ಹೊಂದಿರುತ್ತಾರೆ. ಪೂಜೆಯೋ, ವೇದ್ಯವೋ, ಪ್ರಾರ್ಥನೆಯೋ ಎಂಥದ್ದೋ ಒಂದು ಚರಣೆಯ ಮೂಲಕ ಭೂಮಿಯ ಫಲವತ್ತತೆಯನ್ನು, ಕೃತಿಯ ಅಮೂರ್ತ ಚೈತನ್ಯವನ್ನು ಒಲಿಸಿಕೊಂಡು ತಮ್ಮ ಗೆಲಸಗಳನ್ನು ಅನುಗ್ರಹಿಸಲಿ ಎಂಬ ಆಶಯವನ್ನು ಂದಿರುತ್ತಾರೆ. ಭಾರತದ ಪ್ರಾಚೀನ ಬಹುಜನರು ಮ್ಮದೇ ಆದಂತಹ ಮಾಂತ್ರಿಕ ಆಚರಣೆಗಳನ್ನು ಂದಿದ್ದರು. ನಂತರ ಪ್ರವೇಶಿಸಿದ ಕೃಷಿಕರಲ್ಲದ ಆರ್ಯರೂ ಗಳನ್ನು ತಮ್ಮದಾಗಿಸಿಕೊಂಡರು. ಅಥರ್ವವೇದದಲ್ಲಿ ಜ ಬಿತ್ತಲು ಅಗತ್ಯವಾದ ಮಂತ್ರಗಳಿವೆ. (ಅ.89, ಸಂ.42, 141) "ಧಾನ್ಯವೇ, ಏಳು, ನಿನ್ನ ಬಲದಿಂದಲೇ ದಪ್ಪವಾಗು, ಭಾಂಡವನ್ನೂ ಸಿಡಿಸು. ಆ ಮಿಂಚು ಸಹ ನಿನ್ನನ್ನು ಮಾಡಲಾರದು. ಧಾನ್ಯ ದೇವತೆಯೇ, ನಾವು ನಿನ್ನನ್ನು ಗಿ ಕರೆದಾಗ, ನಮ್ಮ ಕೂಗು ಕೇಳಿ ನೀನು ಆಕಾಶದಂತೆ ೇಳು. ಸಾಗರದಂತೆ ಅಪಾರವಾಗು. ನಿನ್ನನ್ನು ಸೇವಿಸುವವರು ಅಗಾಧ ಪ್ರಮಾಣದವರು. ನಿನ್ನ ರಾಶಿ ಅಗಾಧ. ನಿನ್ನನ್ನು ದಾನವಾಗಿ ಕೊಡುವವರು ಅಗಾಧವಾಗಿರುತ್ತಾರೆ. ಅಂತೆಯೇ ನಿನ್ನನ್ನು ತಿನ್ನುವವರು ಕೂಡ." ಹೀಗೆ ತೈತ್ತಿರೀಯ ಸಂಹಿತೆ, ಗೃಹ್ಯ ಸೂತ್ರಗಳು, ಋಗ್ವೇದದ ಮಂತ್ರಗಳು; ಅನೇಕಾನೇಕ ವೈದಿಕ ಸಂಬಂಧಿ ಕೃತಿಗಳೂ ಕೂಡ ಈ ಮಾಂತ್ರಿಕತೆಯ ತಂತ್ರಗಾರಿಕೆಯನ್ನು ಒಪ್ಪಿಕೊಂಡ ಹಲವು ಉದಾಹರಣೆಗಳನ್ನು ದೇವಿಪ್ರಸಾದ್ ಚಟ್ಟೋಪಾಧ್ಯಾಯರು ತಮ್ಮ ಲೋಕಾಯತ ಪುಸ್ತಕದಲ್ಲಿ ವಿವರಿಸುತ್ತಾರೆ.

ಇರಲಿ, ಕೃಷಿಯನ್ನು ಪ್ರಾರಂಭಿಸಿದವಳು ಮಹಿಳೆ ಎಂಬುದು ತಿಳಿದಿದೆ. ಅಂತೆಯೇ ಪ್ರಕೃತಿಯಲ್ಲಿ ಜೀವೋತ್ಪತ್ತಿಯ ಎಲ್ಲಾ ವಿದ್ಯಮಾನಗಳು ಮಹಿಳೆ ಅಥವಾ ಹೆಣ್ಣು ಜೀವಿಯಿಂದ ಎಂತಲೂ ತಿಳಿದಿದೆ. ಹಾಗೆಯೇ ಅವುಗಳಿಂದ ಮತ್ತು ಅವುಗಳ ಶಕ್ತಿಸಂವರ್ಧನೆಗಾಗಿ ಹುಟ್ಟಿದ ಮಾಂತ್ರಿಕತೆಯಾಗಲಿ, ತಂತ್ರವಾಗಲಿ ತಮ್ಮ ಮೂಲವನ್ನು ಗುರುತಿಸಿಕೊಳ್ಳುವುದು ಹೆಣ್ಣಿನಲ್ಲಿಯೇ. ಕೃಷಿಯ ತಂತ್ರಗಾರಿಕೆಯಲ್ಲಿ ಅತ್ಯಂತ ಹಿಂದುಳಿದಿದ್ದರೂ ಮನುಷ್ಯ ಪ್ರಕೃತಿ ಮತ್ತು ಕೃಷಿಯ ಪ್ರತಿಮೆ ತನ್ನ ಸಹಜೀವಿಯಾಗಿರುವ ಹೆಣ್ಣು ಎಂಬುದನ್ನು ಮಾತ್ರ ಅತ್ಯಂತ ಸ್ಪಷ್ಟವಾಗಿ ಕಂಡುಕೊಂಡಿದ್ದ. ಅದೊಂದು ನೈಸರ್ಗಿಕ ಮತ್ತು ಸೈದ್ಧಾಂತಿಕ ಆವಿಷ್ಕಾರ. ಅದು ಅತ್ಯಂತ ಸುಂದರವಾದ ಮತ್ತು ಪ್ರಾಕೃತಿಕವಾಗಿರುವಂತಹ ಭಾವುಕಸತ್ಯ. ಅದು ಎಷ್ಟೆಲ್ಲಾ ಮುಂದುವರಿಯಿತೆಂದರೆ, ಮುಂದಿನ ಶಾಕ್ತ ಪರಂಪರೆಗೂ ನಾಂದಿಯಾಯಿತು. ಮಾತೃಪ್ರಧಾನ ಸಮಾಜಕ್ಕೆ ಅಡಿಪಾಯವಾಯಿತು. ಶಕ್ತಿ ದೇವತೆಗಳ ಆರಾಧನೆಗೆ ಕಾರಣವಾಯಿತು. ಭಾರತದ ಸ್ತ್ರೀ ಸಾಂಸ್ಕೃತಿಕ ವೈಭವಕ್ಕೆ ಸ್ಫೂರ್ತಿಯಾಯಿತು.

ಬೆಳೆ ಬೆಳೆಯುವ ಕ್ಷೇತ್ರಗಳು ಫಲವತ್ತಾಗಿರಬೇಕೆಂದು ಆಶಿಸುತ್ತಾ ಕೃಷಿಯಲ್ಲಿ ತೊಡಗುವ ಪ್ರಕೃತಿಯ ಪ್ರತಿಮೆಗಳಾದ ಮಹಿಳೆಯರು ಮಾಂತ್ರಿಕ ಅಥವಾ ಧಾರ್ಮಿಕ ಆಚರಣೆಗಳನ್ನು ಮಾಡುತ್ತಿದ್ದರು. ಉದಾಹರಣೆಗೆ ಚೆಯೆನ್ನೆಗಳು (ಬುಡಕಟ್ಟು) ಸದೃಢ ಹೆಂಗಸರು ಜೋಳದ ನೃತ್ಯ ಮಾಡುತ್ತಾರೆ. ಇದೇರೀತಿ ಸಿಯೂ ಮತ್ತು ಅನೇಕ ಬುಡಕಟ್ಟುಗಳಲ್ಲಿ ಹೆಂಗಸರು ಭೂಮಿಯ ಫಲವತ್ತತೆಯನ್ನು ತಮ್ಮ ಫಲತ್ತತೆಯಿಂದ ಉದ್ದೀಪನಗೊಳಿಸುವ ಅಥವಾ ಓಲೈಸುವ ಆಚರಣೆಗಳಿವೆ. ಹಿಡತ್ಸ ಎಂಬ ಇನ್ನೊಂದು ಬುಡಕಟ್ಟು ಮಹಿಳೆಯರು ಜೋಳದ ಉತ್ಸವದಲ್ಲಿ ಕೋಲುಗಳಿಗೆ ಹಣ್ಣು ತರಕಾರಿಗಳನ್ನು ಕಟ್ಟಿಕೊಂಡು ನರ್ತಿಸುತ್ತಾರೆ. ಅವನ್ನೆಲ್ಲಾ ಹೊತ್ತು ಹಟ್ಟಿಯ ಕಡೆ ಬಂದು ಬೆತ್ತಲಾಗುತ್ತಾರೆ. ಮಹಿಳೆಯರಿಗೆ ಮತ್ತು ಹಣ್ಣುಗಳಿಗೆ ಹಿರಿಯ ಪುರುಷರು ನೀರಿನಿಂದ ಅಭಿಷೇಕ ಮಾಡುತ್ತಾರೆ. ಫಲವತ್ತತೆಗೆ ಇದು ಪುರುಷರ ಕೊಡುಗೆ. ಆದರೆ ಉತ್ಸವ ಮಹಿಳೆಯರದು. ಆದರೆ ಪೆರು ಮತ್ತು ಚಿಲಿ ದೇಶಗಳ ಬುಡಕಟ್ಟುಗಳಲ್ಲಿ ಮಳೆ ತರಿಸುವ ಮಾಂತ್ರಿಕಾಚರಣೆಯೂ ಮಹಿಳೆಯರದ್ದೇ. ಹೆಚ್ಚೂಕಡಿಮೆ ವಿಶ್ವದ ಎಲ್ಲಾ ಆದಿಮ ಸಂಸ್ಕೃತಿಗಳಲ್ಲಿ ಮಹಿಳೆಯರೇ ಆಚರಣೆಗಳನ್ನು ನಡೆಸುವವರು. ಪೆಟಗೋನಿಯದಲ್ಲಿ ಶಾಮನ್ ಕೆಲಸ ಮಾಡುವವರು ಅಥವಾ ಆಫ್ರಿಕಾದ ಝುಲು ಪಂಗಡದ ಮುಖ್ಯಸ್ಥ ಮಳೆತರಿಸುವ ಆಚರಣೆ ಮಾಡುವವನು, ತಾಹಿತಿಯಲ್ಲಿ ಆರೆಪ್ಪ ದೇವತೆಯ ಪೂಜಾರಿಯು ಮೈಗೆ ಬಣ್ಣ ಬಳಿದುಕೊಂಡು ಮಹಿಳೆಯಂತೆ ವರ್ತಿಸುತ್ತಾನೆ. ಆಂಧ್ರದ ಗುಜ್ಜವಾಡದಲ್ಲೂ ಈ ಬಗೆಯ ಪದ್ಧತಿಗಳಿವೆ. ಅಷ್ಟೇಕೆ ಪುರುಷನು ಸೀರೆಯುಟ್ಟು ಕರಗ ಹೊರುವುದೂ ಕೂಡ ಇಂಥಹುದೇ ಒಂದು ಭಾಗವಾಗಿದೆ. ಪರವಸ್ತುವಿನಂತೆ ನಟಿಸುತ್ತಾ ಅಥವಾ ಭಾವಿಸುತ್ತಾ ಪರವಸ್ತುವಿನ ಶಕ್ತಿಯನ್ನು ಧಾರಣ ಮಾಡಿಕೊಳ್ಳುವುದು ಮಾಂತ್ರಿಕತೆಯ ಒಂದು ಮುಖ್ಯವಾದ ಅಂಶ. ಪುರುಷ ಪೌರೋಹಿತ್ಯಗಳು ಅಭ್ಯಾಸಕ್ಕೆ ಬಂದ ಮೇಲೆಯೂ ಸ್ತ್ರೀತತ್ವದ ಪ್ರಾಧಾನ್ಯತೆಯನ್ನಾಗಲಿ ಅಥವಾ ಅಗತ್ಯವನ್ನಾಗಲಿ ಅವರು ಮರೆತಿರಲಿಲ್ಲ. ಕಾಲಾನುಕ್ರಮದಲ್ಲಿ ಪುರುಷ ಪ್ರಾಬಲ್ಯ ಮುಂದಾಗುತ್ತಾ ಕೊನೆಕೊನೆಗೆ ಅದು ತೀರಾ ಮರೆತಂತೆಯೇ ಆಯಿತು.

ವಾಮಾಚಾರವೆಂದರೇನು?

ವಾಮಾಚಾರ ಎಂದರೆ ನಕಾರಾತ್ಮಕವಾಗಿರುವ ದಾರಿ ಅಥವಾ ಎಡಗೈಯ ದಾರಿ ಎಂದು ವ್ಯಾಖ್ಯಾನಿಸುತ್ತಾರೆ. ಆದರೆ ಅದು ಸರಿಯಲ್ಲವೆಂದು ದೇವಿಪ್ರಸಾದ್ ಚಟ್ಟೋಪಾಧ್ಯಾಯ ವಿವರಿಸುತ್ತಾರೆ. ವಾಮ ಎಂದರೆ ಸ್ತ್ರೀ ಅಥವಾ ಕಾಮ. ಆದ್ದರಿಂದ ವಾಮಾಚಾರದಲ್ಲಿ ಸ್ತ್ರೀ ಮತ್ತು ಕಾಮಗಳಿಗೆ ಪೂಜಾಚಾರಗಳಿವೆ.

ವಾಮಾಚಾರಕ್ಕೆ ವಿರುದ್ಧವಾದಂತಹ ಮತ್ತೊಂದು ಆಚಾರವಿದೆ. ಅದು ದಕ್ಷಿಣಾಚಾರ. ಅದು ಬಹುಮಟ್ಟಿಗೆ ವೈದಿಕ ಪ್ರಭಾವವುಳ್ಳದ್ದು. ಶಿಷ್ಟಪದ್ಧತಿಗೆ ಸೋತ ವೈದಿಕ ಸಂಪ್ರದಾಯದವರು ವಾಮಾಚಾರದ ಮಹತ್ವವನ್ನು ಬಿಟ್ಟುಗೊಡದೇ ಅದನ್ನು ಅಂತರ್ಯಾಗ, ಬಹಿರ್ಯಾಗಗಳೇ ಮೊದಲಾದ ವಿಧಾನಗಳನ್ನು ಮತ್ತು ಪೂಜಾಕ್ರಮಗಳನ್ನು ಆಚರಿಸುತ್ತಾ ವಾಮಾಚಾರದಿಂದ ಪಡೆಯುವ ಫಲವನ್ನೇ ಪಡೆಯುವ ಯತ್ನವೇ ದಕ್ಷಿಣಾಚಾರ. ಆದರೆ ದಕ್ಷಿಣಾಚಾರವು ವೈದಿಕ ಮೂಲವಾದರೆ, ವಾಮಾಚಾರವು ಪ್ರಾಚೀನ ಬುಡಕಟ್ಟುಗಳ ಮೂಲ. ಆದರೆ, ಎಂದಿನಂತೆ ಬ್ರಾಹ್ಮಣ್ಯಾಧಿಕಾರವು ವಾಮಾಚಾರವನ್ನು ನಕಾರಾತ್ಮಕವಾಗಿ ಬಿಂಬಿಸಿಬಿಟ್ಟಿತು. ಈಗ ವಾಮಾಚಾರವೆಂದರೆ ನಕಾರಾತ್ಮಕ ಅಥವಾ ಕೆಟ್ಟ ಮಾರ್ಗವೆಂದೇ ಬಹುಜನರ ನಂಬಿಕೆ.

ಸ್ತ್ರೀಗೆ ಪ್ರಧಾನ ಸ್ಥಾನವಿದ್ದಂತೆ ಮೈಥುನಕ್ಕೂ ಅಷ್ಟೇ ಪ್ರಾತಿನಿಧ್ಯವಿದೆ ಈ ವಾಮಾಚಾರದಲ್ಲಿ. ವಾಮಕೇಶ್ವರ ತಂತ್ರದಲ್ಲಿ ಬಹಳ ವಿವರವಾಗಿ ತಂತ್ರೋಕ್ತಿಗಳನ್ನು ಮತ್ತು ತಂತ್ರಾರ್ಥಗಳನ್ನು ವಿವರಿಸಿದ್ದಾರೆ.

ಓಂ ಮಣಿ ಪದ್ಮೇ ಹುಂ

ತಂತ್ರದಲ್ಲಿ ಪದ್ಮವೆಂದರೆ ಸ್ತ್ರೀಯ ಯೋನಿಯ ಸಂಕೇತವೇ. ಬೌದ್ಧರ ತಂತ್ರಶಾಸ್ತ್ರದಲ್ಲಿಯೂ ಕೂಡ ವಜ್ರ ಅಥವಾ ಮಣಿ ಎಂದರೆ ಶಿಶ್ನವೂ, ಪದ್ಮ ಎಂದರೆ ಯೋನಿಯೂ ಆಗಿದೆ. ಆದರೆ, ಈಗಿನ ಸಾಮಾನ್ಯ ಬೌದ್ಧರಿಗೆ ಬೌದ್ಧ ತಂತ್ರಶಾಸ್ತ್ರದ ಪರಿಚಯ ಅಷ್ಟಾಗಿಲ್ಲ. ಬದಲಾಗಿ ಬೌದ್ಧ ಧರ್ಮ ಒಂದು ಸಾಮಾಜಿಕ ನ್ಯಾಯವೊದಗಿಸು ವಂತಹ ಧಾರ್ಮಿಕ ನೆಲೆಯಾಗಿದೆ.

ಅದೇನೇ ಇರಲಿ, ಭೂಮಿಯ ಫಲವತ್ತು ಮತ್ತು ಸ್ತ್ರೀಯ ಫಲವಂತಿಕೆ; ಈ ಎರಡೂ ಒಂದೇ ಗುಣವುಳ್ಳವು ಅಥವಾ ಒಂದೇ ಎಂದು ಸ್ಪಷ್ಟವಾಗಿತ್ತು. ಹಾಗಾಗಿ ಆದಿಮ ಕಾಲದಲ್ಲಿ ಮತ್ತು ಈಗಲೂ ಕೂಡ ಭೂಮಿಗಿರುವಷ್ಟೇ ಮಹತ್ವ ಸ್ತ್ರೀಗೆ. ಆದಿಮ ಕಾಲದ ಜನ ಭೂಮಿಯಿಂದ ಸಸ್ಯಗಳು ಹುಟ್ಟುವಂತೆ ಸ್ತ್ರೀಯಿಂದ ಮಕ್ಕಳು ಹುಟ್ಟುತ್ತಾರೆ ಎಂದೇ ಭಾವಿಸಿದ್ದರು. ಅದೆಷ್ಟು ಕಾಲ ಆ ನಂಬಿಕೆ ಇತ್ತೋ. ಆದರೆ, ಅದು ನಮ್ಮ ಪುರಾಣಗಳಲ್ಲಿಯೂ ಕೂಡ ಪ್ರತಿಮೆಗಳಾಗಿ, ರೂಪಕಗಳಾಗಿ ಬಂದವು. ಬ್ರಹ್ಮಾಂಡ ಪುರಾಣವಾಗಲಿ, ಮಾರ್ಕಂಡೇಯ ಪುರಾಣವಾಗಲಿ ಇದನ್ನು ನೇರವಾಗಿಯೇ ರೂಪಕಗಳಲ್ಲಿ ಕಟ್ಟಿಕೊಟ್ಟವು.

ಮಾರ್ಕಂಡೇಯ ಪುರಾಣದ ದೇವಿ ಮಹಾತ್ಮದಲ್ಲಿ ದೇವಿ ಹೀಗೆಂದು ಹೇಳುತ್ತಾಳೆ: "ದೇವತೆಗಳೇ, ಮುಂದೆ ನಾನೇನು ಮಾಡುತ್ತೇನೆಂದರೆ, ಇಡೀ ವಿಶ್ವವನ್ನು ಜೀವಪೋಷಕ ತರಕಾರಿಗಳಿಂದ ಸಂಭರಿಸುತ್ತೇನೆ. ಮಳೆ ಹೇರಳವಾದಾಗ ಅವು ಸ್ವತಃ ನನ್ನ ದೇಹದಿಂದಲೇ ಉದ್ಭವಿಸುತ್ತವೆ. ಆಗ ನಾನು ಭೂಮಿಯಲ್ಲಿ ಶಾಕಾಂಬರಿ ಎಂದು ಪ್ರಸಿದ್ಧಳಾಗುತ್ತೇನೆ."

ಕುಲವೃಕ್ಷ

ಹರಪ್ಪದ ಉತ್ಖನನದಲ್ಲಿ ದೊರೆತಿರುವ ಮುದ್ರೆಯ ಚಿತ್ರವೊಂದರಲ್ಲಿ ಒಬ್ಬ ಮಹಿಳೆ ನಗ್ನವಾಗಿ, ತಲೆಕೆಳಗಾಗಿದ್ದು, ಅವಳು ತನ್ನ ಕಾಲುಗಳನ್ನು ಹಿಗ್ಗಿಸಿದ್ದಾಳೆ. ಅವಳ ಯೋನಿಯಿಂದ ಒಂದು ಸಸಿ ಹೊರಗೆ ಬಂದಿರುತ್ತದೆ. ಅದರೊಡನೆ ಕೆಲವು ಸಾಲುಗಳಿವೆ. ಆದರೆ ಅವುಗಳನ್ನು ಓದಲು ನಮಗೆ ಸದ್ಯಕ್ಕೆ ತಿಳಿಯದು. ಅನ್ನದಾ, ಅನ್ನಪೂರ್ಣೆ, ಬನಶಂಕರಿ, ಶಾಕಾಂಬರಿ ಈ ಹೆಸರುಗಳೆಲ್ಲವೂ ಅದನ್ನೇ ಹೇಳುತ್ತದೆ. ಕುಲಚೂಡಾಮಣಿ ಗ್ರಂಥದ ಪ್ರಕಾರ ಶಾಕ್ತನು ಮರವನ್ನು ಕಂಡಾಗೆಲ್ಲಾ ನಮಿಸಬೇಕು. ಶಾಕ್ತನು ಬೆಳಗೆದ್ದ ಕೂಡಲೇ, "ಓಂ ಕುಲವೃಕ್ಷೇಭ್ಯೋ ನಮಃ" ಎಂದು 'ಕುಲ' ಮರಗಳಿಗೆ ನಮಿಸಬೇಕು.





ತಂತ್ರವು ಆದಿಮ ಆಚರಣೆ. ಭಾರತವೇ ಇದಕ್ಕೆ ಮೂಲವೆಂದು ಬಹುಮಂದಿ ಬೀಗುತ್ತಾರೆ. ಆದರೆ ಹಾಗೇನಿಲ್ಲ. ಭಾರತವೆಂಬುದೇ ಇರಲಿಲ್ಲ ಎಂಬುದೊಂದು ಕಡೆ ಇರಲಿ, ಆದಿಮ ಕಾಲದಲ್ಲಿ ಇಡೀ ಮನುಕುಲಕ್ಕೆ ಪ್ರಕೃತಿಯ ಪ್ರತಿಮೆ ಸ್ತ್ರೀ ಎಂಬುದರ ಅರಿವೂ, ಸ್ತ್ರೀಯ ಫಲವತ್ತತೆಯು ಭೂಮಿಯ ಫಲವತ್ತತೆಗೆ ಸಾಮ್ಯತೆ ಇದೆಯೆಂಬ ತಿಳಿವಳಿಕೆಯೂ ಸ್ಪಷ್ಟವಾಗಿದ್ದರ ಕಾರಣದಿಂದಲೇ ಪರಾಶಕ್ತಿಯನ್ನು ಉದ್ದೀಪನ ಮಾಡಲು ಸ್ತ್ರೀಯು ಮಾಂತ್ರಿಕತೆಯಲ್ಲಿ ತೊಡಗಿದ್ದಳು. ಭಗ ಎಂದರೆ ಯೋನಿ ಎಂದೇ ಅರ್ಥ. ಯೋನಿಯನ್ನು ಹೊಂದಿರುವಂತಹ ಸ್ತ್ರೀ ಪ್ರಾಧಾನ್ಯ ಮತ್ತು ಆರಾಧನಾ ಪ್ರತಿಮೆಯೇ ಭಗವತಿ. ಇಂತಹ ಯೋನಿಯಿಂದ ಸ್ರವಿಸುವ ರಕ್ತವು (ರಜಸ್ವಲೆಯಾದಾಗ) ಫಲವತ್ತತೆಯ ಘನ ಸಂಕೇತವೂ ಹೌದಾಗಿತ್ತು. ಅದನ್ನು ಹಣೆಗೆ ಮತ್ತು ದೇಹದ ಇತರ ಭಾಗಗಳಿಗೆ ಬಳಿದುಕೊಳ್ಳುವುದರ ಮೂಲಕ ಶಕ್ತಿಯ ಕವಚವನ್ನು ನಮ್ಮ ಆದಿಮ ಜನರು ಪರಿಭಾವಿಸುತ್ತಿದ್ದರು. ಅದೇ ಕ್ರಮೇಣ ಸಾಂಕೇತಿಕ ರೂಪದಲ್ಲಿ ಇಂದು ನಮ್ಮ ಹಣೆಯಲ್ಲಿ ಕುಂಕುಮದ ಬೊಟ್ಟಾಗಿ ಉಳಿದುಕೊಂಡಿದೆ.


ಋತುಮತಿಯಾದ ಮಹಿಳೆಯರಂತೂ ಫಲವತ್ತತೆಯ ಘನ ಸ್ವರೂಪವೆಂದೇ ಭಾವಿಸಲಾಗುತ್ತಿತ್ತು. ಋತುಮತಿಯಾಗುವುದಾಗಲಿ, ರಜಸ್ವಲೆಯ ರಕ್ತವಾಗಲಿ ನಮ್ಮ ಪೂರ್ವಿಕರಿಗೆ ಎಂದಿಗೂ ಅಮಂಗಳವೂ ಆಗಿರಲಿಲ್ಲ. ಹಾಗೆಯೇ ಮೈಲಿಗೆಯಂತೂ ಇಲ್ಲವೇ ಇಲ್ಲ. ಅದು ಅತ್ಯಂತ ಪವಿತ್ರವೂ ಮತ್ತು ಶಕ್ತಿಯುಳ್ಳದ್ದೂ ಎಂದು ಭಾವಿಸಿದ್ದೇ ಅಲ್ಲದೇ ಅದು ಇಂದಿಗೂ ಹಣೆಯಲ್ಲಿ ಕೆಂಪು ಕುಂಕುಮವಾಗಿ ಉಳಿದಿದೆ ಎಂದರೆ ಯಾರಾದರೂ ಅದರ ಮಹತ್ವವನ್ನು ಮನಗಾಣಬೇಕು. ಬ್ರಾಹ್ಮಣ್ಯದ ಪ್ರವೇಶದಿಂದ ಮತ್ತು ಪ್ರಭಾವದಿಂದ ಸ್ತ್ರೀಯರ ಸ್ಥಾನಮಾನಗಳು ಕಡೆಗಣಿಸುವುದಿರಲಿ, ರಜಸ್ವಲೆಯಾದ ಹೆಂಗಸು ಮೈಲಿಗೆ ಅಥವಾ ಕೊಳಕು ಎಂಬ ಮಲಿನಮಯವಾದ ವಿಚಾರವು ಜನರ ಬುದ್ಧಿಗೆ ಹೊಕ್ಕವು. ಅದು ಏಕೆ ಮತ್ತು ಹೇಗೆ ಎಂದು ಮುಂದೆ ನೋಡೋಣ. ■








ಜಗಭಂಡ ಜುಗ್ಗೇಶ ಉಚ್ಚೆ ಕುಡಿದ ಮಂಗೇಶನಾ



ಶಾಲಾಕಾಲೇಜುಗಳ ಪರೀಕ್ಷೆಯಲ್ಲಿ ಸೊಟ್ಟೆ ಗಳಿಸಿದವರೆಲ್ಲಾ ರಮ್ಯಾ ಮೇಲೆ ಸೊಟ್ಟೆ ಎಸೆದಿದ್ದಾರೆ. ತಲೆಯಲ್ಲಿ ಕಲ್ಲು ಮಣ್ಣು ಸೆಗಣಿ ತುಂಬಿಕೊಂಡಿರುವವರೆಲ್ಲಾ ರಮ್ಯಾ ಮೇಲೆ ಕಲ್ಲು ತೂರಿದ್ದಾರೆ. ಕೊಳೆತ ಮನಸ್ಸಿನವರೆಲ್ಲಾ ರಮ್ಯಾ ಮೇಲೆ ಕೊಳೆತ ಟೊಮಾಟೊ ಎಸೆದಿದ್ದಾರೆ. ದೇವಸ್ಥಾನದಲ್ಲಿ ಚಪ್ಪಲಿ ಕದಿಯುವ ಚಿಂದಿ ಚೋರ್‌ಗಳು ಚಪ್ಪಲಿ ಎಸೆದಿದ್ದಾರೆ.

ಪಾರ್ಕ್ ಗಿಡಿಯಲ್ಲಿ ಉಚ್ಚೆ ಹೊಯ್ಯುವ ಜಗಭಂಡ ಜುಗ್ಗೇಶ ಉಚ್ಚೆ ಕುಡಿದ ಮಂಗೇಶನಾಗಿ ರಮ್ಯಾ ವಿರುದ್ಧ ಉಚ್ಚಿಷ್ಟ ಕಾರಿದ್ದಾನೆ. ಯಾರೇ ಆಗಲಿ, ತಮ್ಮಲ್ಲಿ ಇದ್ದದ್ದನ್ನು ಮಾತ್ರ ಎಸೆಯಲು ಸಾಧ್ಯ ತಾನೇ! ಇಲ್ಲದ್ದನ್ನು ಎಲ್ಲಿಂದ



ಎಸೆಯುವುದು? ಮೆದುಳೇ ಇಲ್ಲದವರು ಬುದ್ಧಿವಂತಿಕೆ ತೋರಿಸಲು ಹೇಗೆ ಸಾಧ್ಯ? ವಿವೇಕ ಮತ್ತು ನೈತಿಕತೆಯೇ ಇಲ್ಲದವರು ಮಾನವತೆ ತೋರಿಸಲು ಹೇಗೆ ಸಾಧ್ಯ ಹೇಳಿ?

"ನರಕ ಎಲ್ಲಿ ಇಲ್ಲ ಹೇಳಿ. ಮಂಗಳೂರು ಬೆಂಗಳೂರಿನಲ್ಲಿಯೂ ನರಕ ಇಲ್ಲವೇ" ಎಂದು ರಮ್ಯಾ ಹೇಳಿದ್ದನ್ನು ಸಂಘಿಗಳ ವದಂತಿ ಫ್ಯಾಕ್ಟರಿಯಲ್ಲಿ ತಿರುಚಿ ಹಬ್ಬಿಸಲಾಗಿದೆ. ಬೆಂಗಳೂರು-ಮಂಗಳೂರಿನಲ್ಲಿಯೂ ನರಕ ಇದೆಯೆಂದು ಹೇಳಿರುವುದಕ್ಕೂ ಬೆಂಗಳೂರು-ಮಂಗಳೂರೇ ನರಕ ಎಂದು ಹೇಳುವುದಕ್ಕೂ ಭೂಮಿ ಆಕಾಶದಷ್ಟು ವ್ಯತ್ಯಾಸವಿದೆ. ಇದನ್ನು ಅರ್ಥಮಾಡಿಕೊಳ್ಳದಷ್ಟೂ ವಿವೇಕಹೀನ ರಾಗಿದ್ದಾರೆ ಸಂಘಿ ಬಜರಂಗಿ ಕುತಂತ್ರಿಗಳು. ಶಬ್ದಗಳನ್ನು ತಿರುಚುವುದರಲ್ಲಿ ಸಂಘಿಗಳು ಸಿದ್ಧಹಸ್ತರು ತಾನೇ.

"ನೀವೆಲ್ಲಾ ಭಾರತ ತೊರೆದು ಬಂದಿದ್ದೇ ಒಳ್ಳೆಯದಾಯಿತು, ಭಾರತವೂ ಒಂದು ದೇಶವೇ?" ಹೀಗೆ ಅಮೆರಿಕದ ಎನ್‌ಆರ್‌ಐಗಳಿಗೆ ಹೇಳಿದ್ದು ಯಾರು ಗೊತ್ತೇ? ಹೀಗೆ ಹೇಳಿದ ಭಯಂಕರ ದೇಶಭಕ್ತ ಬೇರೆ ಯಾರೂ ಅಲ್ಲ, ಅವರೇ ನಮ್ಮ ಪ್ರಧಾನಿ ನರೇಂದ್ರ ಮೋದಿ!! ಸುಮಾರು ಎರಡು ವರ್ಷಗಳ ಹಿಂದೆ ಮೋದಿ ಪ್ರಧಾನಮಂತ್ರಿಯಾಗಿ ತಮ್ಮ ಅಮೆರಿಕದ ಮೊದಲನೆಯ ಭೇಟಿಯ ವೇಳೆ ಅಲ್ಲಿ ಒಂದು ಗುಜರಾತ್ ಮೂಲದ ಅನಿವಾಸಿ ಭಾರತೀಯರ ಕಾರ್ಯಕ್ರಮದಲ್ಲಿ ಹೀಗೆ ಹೇಳಿ ಚಪ್ಪಾಳೆ ಗಿಟ್ಟಿಸಿದ್ದರು. ಇದೇ ಮೋದಿ ಕಳೆದ ವರ್ಷ ಯೋಗ ದಿನಾಚರಣೆಯಂದು ಭಾರತದ ಧ್ವಜದಿಂದ ಬೆವರು ಒರೆಸಿದ್ದು ದೇಶಪ್ರೇಮವೇ? ಇಂತಹ ಮಹಾನ್ ದೇಶಭಕ್ತರ ಪಾರ್ಟಿಯಾದ ಬಿಜೆಪಿ ಈಗ ಮಾತೆತ್ತಿದರೆ ಎಲ್ಲರಿಗೂ ಪಾಕಿಸ್ತಾನಕ್ಕೆ ಹೋಗಿ ಎಂದು ಊಳಿಡುತ್ತಿರುವುದು ಆಶ್ಚರ್ಯವಲ್ಲ.



ವಿನಾಯಕ ಬಾಳಿಗರನ್ನು ಕೊಂದ ನರೇಶ್ ಶೆಣೈ ಮೂರು ತಿಂಗಳುಗಳ ಕಾಲ ಅಡಗಿ ಕೂತಿದ್ದು ಎಲ್ಲಿ ಗೊತ್ತೇ? ಅದು ಪಾಕಿಸ್ತಾನದಲ್ಲಿಯಂತೆ. ವಾಹ್! ಎಂತೆಂತಹ ನಕಲಿ ದೇಶಭಕ್ತರು ಸಂಘಿಗಳಲ್ಲಿ ಇದ್ದಾರೆ ನೋಡಿ. ಅಭಿವೃದ್ಧಿಯ ಹೆಸರಲ್ಲಿ ಅಧಿಕಾರಕ್ಕೆ ಬಂದ ಪಾರ್ಟಿ ಈಗ ಅಭಿವೃದ್ಧಿಯನ್ನು ಮರೆತು ಮುಸ್ಲಿಂ ಮತ್ತು ಕ್ರಿಶ್ಚಿಯನ್ ದ್ವೇಷವನ್ನೇ ತನ್ನ ಮೊದಲ ಅಜೆಂಡಾ ಮಾಡಿಕೊಂಡಿದೆ. ದಲಿತರ ಮೇಲಿನ ಹಲ್ಲೆ ಮತ್ತು ಎಬಿವಿಪಿಯ ಬೇದಿರಂಪವನ್ನೇ ಸಬ್ ಕೆ ಸಾಥ್ ಸಬ್ ಕಾ ವಿಕಾಸ್ (ವಿನಾಶ್) ಎಂದು ಬಿಜೆಪಿ ಹೇಳುತ್ತಿದೆ. ದ್ವೇಷವನ್ನೇ ದೇಶಪ್ರೇಮ ಎಂದು ಸಂಘಿಗಳು ತಪ್ಪಾಗಿ ವ್ಯಾಖ್ಯಾನಿಸಿದ್ದಾರೆ.

- ಕ್ಷಿತಿಜ್ ಕೆ ಹೆಗಡೆ, ಮಂಗಳೂರು

ಗೋಹತ್ಯೆಗೂ ಸೈ, ಗೋಮಾಂಸಕ್ಕೂ ಜೈ

1992 ರಲ್ಲಿ ತೆರೆಕಂಡ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಉಂಡು ಹೋದ ಕೊಂಡು ಹೋದ' ಎಂಬ ಕನ್ನಡ ಚಲನಚಿತ್ರದಲ್ಲಿ ನಾಯಕ ನಟ ಅನಂತ್ ನಾಗ್ ಕಮಂಗಿಪುರದ ಜನರನ್ನು ವಿದೇಶಿ ಹಸು ಹೆಸರಲ್ಲಿ ಯಾಮಾರಿಸಿದ್ದನ್ನು, ಅಲ್ಲಿನ ಜನರನ್ನು ಗೋಳಾಡಿಸಿದ್ದನ್ನು ಬೆಳ್ಳಿ ತೆರೆಯ ಮೇಲೆ ನೋಡಿದ್ದೇವೆ. ಆದರೆ ಈಗ ನಿಜಜೀವನದಲ್ಲೂ ಹಸುವಿನ ಹೆಸರಲ್ಲಿ ಜನರನ್ನು ಕಮಂಗಿಗಳನ್ನಾಗಿಸುವ ಕೆಲಸ ಈ ನಾಡಿನಲ್ಲಿ ನಡೆಯುತ್ತಿದೆ.

ಮಹಿಳೆಯರೆಂದರೆ ಬರೀ ಮಾತು.. ಮಾತು.. ಮಾತು ಆದಕ್ಕಾಗಿಯೇ ಅವರನ್ನು 'ಮಾತೆಯರು' ಅನ್ನುವುದೆಂಬ ಮಾತಿದೆ. ಆದರೆ ಇವತ್ತು ಮಾತೇ ಬಾರದ ಗೋವುಗಳಿಗೆ ಮಾತೆಯರ ಸ್ಥಾನಮಾನ ನೀಡಿ, ತಾವೇ ಬಾಯಿಗೆ ಬಂದಹಾಗೆ ಮಾತನಾಡುವ ಸಂತಾನ ಇಂದು ದೇಶದ ನೆಮ್ಮದಿ ಮತ್ತು ಏಕತೆಗೆ ಭಂಗ ತರುವ ಕೆಲಸ ಮಾಡುತ್ತಿದೆ. ಗೋಮಾತೆ ಹೆಸರಲ್ಲಿ ದೇಶದಲ್ಲಿ ರಕ್ತಹರಿಸಿ ದೇಶಭಕ್ತರೆನಿಸುವ ಚಟದಲ್ಲಿ ದ್ವೇಷಭಕ್ತರಾಗುತ್ತಿದ್ದಾರೆ, ಭಯೋತ್ಪಾದಕರಾಗುತ್ತಿದ್ದಾರೆ, ದೇಶ ವಿಭಜಕರಾಗುತ್ತಿದ್ದಾರೆ.


ಆಯ್ತು ಬಿಡಿ, ಈ ನಾಡಿನಲ್ಲಿ ಗೋಹತ್ಯೆ ಸಂಪೂರ್ಣ ನಿಂತರೆ ಪ್ರಳಯವೇನೂ ಆಗುವುದಿಲ್ಲ, ಯಾರೂ ಸಾಯುವುದೂ ಇಲ್ಲ, ಇದರಿಂದ ಈ ದೇಶ ಉದ್ಧಾರ ಆಗುವುದಾದರೆ, ಹಿಂದೂ ಧರ್ಮ ಭದ್ರ ಆಗುವುದಾದರೆ, ವಿದೇಶಿ ಉಗ್ರರು ಈ ದೇಶಕ್ಕೆ ಬರಲು ಹೆದರುವಂತಾದರೆ, ಒಲಿಂಪಿಕ್ಸ್ ಪದಕ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನ ಗಳಿಸುವುದಾದರೆ ಹಾಗೇ ಆಗಲಿ.

ಈಗ ಇರುವ ಮುಖ್ಯ ಸಮಸ್ಯೆ ಅಂದರೆ ಯಾವ ಯಾವ ಹಸುಗಳು ಮಾತೆಗೆ ಸಮಾನ, ಯಾವ ಯಾವ ಹಸುಗಳಿಗೆ ಮಾತೆಯರ ಸ್ಥಾನಮಾನ ನೀಡಲಾಗಿದೆ, ಯಾವ ಯಾವ ಜಾತಿಯ ಜನಗಳು ಸಾಕಿದ ಹಸುಗಳು, ಯಾವ ಯಾವ ಭಾಷೆಯ ಜನಗಳು ಸಾಕಿದ ಹಸುಗಳು, ಯಾವ ಯಾವ ದೇಶದ ಜನಗಳು ಸಾಕಿದ ಹಸುಗಳು ಮಾತೆಗೆ ಸಮ ಅನ್ನುವುದನ್ನು ತಿಳಿಯಬೇಕಾಗಿದೆ.

ದಲಿತರು ಹಿಂದೂ ಧಾರ್ಮಿಕ ಕೇಂದ್ರದ ಸಮೀಪ ಬರುವುದೂ, ದೇವಸ್ಥಾನ ಪ್ರವೇಶಿಸುವುದೂ ಅಪರಾಧ ಆಗಿರುವಾಗ, ದಲಿತರ ಮನೆಯಲ್ಲಿ ಹುಟ್ಟಿ ಬೆಳೆದ ಹಸುಗಳಲ್ಲಿ ಮೂವತ್ತ ಮೂರು ಕೋಟಿ ಹಿಂದೂ ದೇವತೆಗಳು ಇರಲು ಸಾಧ್ಯವೇ? ದಲಿತರನ್ನು ಕನಿಷ್ಠ ಮನುಷ್ಯರೆಂದು ಕಾಣದ, ದಲಿತರ ಮನೆಯ ರೊಟ್ಟಿಯನ್ನು ತಮ್ಮ ಮನೆಯ ನಾಯಿ ಕೂಡ ತಿನ್ನುವುದನ್ನು ಸಹಿಸದ, ದಲಿತರ ಮನೆಯ ನಿರ್ಜೀವ ವಸ್ತುಗಳನ್ನೂ ಅದರ ಸ್ಥಾನಕ್ಕೆ ಸಮನಾಗಿ ಕಾಣದವರು, ದಲಿತರ ಮನೆಯಲ್ಲಿ ಹುಟ್ಟಿ, ದಲಿತರು ಹಾಕಿದ ಆಹಾರ ತಿಂದು ಬೆಳೆದ ಹಸುಗಳು ಹೇಗೆ ಮಾತೆಗೆ ಸಮಾನವಾಗುತ್ತವೆ? ಆ ಹಸುಗಳನ್ನು ಹತ್ಯೆ ಮಾಡಿದರೆ ಯಾರಿಗೆ ಯಾಕೆ ನೋವಾಗಬೇಕು?

ಹಾಗೆಯೇ ಮುಸ್ಲಿಮ್, ಕ್ರೈಸ್ತರ ಮನೆಯಲ್ಲಿ ಅವರು ಹಾಕಿದ ಆಹಾರವನ್ನು ತಿಂದು ಬೆಳೆದ ಹಸುಗಳಲ್ಲಿ ಯಾರು ತಾನೆ ಮಾತೆಯನ್ನು ಕಾಣಲು ಸಾಧ್ಯ? ಇಂತಹ ಹಸುಗಳನ್ನು ಆಹಾರಕ್ಕಾಗಿ ಹತ್ಯೆ ಮಾಡುವುದರಿಂದ ಯಾರ ಧಾರ್ಮಿಕ ಭಾವನೆಗೂ ಧಕ್ಕೆಯಾಗಲು ಸಾಧ್ಯವಿಲ್ಲ. ಕೇವಲ ಪ್ರಾಣಿಹತ್ಯೆ ಮಾಡಬಾರದು ಎಂಬ ಕಾರಣಕ್ಕೆ ಅದು ಅಪರಾಧ ಆಗಬಹುದು.

ಇನ್ನು ವಿದೇಶಿ ಹಸುಗಳನ್ನು 'ಗೋಮಾತೆ' ಅನ್ನಲು ಸಾಧ್ಯವೇ ಇಲ್ಲ. ಗೋರಕ್ಷಕರೂ, ಧರ್ಮರಕ್ಷಕರೂ, ದೇಶಭಕ್ತರೂ ಆದವರು ಕೇವಲ ಭಾರತದಲ್ಲಿ ಮಾತ್ರ ಗೋಹತ್ಯೆಯನ್ನು ವಿರೋಧಿಸುತ್ತಾರೆ! ವಿದೇಶದಲ್ಲಲ್ಲ. ಹಾಗಾಗಿ ವಿದೇಶಿ ಹಸುಗಳಲ್ಲಿ ಕೋಟ್ಯಾಂತರ ದೇವತೆಗಳು ಇಲ್ಲ ಅನ್ನುವುದು ಖಾತ್ರಿಯಾಗುತ್ತದೆ. ಹಾಗೆಯೇ ಹಿಂದೂಗಳು ಗೋಹಂತಕ, ಗೋಮಾಂಸ ಭಕ್ಷಕ ದೇಶಗಳಲ್ಲಿ ವಾಸಿಸುವುದರಿಂದ, ಅಲ್ಲಿ ಸೇವೆ ಮಾಡುತ್ತಿರುವುದರಿಂದ, ಅಲ್ಲಿ ಗೋಹತ್ಯೆ ಮಾಡುವಾಗ ಇವರಿಗೆ ನೋವಾಗದಿರುವುದರಿಂದ, ಯಾವ ಹಿಂದೂ ಕೂಡ ಪರ ದೇಶದಲ್ಲಿ ಗೋಹತ್ಯೆ ಮಾಡುತ್ತಾರೆ, ಗೋಮಾಂಸ ತಿನ್ನುತ್ತಾರೆ ಎಂದು ಆ ದೇಶ ಬಿಟ್ಟು ಓಡಿ ಬರದಿರುವಾಗ, ಇಲ್ಲಿ ಗೋಹತ್ಯೆ ಮಾಡುವವರನ್ನು ಕೊಲ್ಲಲು ನಿಲ್ಲುತ್ತಾರೆ; ಅಲ್ಲಿ ಸುಮ್ಮನಿರುತ್ತಾರೆ. ಅಂದರೆ ಅಲ್ಲಿಯ ಹಸುಗಳಲ್ಲಿ 'ಮಾತೇ' ಇಲ್ಲದಿರುವುದು ನಮಗೆ ತಿಳಿದುಬರುತ್ತದೆ. ವಿದೇಶಿ ಹಸುಗಳು ಭಾರತಕ್ಕೆ ಬಂದರೂ ಇಲ್ಲಿ ಅವುಗಳಿಗೆ ನಮ್ಮ ದೇಶದ 'ಗೋವತ್ವ' ನೀಡಲು ಸಾಧ್ಯವಿಲ್ಲ. ಯಾರೋ ವಿದೇಶಿ ಪ್ರಜೆಗಳು ಭಾರತಕ್ಕೆ ಬಂದಕೂಡಲೇ 'ಪೌರತ್ವ' ನೀಡಲು ಸಾಧ್ಯವೇ? ಅಲ್ಲದೆ ವಿದೇಶಿ ಹಸುಗಳಿಗೆ ಮೂವತ್ತ ಮೂರು ಕೋಟಿ ದೇವತೆಗಳನ್ನು ಅಪ್‌ಲೋಡ್ ಮಾಡುವ ಯಾವುದೇ ಸಾಫ್ಟ್‌ವೇರ್ ಭಾರತದಲ್ಲಿ ಇಲ್ಲ. ಅಲ್ಲದೆ ಪುರೋಹಿತರಲ್ಲಿ ಮಂತ್ರವೂ ಇಲ್ಲ. ಭಾರತದ ಹೋರಿಯೊಂದು ವಿದೇಶಿ ಹಸುವನ್ನು ಮದುವೆ ಮಾಡಿಕೊಂಡು ಬಂದರೂ ಇಲ್ಲಿ ಅದಕ್ಕೆ ಗೋಸೊಸೆಯ ಸ್ಥಾನಮಾನ ನೀಡಲು ಸಾಧ್ಯವಿಲ್ಲ. ಅದು ಇಲ್ಲಿಯ 'ಗೋವತ್ವ' ಪಡೆದು ಇಲ್ಲಿಯೆ ತಾಯಿಯಾಗಿ, ಅಜ್ಜಿಯಾಗಿ ಇಲ್ಲಿಯೇ ಬದುಕಿದರೂ ಕೂಡ ಅದು ವಿದೇಶಿಯಾಗಿಯೆ ಇರಬೇಕಾದುದರಿಂದ, ಅಂತಹ ಹಸುಗಳನ್ನು ಹತ್ಯೆ ಮಾಡುವುದರಿಂದ ಯಾರ ಧಾರ್ಮಿಕ ನಂಬಿಕೆಗೂ ಧಕ್ಕೆಯಾಗಲು ಸಾಧ್ಯವಿಲ್ಲ.




ಹಾಗಾಗಿ ದಲಿತರ, ಮುಸ್ಲಿಮರ, ಕ್ರೈಸ್ತರ ಮನೆಯ ಆಹಾರ ತಿಂದು ಬೆಳೆದ ಅಲ್ಲದೆ ವಿದೇಶಿ ಹಸುಗಳಲ್ಲಿ ಯಾವುದೇ ಹಿಂದೂ ದೇವತೆಗಳನ್ನು ಕಾಣಲು ಸಾಧ್ಯವಿಲ್ಲ. ಇದನ್ನು ಮಾತೇ ಎಂದು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಆದುದರಿಂದ ಭಾರತದಲ್ಲಿ ನೆಲೆಸಿರುವ ಸವರ್ಣೀಯ ಹಿಂದೂಗಳ ಧಾರ್ಮಿಕ ನಂಬಿಕೆಯನ್ನು ಗೌರವಿಸಿ ಅವರು ಸಾಕಿದ ಹಸುಗಳನ್ನು ಹತ್ಯೆ ಮಾಡುವುದನ್ನು ನಿಷೇಧಿಸಬೇಕು.

ಉಳಿದವರು ಸಾಕಿದ ಹಾಗೂ ವಿದೇಶಿ ಹಸುಗಳನ್ನು ಮಾತ್ರ ಆಹಾರಕ್ಕಾಗಿ ಬಳಕೆ ಮಾಡಬೇಕು.

ಗೋಮಾತೆಗೂ ಜೈ... ಗೋಮಾಂಸಕ್ಕೂ ಜೈ
ಗೋಪೂಜೆಗೂ ಸೈ.... ಗೋಹತ್ಯೆಗೂ ಸೈ

- ಬಿತ್ತಿ ಸುರೇಶ್, ಬ್ರಹ್ಮಾವರ

ಜೈನಮುನಿ ತರುಣ ಸಾಗರನ ಬೂಟಾಟಿಕೆ



ದಿಗಂಬರ ಜೈನಮುನಿ ತರುಣ ಸಾಗರರು ಮೊನ್ನೆ ಹರ್ಯಾಣ ವಿಧಾನ ಸಭೆಯಲ್ಲಿ ರಾಜ್ಯಪಾಲರಿಗಿಂತ ಎತ್ತರದ ಸ್ಥಾನದಲ್ಲಿ ಕುಳಿತು ರಾಜಕೀಯ ಮತ್ತು ಧರ್ಮದ ಸರಿ ದಾಂಪತ್ಯದ ಬಗ್ಗೆ ಪ್ರವಚನ ಕೊಟ್ಟದ್ದು ಕೆಲವು ವಿವಾದ ಹುಟ್ಟು ಹಾಕಿದೆ. ಈ ಮುನಿಗಳು ಹಿಂದೆಯೂ ವಿವಾದಕ್ಕೆ ಕಾರಣರಾಗಿದ್ದರು. ಆರೇಳು ವರ್ಷಗಳ ಹಿಂದೆ ಇವರು ಕರ್ನಾಟಕದಲ್ಲಿಯ ಒಂದು ಕಾರ್ಯಕ್ರಮದಲ್ಲಿ ಹೇಳಿದ್ದರು: "ಶೂದ್ರನೊಬ್ಬ ನೂರು ಜನ್ಮ ತಾಳಿ ಸವೆಸಿದ ನಂತರ ಕ್ಷತ್ರಿಯನಾಗಿ ಹುಟ್ಟುತ್ತಾನೆ. ಕ್ಷತ್ರಿ ನೂರು ಜನ್ಮ ತಾಳಿ ಕರ್ಮ ಸವೆಸಿದ ನಂತರ ಬ್ರಾ ಹುಟ್ಟುತ್ತಾನೆ. ಬ್ರಾಹ್ಮಣನೊಬ್ಬ ನೂರು ಜನ್ಮ ತಾಳಿ ಸವೆಸಿದ ನಂತರ ದಿಗಂಬರ ಜೈನನಾಗಿ ಹುಟ್ಟು ಈ ಪ್ರವಚನದ ನೇರ ಪ್ರಸಾರ ಒಂದು ಟಿವಿ ಚಾ ಮಾಡಿದ್ದರಿಂದ, ಆ ರಿಕಾರ್ಡಿಂಗಿನ ಸಾಕ್ಷಿ ಆಧ ತರುಣ ಸಾಗರ ಮುನಿಗಳ ಮೇಲೆ ಪ್ರಜ್ಞಾವಂತರ ನಿಂದನೆ ಪ್ರಕರಣ ದಾಖಲಿಸಿದ್ದರು. ನಂ ಮುನಿಗಳು ಬಹಿರಂಗ ಕ್ಷಮೆ ಕೇಳಿದ್ದರ ಕೇಸ್ ಹಿಂಪಡೆಯ ಲಾಗಿತ್ತು. ಆ ದಿನದ ತರುಣ ಸಾಗರರು ದಲಿತ ಶೂದ್ರರು ನ ಜನ್ಮ ಪಡೆದ ನಂತರ ಜೈನರಾಗಿ ಹುಟ್ಟು ಎಂದು ಎಲ್ಲಿಯೂ ಹೇಳುವ ಧೈರ್ಯ ಮ

ಏನೇ ಆಗಲಿ ಹೈದರಾಬಾದಿನ ಅಲ್-ಕಬೀರ್ ಯಾಂತ್ರಿಕ ಕಸಾಯಿಖಾ ಮಾರ್ವಾಡಿ ಜೈನನದು. ಆತ ಈ ತರುಣ ಮುನಿಗಳ ಆತ್ಮೀಯ ಶಿಷ್ಯ. ಹಾಗಾಗಿ ಹೈದ ಕಸಾಯಿಖಾನೆಗೆ ಅಲ್-ಕಬೀರ್ ಅಲ್-ಮಹಾವೀರ್ ಹೆಸರಿಟ್ಟಿದ್ದರೆ ಸರಿಹೊಂದುತ್ತಿತ್ತು ಎಂದು ಕೆಲವರ ಅಂ ಅಲ್ಲಿ ದಿನಕ್ಕೆ 4000 ದನ-ಎಮ್ಮೆ ಕ ಕೆಪಾಸಿಟಿ ಇದೆ. ಸುಮಾರು 5000 ಆ ಸಹ ಅಲ್ಲಿ ದಿನಾಲೂ ಸಂಹರಿಸಲಾಗುತ್ತ ಎದುರು ದನ-ಗೋವು ಯಾವ ಲೆಕ್ಕ ಬಿಡಿ ಎದುರು ಅಹಿಂಸೆಯೇ ಪರಮಧರ್ಮ ಎಲ್ಲಾ ಜೀವಿಗಳನ್ನು ಗೌರವಿಸಬೇಕು ಎನ್ನು ಮಹಾವೀರರ ಮೂಲತತ್ವ ಈಗಿನ ಜೈನರಿಗೆ ಬೇ ಅಮಿತ್ ಶಾ ಮತ್ತು ಗುಜರಾತ್ ಮುಖ್ಯಮಂತ್ರಿ ರೂಪಾನಿ, ಉದ್ಯಮಿ ಅದಾನಿ ಸಹ ಜೈನರಾಗಿದ್ದು ಈ ಮುನಿಗಳ ಖರ್ಚುವೆಚ್ಚ ನೋಡಿಕೊಳ್ಳುವುದ ನೋಡಿದರೆ ಎಲ್ಲಾ ಧರ್ಮದವರೂ ತಮ್ಮ ತಮ್ಮ ಗ್ರಂಥಗಳಲ್ಲಿ ಬೋಧಿಸಿರುವ ತತ್ವ-ನೀತಿಗಳಲ್ಲಿ ಕೇವಲ ಹತ್ತು ಸಹ ತಮ್ಮ ನಿಜ ಜೀ ಅನುಸರಿಸುವುದಿಲ್ಲ ಎಂಬುದು ನಿಜವಾದರೂ ತತ್ವ-ನೀತಿಗಳನ್ನು ಮಾತ್ರ ಯಾವುದೇ ಧರ್ಮ ಪಾಲಿಸುವುದಿಲ್ಲ. ದುರದೃಷ್ಟವೆಂದರೆ ಕೇವಲ ಗುಜರಾತಿ-ಮಾರ್ವಾಡಿ ಜೈನರು ಮಾತ್ರ ಧರ್ಮಗ್ರಂಥದಲ್ಲಿ ಬೋಧಿಸಿರುವ ತತ್ವ-ನೀ ಸಂಪೂರ್ಣ ತದ್ವಿರುದ್ಧವಾದವುಗಳನ್ನೇ ತಮ್ಮ ನಿಜಜೀ ಅಳವಡಿಸಿದ್ದಾರೆ. ಜೈನರು ಪ್ರಾಣಿ ಮಾಂಸ ತಿನ್ನ ಮಾತ್ರವಲ್ಲ ಪ್ರಾಣಿಹತ್ಯೆ ಕಣ್ಣಿಂದ ನೋಡುವು ನಿಷಿದ್ಧವಿದೆ. ಆದರೆ ನಮ್ಮ ಗುಜರಾತ್ ಮತ್ತು ರಾ ಜೈನರು ಮಾತ್ರ ಹಣಕ್ಕಾಗಿ ದಿನಾಲೂ ಸಾವಿರಾರು ಕೊಲ್ಲುವ ಕಸಾಯಿಖಾನೆ ನಡೆಸುತ್ತಾರಲ್ಲದೇ ಗೋ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು
ಪ್ರತಿಕ್ರಿಯೆಗಳನ್ನು 9980331427 ನಂ
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸ

...ನಾರರಲ್ಲಿ ಹೆಚ್ಚಿನವರು ಜೈನರು. ನೀವು ಮಾಡುವುದು ... ಎಂದು ತರುಣಸಾಗರರು ಅಥವ ಇತರ ಜೈನ ...ನಿಗಳು ಈ ಜೈನ ಕಸಾಯಿಗಳಿಗೆ ಎಂದೂ ಹೇಳಿಲ್ಲ. ...ರತದ ಹಿಂದುಳಿದ ಪ್ರದೇಶಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ...ವರ ರಕ್ತ ಹೀರುವ ಲೇವಾದೇವಿಗಾರರು ಮತ್ತು ಕಾಳಸಂತೆ ...ಡುವ ವ್ಯಾಪಾರಿಗಳಲ್ಲಿ ಹೆಚ್ಚಿನವರು ಉತ್ತರ ಭಾರತದ ...ರೇ ಆಗಿದ್ದು ಈ ವೃತ್ತಿಗಳು 24 ತೀರ್ಥಂಕರರು ...ಧಿಸಿರುವುದಕ್ಕೆ ಸಂಪೂರ್ಣ ವಿರುದ್ಧವಾದ ಹೀನ ...ದ ನರಕಕ್ಕೆ ತಳ್ಳುವ ವೃತ್ತಿಗಳೇ ಆಗಿವೆ. ಮಾನವೀಯತೆ ...ದ ಇಂತಹ ವೃತ್ತಿಯಲ್ಲಿ ತೊಡಗಿರುವ ತಮ್ಮ ಧರ್ಮದ ...ಮಿ ವ್ಯಾಪಾರಿಗಳನ್ನು ಒಂದುಕ್ಷಣ ತಮ್ಮೆದುರು ...ರಿಸಿಕೊಂಡು ಯಾವುದಾದರೂ ಜೈನ ಮುನಿ ಅವರ ...ರ್ಮದ ವೃತ್ತಿ ಬಿಡುವಂತೆ ಮನವೊಲಿಸುವ ಪ್ರಯತ್ನ ...ಡಿರುವ ಒಂದೂ ಉದಾಹರಣೆ ಇಲ್ಲ. ಜೈನ ಮುನಿಗಳು ...ಷನ ಕೆಲಸ ಮಾಡುತ್ತಿದ್ದರೆ ಒಬ್ಬ ಜೈನ ರಾಜಕಾರಣಿಯೇ ...ಾರಿ ಯಾಗಿರುವ ಗುಜರಾತ್ ನರಮೇಧ ಹಾಗೂ ... ಎನ್‌ಕೌಂಟರ್‌ಗಳು ನಡೆಯುತ್ತಲೇ ಇರಲಿಲ್ಲ. ಈರುಳ್ಳಿ ...ಳ್ಳಿ ತಿನ್ನದವರೂ ಮನುಷ್ಯರನ್ನು ಮತ್ತು ಗೋವುಗಳನ್ನು ...ಳ್ಳಿಯಂತೆ ಕೊಚ್ಚಬಲ್ಲರು ಎಂಬುದು ನಿರ್ವಿವಾದ.

- ಅಭಿಷೇಕ್ ಪಟಿವಾಲ್, ಸುಳ್ಯ

ಡಬ್ಬಲ್ ಗೇಮ್ ಆಡುವ ಚೆಡ್ಡಿ ಮನಸ್ಸುಗಳು

...ಹಬ್ಬ ಹರಿದಿನ ಸ್ವಾತಂತ್ರ್ಯೋತ್ಸವವೇ ಮೊದಲಾದ ...ಟ್ರೀಯ ಹಬ್ಬಗಳೆಂದರೆ ಈ ಹಿಂದೆ ಎಲ್ಲೆಡೆಯಲ್ಲಿಯೂ ...ದು ರೀತಿಯ ಆಹ್ಲಾದಕರ ವಾತಾವರಣ ...ಯಾಗುತಿತ್ತು. ಆದರೆ ಇಂದಿನ ದಿನಗಳಲ್ಲಿ ಆ ...ವಾವರಣವೇ ತಿರುವು ಮುರುವಾಗಿ ವಿಚಿತ್ರ ಘಟ್ಟಕ್ಕೆ ...ದು ತಲುಪಿವೆ. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ...ಲ್ಲ ದೇಶದ ಹಿತದೃಷ್ಟಿಯಿಂದ ಕೆಲಸ ಮಾಡದೇ ...ಹಾಳ ಕೆಲಸದಲ್ಲೇ ತೊಡಗಿದ್ದ ಸಂಘಟನೆಗಳು ಇಂದು ...ಂತ್ರ್ಯ ದಿವಸ ಬಂತೆಂದರೆ, ಪಂಜಿನ ಮೆರವಣಿಗೆ, ...ಶ ಭಕ್ತಿಯ ಕಳ್ಳ ಸೋಗು ಬುರುಡೆ ಭಾಷಣಗಳಲ್ಲೇ ...ರನ್ನು ಹಾದಿ ತಪ್ಪಿಸುವತ್ತ ಗಮನ ಹರಿಸುತ್ತಿವೆ. ತಾವೇ ...ಡ್ಸೆ ಕೊಂದ ಗಾಂಧೀಜಿಯನ್ನು ನೆನಪಿಸುವ ಗಾಂಧೀ ...ಯಂತಿಯಂತೂ ಹೊಸ ರೂಪ ಪಡೆದು ಸ್ವಚ್ಛ ಭಾರತ ...ಯಾನವಾಗಿ ಬರಿ ಫೋಟೋಗಳು ಪೋಜುಗಳಿಗಷ್ಟೇ ...ಮಿತವಾಗಿದೆ. ಸ್ವಚ್ಛತೆ ಮಾತ್ರ ಮಾಮೂಲಿ ಸಫಾಯಿ ...ರ್ಮಚಾರಿಗಳೇ ಇವತ್ತಿಗೂ ಕೂಡ ಮುಂದುವರೆಸುತ್ತಿ ...ರೆಯೇ ವಿನಃ ಯಾವ ಕವಡೆ ಕಾಸಿನ ಬದಲಾವಣೆಯೂ ...ಲ್ಲ. (ಕೇರಳದ ಅಪ್ಪುಗೆ ಅಮ್ಮ ಈ ಅಭಿಯಾನಕ್ಕಾಗಿ ...ಟ್ಲಿ ಜೈಟ್ಲಿಗೆ ಚೆಕ್ ನೀಡುವ ಮೂಲಕ ನೂರು ...ಟಿ ಕೊಟ್ಟಿದ್ದಳಂತೆ. ಕೊನೇ ಪಕ್ಷ ಆ ಹಣವಾದರೂ ...ಕೆಯಾಯಿತೇ ಪ್ರಾಮಾಣಿಕವಾಗಿ ಅದೂ ಇಲ್ಲ.)

...ಅದೇರೀತಿ ಗಣೇಶೋತ್ಸವ- ಕೃಷ್ಣಜನ್ಮಾಷ್ಟಮಿ ...ದಲಾದ ಹಬ್ಬಗಳೆಲ್ಲ ಸಭೆ ಕರೆದು ಹಿಂದೂವಾದಿಗಳು ...ದ ಶೂದ್ರರಿಗೆ ಭಾಷಣದ ನೆಪದಲ್ಲಿ ದೇಶ ಭಕ್ತಿಯ ...ಕೋಡನಾತ್ಮಕ ಪಾಠ ಹೇಳುವಂತಹ ಸಂದರ್ಭಗಳಾಗಿ ...ಲಾಗಿ ಬಿಟ್ಟಿವೆ.


...ಇಂತಹ ಅಖಂಡ ಭಾರತ ಸಂಕಲ್ಪಯಾತ್ರೆ, ಪಂಜಿನ ...ರವಣಿಗೆಗಳಲ್ಲಿ ಚೆಡ್ಡಿಗಳು ಆರೋಪಿಸುವ ...ದ್ರೋಹಿಗಳ ವಿರುದ್ಧ ಹಾಗು ಪಾಕಿಸ್ತಾನದ ವಿರುದ್ಧ ...ಶ್‌ನ ಮೂತ್ರ ಡೈಲಾಗ್‌ನಂತೆ "ಕಣ್ಣನ್ ದೇವನ್ ... ಪುಡಿ ಪಾಕಿಸ್ತಾನ ಪುಡಿ ಪುಡಿ... ಸ್ನೇಹಕ್ಕೂ ಬದ್ಧ ...ರಕ್ಕೂ ಸಿದ್ಧ" ಎನ್ನುವಂತಹ ಭಯಂಕರ ಘೋಷಣೆ ...ೋಷಣೆ ಅಲ್ಲ ಘೋಷಣೆಗೂ ಗಂಭೀರತೆ ಇದೆ) ...ಪ್ರಚೋದಿತ ಶೂದ್ರ ಹೈಕಳ ಬಾಯಿಂದ ಹೊರಡಿಸಲಾಗುತ್ತದೆ. ...ತಹನೇ ಮೊನ್ನೆ ರಾತ್ರಿ ಬೆಳ್ತಂಗಡಿಯಲ್ಲಿ ಮಡಕೆ ...ಯುಹೋಗಿ ತನ್ನ ಅಮೂಲ್ಯ ಜೀವವನ್ನು ಕಳಕೊಂಡಿದ್ದು) ... ಈ ಘೋಷಣೆಗಳನ್ನೆಲ್ಲ ನೋಡುವ ಗಮನಿಸುವ ...ರಿಗಿನವರಿಗೆ ಇವರ ರೋಷ ಬದ್ಧತೆ ಹಟ ಛೀ ...ಡದೆಷ್ಟು ಎಂದು ಖಂಡಿತಾ ಖುಷಿಯಾಗದೇ ಇರದು. ...ದೆ ಪಾಕಿಸ್ತಾನದಲ್ಲಿ...?

...ಅಯೋಧ್ಯೆಯ ಬಾಬ್ರಿ ಮಸೀದಿ ಕೆಡವಲು ಇಂತಹ ...ಪ್ರಚೋದಿತ ಶೂದ್ರರನ್ನೇ ವೈದಿಕ ತಲೆಗಳು ಬಳಸಿಕೊಂಡರು. ಪ್ರತಿ ವರ್ಷವೂ ಡಿಸೆಂಬರ್ ಆರರಂದು ವಿಜಯೋತ್ಸವವನ್ನು ಆಚರಿಸಿ ಪರೋಕ್ಷವಾಗಿ ಇದು ತಮ್ಮ ಉದ್ದೇಶಿತ ಕಾರ್ಯ ಎಂದೇ ಘೋಷಿಸಿಕೊಂಡರೂ ವೈದಿಕ ತಲೆಗಳು ಇಂದಿಗೂ ಕೂಡ ಎದೆ ತಟ್ಟಿ ಇದು ನಮ್ಮದೇ ಕಾರ್ಯ ಎಂದು ಹೇಳಿಕೊಳ್ಳುತ್ತಿಲ್ಲ. ಬಹಿರಂಗವಾಗಿ ಒಪ್ಪಿಕೊಳ್ಳುತ್ತಲೂ ಇಲ್ಲ. ಪಾಕಿಸ್ತಾನ ಪುಡಿ ಪುಡಿ ಸಮರಕ್ಕೂ ಸಿದ್ಧ ಎನ್ನುವಂತಹ ಘೋಷಣೆಗಳ ರೋಷ ಬದ್ಧತೆಗಳೆಲ್ಲ ಎಲ್ಲಿ ಹೋದವು? ಸಾಬರ ಬಗ್ಗೆ ಸಹಾನುಭೂತಿ ತೋರುತ್ತಿದ್ದಾನೆಂದು ಗಾಂಧಿಯಂತಹ ಗಾಂಧಿಯನ್ನೇ ಈ ಚೆಡ್ಡಿಗಳು ಕೊಂದರೂ ಗಾಂಧಿಯನ್ನು ಕೊಂದ ಈ ನಾಥೂರಾಂ ಘೋಡ್ಸೆಗೂ ತಮ್ಮ ಸಂಘಟನೆಗೂ ಸಂಬಂಧವೇ ಇಲ್ಲ ಎಂದು ಬೊಬ್ಬಿಡುತ್ತಾರೆ. ರಾಹುಲ್ ಗಾಂಧಿ ಇಂತಹ ಮಾತನ್ನಾಡಿದ್ದಕ್ಕೇ ಮೈಮೇಲೆ ಚೇಳು ಬಿದ್ದಂತೆ ಆಡುತ್ತಾರೆ. ಈ ಇಬ್ಬಗೆಯ ಹೊಯ್ದಾಟಗಳೆಲ್ಲ ಯಾಕೋ? ಆ ಬದ್ಧತೆಗಳೆಲ್ಲ ಎಲ್ಲಿ ಹೋದವೋ..!!?

ಅದೇರೀತಿ ಹೋಮ್ ಸ್ಟೇ ಪ್ರಕರಣದಿಂದ ಹಿಡಿದು, ಮೊನ್ನೆಯ ಪ್ರವೀಣ್ ಪೂಜಾರಿಯ ಕೊಲೆಯ ಘಟನೆ ನಡೆಯುವ ಹಿಂದಿನ ದಿನದ ತನಕ ಇಲ್ಲದ ತಕರಾರು ಘಟನೆ ಘಟಿಸಿದ ಬಳಿಕ ಆತ ನಮ್ಮವನೇ ಅಲ್ಲ ಎನ್ನುವ ಜಾರಿಕೊಳ್ಳಲು ಹವಣಿಸುವ ವೈದಿಕ ತಲೆಗಳ ಬದ್ಧತೆ ತಮ್ಮ ಬೇಳೆ ಬೇಯಿಸಿಕೊಳ್ಳೋದಕ್ಕಷ್ಟೇ ಸೀಮಿತ ಎನ್ನುವುದನ್ನು ಸಾಕ್ಷೀಕರಿಸುವಂತಿದೆಯಲ್ಲವೇ?

ಇದೆಲ್ಲವೂ ಇದೀಗ ನಿಧಾನವಾಗಿಯಾದರೂ ಅಬ್ರಾಹ್ಮಣ ಶೂದ್ರ ವರ್ಗಕ್ಕೆ ಅರ್ಥವಾಗತೊಡಗಿದೆ. ಅದಕ್ಕೀಗ ಚೆಡ್ಡಿ ಪಡೆ ಶೂದ್ರರಿಗಾಗಿ ಬೇರೆ ರೀತಿಯಲ್ಲಿ ಖೆಡ್ಡವನ್ನು ತೋಡಲು ಹವಣಿಸುತ್ತಿದ್ದಾರೆ. ಇತ್ತೀಚೆಗೆ ಫೇಸ್‌ಬುಕ್ಕಿನಲ್ಲಿ ಮೆಸೇಜೊಂದನ್ನು ಗಮನಿಸಿದ್ದೆ. ಅಬ್ರಾಹ್ಮಣ ಯುವ ಸಮುದಾಯದ ತಲೆಕೆಡಿಸುವುದನ್ನೇ ಕಾಯಕವನ್ನಾಗಿಸಿಕೊಂಡ ಧೂರ್ತನೊಬ್ಬನ ಸಂದೇಶವಿದು. ಆತ ಹೇಳುತ್ತಿರುವುದೇನಂದರೆ:

"ನಾವೆಲ್ಲ ನೆನಪಿಡಬೇಕಾದ ಸಂಗತಿಯೊಂದಿದೆ. ಈ ಹಿಂದೂ ಧರ್ಮ ಉಳಿದಿರುವುದು ಮೇಲ್ವರ್ಗದವರ ಕಾರಣದಿಂದ ಅಲ್ಲ. ಪ್ರತಿ ಬಾರಿ ನಮ್ಮ ಮೇಲೆ ಅನ್ಯ ದೇಶೀಯರು ಅನ್ಯ ಧರ್ಮೀಯರು ದಾಳಿ ಮಾಡಿದಾಗಲೆಲ್ಲ ಅವರು ಕೈಹಾಕಹೋದದ್ದು ಹಿಂದೂ ಧರ್ಮದ ಬೇರುಗಳಾದ ಕೆಳವರ್ಗದ ಮೇಲೆಯೇ ಹೊರತು ಮೇಲ್ವರ್ಗದ ಮೇಲಲ್ಲವೇ ಅಲ್ಲ.




ಮೊಗಲರ ಕಾಲದಲ್ಲಿ 'ಮತಾಂತರಗೊಳ್ಳಿ ಇಲ್ಲವೇ ನಮ್ಮಯ ಇಲ್ಲವೇ ನಮ್ಮಯ ಪಾಯಿಖಾನೆಯ ಮಲವನ್ನು ಹೊರಿರಿ' ಎಂಬ ಆಯ್ಕೆಯನ್ನು ಅವರೆದುರು ಮೊಗಲರು ಇಟ್ಟಾಗ ಹಿಂದೂ ಧರ್ಮವನ್ನು ಉಳಿಸಲು ಅವರುಗಳು ಮಲಹೊರುವುದನ್ನೇ ಆರಿಸಿಕೊಂಡಂತಹ ಧೀಮಂತರು. ಇವತ್ತು ಹಿಂದೂ ಧರ್ಮ ಉಳಿದದ್ದೇ ಆದರೆ ಇಂತವರ ಕಾರಣದಿಂದಲೇ ಹೌದು. ಅಂತವರನ್ನು ಕೀಳೆಂದು ಭಾವಿಸುವುದೇ ಘನಘೋರ ಪ್ರಮಾದ."

ಅಮೀನ್ ಮಟ್ಟುರವರು ಹೇಳುವಂತೆ ಮೋದಿ ಬ್ರಿಗೇಡ್ ಹೆಸರಲ್ಲಿ ಯುವಕ ಯುವತಿಯರ ತಲೆಕೆಡಿಸಿ ಪುಂಡರ ತಂಡ ಕಟ್ಟಿದ ವಕ್ರ ಬುದ್ಧಿಯ ಸುಳ್ಳುಕೋರನ ಇಂತಹ 'ಬಟರಿಂಗ್' ತಂತ್ರಗಾರಿಕೆಯ ಹಿಂದಿರುವ ಮರ್ಮ ಬೇರೆಯದೇ ಇದೆ. ಒಂದು ಆತನ ಚಾಳಿಯೇ ಸುಳ್ಳುಗಳನ್ನು ಬೊಗಳಿ ಶೂದ್ರರ ತಲೆ ಕೆಡಿಸುವುದಾದರೆ ಇನ್ನೊಂದು ಸುಳ್ಳನ್ನೇ ಸತ್ಯವೆಂದು ಹಬ್ಬಿಸುವ ಗೋಬೆಲ್ಸ್ ತಂತ್ರಗಾರಿಕೆ.


"ಹಿಂದೂ ಧರ್ಮವನ್ನು ಅವತ್ತೂ ರಕ್ಷಿಸಿದ್ದೀರಿ ಇವತ್ತೂ ಕೂಡ ನಿಮ್ಮದೇ ಜವಾಬ್ಧಾರಿ" ಎನ್ನುವುದು ಆತನ ಒಂದು ಬಾಣವಾದರೆ, "ಹಿಂದೂ ಧರ್ಮ ಬಿಡಬೇಡಿ ನೀವು ಹಿಂದೂಗಳೇ. ಮಲಹೊರುವ ಪದ್ಧತಿಯಂತಹ ಕೀಳು ವಿಚಾರಗಳಿಗೆ ನಿಮ್ಮನ್ನು ಬಳಸಿಕೊಂಡದ್ದು ವೈದಿಕರಲ್ಲ ಬದಲಿಗೆ ಮೊಗಲರು" ಎಂಬ ಬೊಗಳೆ ಪ್ರಚಾರ ಇನ್ನೊಂದು.

ಮೊಗಲರು ಈ ದೇಶವನ್ನು ಹಿಂದೂಸ್ಥಾನವೆಂದು ಕರೆದರು. ಅದರರ್ಥ ಹಿಂದೂ ಧರ್ಮದವರ ನಾಡೆಂದಲ್ಲ. ಸಿಂಧೂ ಮೂಲದಿಂದ ಬಂದ ಪ್ರಾದೇಶಿಕ ಗುರುತಿಸುವಿಕೆಯಷ್ಟೇ ಇದರ ಹಿಂದಿತ್ತು. ಹಿಂದೂ ಧರ್ಮವೆಂಬ ಸಮುದಾಯಿಕ ಕಲ್ಪನೆ ಬೆಳೆದದ್ದೇ ಕೆಲವು ಶತಮಾನಗಳ ಹಿಂದೆಯೇ ಹೊರತು ಮೊಗಲರ ಕಾಲದ್ದಲ್ಲ. ಹಿಂದೂ ಧರ್ಮಕ್ಕೇ ಅವತ್ತು ಅಸ್ತಿತ್ವವಿಲ್ಲದಿದ್ದಾಗ ಇನ್ನು ಶೂದ್ರರು ಮೊಗಲರಿಂದ ಹಿಂದೂ ಧರ್ಮವನ್ನು ಕಾಪಾಡಿದರು ಎಂಬುವುದಕ್ಕೆ ಅರ್ಥವೇ ಇಲ್ಲ. ಚೂಲಿ ತಲೆಗೆ ಅದು ಬೇಕೂ ಇಲ್ಲ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್



ಮತ್ತೆ ಮತ್ತೆ ನೆನಪಾಗುವ ಮುಂಗಾರು



ಹತ್ತು ವರ್ಷಗಳ ನಂತರ 'ಮುಂಗಾರು ಮಳೆ' ಹೆಸರಿನಲ್ಲಿ ಮತ್ತೆ ಸಿನಿಮಾ ಮೂಡಿ ಬಂದಿದೆ. ಈ ಬಾರಿ ಶಶಾಂಕ್ ನಿರ್ದೇಶನದಲ್ಲಿ ತಯಾರಾದ ಸಿನಿಮಾ ಕೂಡ ನಿರೀಕ್ಷೆ ಮೂಡಿಸಿದ್ದು, ಚಿತ್ರದ ಬಗ್ಗೆ ಹಲವು ಕೌತುಕಗಳನ್ನು ಬಿಚ್ಚಿಟ್ಟಿದ್ದಾರೆ ನಿರ್ದೇಶಕರು.

ಚೊಚ್ಚಲು ಸಿನಿಮಾದಿಂದಲೇ ನಿರೀಕ್ಷೆ ಮೂಡಿಸಿದವರು ನಿರ್ದೇಶಕ ಶಶಾಂಕ್. 'ಸಿಕ್ಸರ್', 'ಮೊಗ್ಗಿನ ಮನಸು' ಸೇರಿದಂತೆ ಇತರ ಇವರ ಚಿತ್ರಗಳು ತಮ್ಮದೇ ಆದ ಕಾರಣದಿಂದಾಗಿ ಪ್ರೇಕ್ಷಕರ ಮನಸು ಕದ್ದಿವೆ. ಬಾಕ್ಸ್ ಆಫೀಸ್‌ನಲ್ಲೂ ಸದ್ದು ಮಾಡಿವೆ. ಈ ಕಾರಣದಿಂದಾಗಿಯೇ 'ಮುಂಗಾರು ಮಳೆ 2' ಚಿತ್ರವು ಇವರ ಪಾಲಾಗಿದೆ. ಅಂದುಕೊಂಡಂತೆ ಆಗಿದ್ದರೆ, ಈ ಚಿತ್ರವನ್ನು ಯೋಗರಾಜ್ ಭಟ್ ನಿರ್ದೇಶನ ಮಾಡಬೇಕಿತ್ತು. ಆದರೆ, ಒಲಿದುಬಂದಿದ್ದು ಮಾತ್ರ ಶಶಾಂಕ್ ಅವರಿಗೆ. ಹತ್ತು ವರ್ಷಗಳ ನಂತರ ಮಳೆ ಮತ್ತೆ ಸುರಿಯಲು ರೆಡಿಯಾಗಿದೆ. ಮಳೆಯ ವಿಶೇಷತೆ ಕುರಿತು ನಿರ್ದೇಶಕರು ಮಾತಾಡಿದ್ದಾರೆ.

** 'ಮುಂಗಾರು ಮಳೆ' ಕನ್ನಡ ಸಿನಿಮಾರಂಗದಲ್ಲೊಂದು ಮೈಲಿಗಲ್ಲು. ನಿಮ್ಮ ಮಳೆಯ ಬಗ್ಗೆ ಹೇಳಿ?*

'ಮುಂಗಾರು ಮಳೆ'ಗೂ ಮತ್ತು 'ಮುಂಗಾರು ಮಳೆ 2' ಕತೆಗೂ ಯಾವುದೇ ಸಂಬಂಧವಿಲ್ಲ. ಹಾಗಂತ ಕನೆಕ್ಟ್ ಆಗಲ್ಲ ಅಂತೇನೂ ಇಲ್ಲ. ಒಂದಿಷ್ಟು ಅಂಶಗಳು ಇಲ್ಲಿಯೂ ಇವೆ. ಯೋಗರಾಜ್ ಭಟ್‌ರ ನಿರ್ದೇಶನದಲ್ಲಿ ಮೂಡಿಬಂದ 'ಮುಂಗಾರು ಮಳೆ'ಯು ಕೇವಲ ಮಳೆಗಾಲದಲ್ಲಿ ಮಾತ್ರ ಶೂಟ್ ಆಗಿತ್ತು. ಇಲ್ಲಿ ಮೂರು ಕಾಲಗಳಲ್ಲಿ ಕತೆ ಸಾಗುತ್ತದೆ. ತಾಂತ್ರಿಕ ವರ್ಗ ಮತ್ತು ಕಲಾವಿದರಲ್ಲೂ ಬದಲಾವಣೆ ಇದೆ. ಇನ್ನಷ್ಟು ಕುತೂಹಲದ ವಿಷಯಗಳಿದ್ದು, ಅವುಗಳನ್ನು ಸಿನಿಮಾದಲ್ಲಿಯೇ ನೋಡಿದರೆ ಚೆನ್ನ.

** 'ಮುಂಗಾರು ಮಳೆ 2' ಮೂಲಕ ಏನನ್ನು ಹೇಳುವುದಕ್ಕೆ ಹೊರಟಿದ್ದೀರಿ?*

ನಾನು ಸಿನಿಮಾದಲ್ಲಿ ವೇದಾಂತ ಹೇಳುವುದಕ್ಕೆ ಹೋಗುವುದಿಲ್ಲ. ಪ್ರೇಕ್ಷಕರಿಗೆ ಸಿನಿಮಾದಿಂದ ಬೇಕಾಗಿದ್ದು ಮನರಂಜನೆ. ಮನಸಿಗೆ ಉಲ್ಲಾಸ ನೀಡುವಂತಹ ಅಂಶಗಳು ಇರಬೇಕು. 'ಮುಂಗಾರು ಮಳೆ 2'ರಲ್ಲಿ ಅವೆಲ್ಲವೂ ಇವೆ. ಕ್ಯೂಟ್ ಆಗಿರುವ ಪ್ರೇಮಕತೆಯನ್ನು ಈ ಸಿನಿಮಾದಲ್ಲಿ ಹೇಳುವುದಕ್ಕೆ ಹೋಗಿದ್ದೇನೆ. ಅದನ್ನು ಕಲರ್‌ಫುಲ್ ಆಗಿ ಕಟ್ಟಿಕೊಟ್ಟಿದ್ದೇನೆ. ಪ್ರೀತಿ ಹೇಗೆ, ಎಲ್ಲಿ ಹುಟ್ಟುತ್ತದೆ ಎಂದು ಹೇಳುವುದು ಕಷ್ಟ. ಅಂತಹ ಪ್ರೀತಿಯ ಬಗ್ಗೆ ವಿಭಿನ್ನವಾಗಿ ಹೇಳಲು ಹೊರಟಿದ್ದೇನೆ. ಎಲ್ಲಾ ಪ್ರೇಮಿಗಳಿಗೆ ಈ ಕತೆ ಫ್ರೆಶ್ ಅನಿಸುತ್ತದೆ.

** ಅದೇ ನಾಯಕನಿಗೆ ಅವಕಾಶ ಕೊಟ್ಟಿದ್ದೀರಿ. ನಾಯಕಿ ಪೂಜಾ ಗಾಂಧಿಯನ್ನು ಯಾಕೆ ಆಯ್ಕೆ ಮಾಡಿಕೊಳ್ಳಲಿಲ್ಲ?*

ಆಗಲೇ ಹೇಳಿದಂತೆ, ಆ ಸಿನಿಮಾಗೂ ಈ ಸಿನಿಮಾಗೂ ಸಂಬಂಧವಿಲ್ಲ. 'ಮುಂಗಾರು ಮಳೆ' ಸಿನಿಮಾದ ಮುಂದುವರಿಕೆ ಚಿತ್ರವೂ ಇದಲ್ಲ. ಹಾಗಾಗಿ ಕತೆಗೆ ಯಾರು ಬೇಕಿತ್ತೋ ಅವರನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಪೂಜಾ ಗಾಂಧಿ ಅವರಿಗೆ ಒಪ್ಪುವಂಥ ಪಾತ್ರ ಇದಾಗಿರಲಿಲ್ಲ. ಅಲ್ಲದೇ ಹೊಸ ಹುಡುಗಿಯೇ ಈ ಪಾತ್ರಕ್ಕೆ ಬೇಕಿತ್ತು. ಹೀಗಾಗಿ ನೇಹಾ ಶೆಟ್ಟಿ ಅವರನ್ನು ಆಯ್ಕೆ ಮಾಡಿಕೊಂಡಿದ್ದು. ಅದಕ್ಕೆ ಬೇರೆ ಅರ್ಥ ಕಲ್ಪಿಸಬೇಕಿಲ್ಲ.

** ಗೆದ್ದ ಸಿನಿಮಾದ ಟೈಟಲ್ ಇಟ್ಟುಕೊಳ್ಳುವಾಗ ಭಯ ಆಗಲಿಲ್ಲವಾ?*

ಭಯಕ್ಕಿಂತಲೂ ಜವಾಬ್ದಾರಿ ಜಾಸ್ತಿ ಅನಿಸಿತು. 'ಮುಂಗಾರು ಮಳೆ'ಗೆ ಪ್ರೇಕ್ಷಕರು ಅತ್ಯುನ್ನತವಾದ ಸ್ಥಾನಕೊಟ್ಟಿದ್ದಾರೆ. ಹಾಗಾಗಿ ನಿರೀಕ್ಷೆ ಖಂಡಿತಾ ಹೆಚ್ಚು ಇದ್ದೇ ಇರುತ್ತದೆ. ಅದನ್ನು ದಾಟಿಕೊಳ್ಳುವ ಕೆಲಸವನ್ನು ನಾನು ಮಾಡಬೇಕಿತ್ತು. ಹೀಗಾಗಿ ಹೆಚ್ಚು ಕೆಲಸ ಮಾಡಿದ್ದೇನೆ. ಪ್ರೇಕ್ಷಕರ ನಿರೀಕ್ಷೆಯನ್ನು ತಲುಪುವಂತಹ ರೀತಿಯಲ್ಲಿ ಸಿನಿಮಾ ತಯಾರಾಗಿದೆ. ನಾವು ಹೊರಟಿರುವ ದಾರಿ ಸರಿಯಾಗಿದೆ ಅನ್ನುವುದನ್ನು ಹಾಡುಗಳು ಸಾಬೀತುಪಡಿಸಿವೆ. ದಾಖಲೆಯ ರೀತಿಯಲ್ಲಿ ಹಾಡುಗಳನ್ನು ಪ್ರೇಕ್ಷಕರು ಕೇಳಿದ್ದಾರೆ.

** ಗಣೇಶ್ ಅವರ ಪಾತ್ರ ಏನು? ಯಾವ ರೀತಿಯಲ್ಲಿ ಅವರು ಕಾಣಿಸಿಕೊಂಡಿದ್ದಾರೆ?*

ಪಾತ್ರದ ಬಗ್ಗೆ ಈಗಲೇ ಹೇಳುವುದು ಬೇಡ. ಲವರ್‌ಬಾಯ್ ಆಗಿರುತ್ತಾರೆ. ತುಂಬಾ ಕಲರ್‌ಫುಲ್ ಜೀವನ ಅವರದ್ದು. ಆ ಜೀವನದಲ್ಲಿ ಸಹಜವಾಗಿಯೇ ಬಿರುಗಾಳಿ ಬರುತ್ತವೆ. ಅದನ್ನು ಎದುರಿಸಿಕೊಂಡು ಹೇಗೆ ಹೋಗುತ್ತಾರೆ ಅನ್ನುವ ಕತೆ ಇಲ್ಲಿದೆ. ಇಡೀ ಸಿನಿಮಾದಲ್ಲಿ ಗಣೇಶ್ ವಿಭಿನ್ನವಾಗಿ ಕಂಡಿದ್ದಾರೆ. ಹೊಸ ರೀತಿಯಲ್ಲಿ ಪಾತ್ರ ನಿರ್ವಹಿಸಿದ್ದಾರೆ.

** ಶೂಟಿಂಗ್ ಅನುಭವ ಹೇಗಿತ್ತು?*

ಈವರೆಗೂ ಎಲ್ಲಾ ರೀತಿಯ ಚಿತ್ರಗಳನ್ನು ನಾನು ಮಾಡಿದ್ದೇನೆ. ಈ ಸಿನಿಮಾದ ಶೂಟಿಂಗ್ ಅನುಭವ ವಿಭಿನ್ನವಾಗಿತ್ತು. ದೃಶ್ಯಗಳು ಹೀಗೆಯೇ ಬರಬೇಕು ಅಂತ ನಾನು ಮೊದಲೇ ನಿರ್ಧಾರ ಮಾಡಿದ್ದೆ. ಹೀಗಾಗಿ ಪ್ರತಿ ದೃಶ್ಯವೂ ನನಗೆ ಥ್ರಿಲ್ ನೀಡಿತು. ಸದ್ಯ ಹಾಡುಗಳ ಮೇಕಿಂಗ್ ಅನ್ನು ಸಾಮಾಜಿಕ ಜಾಲತಾಣದಲ್ಲಿ ಬಿಟ್ಟಿದ್ದೇನೆ. ಎಲ್ಲರೂ ಅವುಗಳನ್ನು ಮೆಚ್ಚಿಕೊಂಡಿದ್ದಾರೆ. ಮಾತಿನ ಭಾಗದ ದೃಶ್ಯವೂ ಹಾಗೆಯೇ ಬಂದಿದೆ. ■



Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly

'ನೀರ್‌ದೋಸೆ' ವಯಸ್ಕರಿಗೆ ಮಾತ್ರ



ಹರಿಪ್ರಿಯಾ ನಟನೆಯ 'ನೀರ್‌ದೋಸೆ'ಯನ್ನು ಯಾರು ಬೇಕಾದರೂ ಸವಿಯುವಂತಿಲ್ಲವೆಂದು ಸೆನ್ಸಾರ್ ಮಂಡಳಿ ಘೋಷಿಸಿದೆ. ಹೀಗಾಗಿಯೇ ವಯಸ್ಕರು ಮಾತ್ರ ನೋಡಬೇಕೆಂದು ಸೂಚಿಸುವ 'ಎ' ಪ್ರಮಾಣಪತ್ರವನ್ನು ಚಿತ್ರಕ್ಕೆ ನೀಡಿದೆ. ಇಂಥದ್ದೊಂದು ಪ್ರಮಾಣಪತ್ರ ಚಿತ್ರಕ್ಕೆ ಸಿಗಲು ಕಾರಣ, ಡಬ್ಬಲ್ ಮೀನಿಂಗ್ ಡೈಲಾಗ್ಸ್ ಮತ್ತು ಹಸಿಬಿಸಿ ದೃಶ್ಯಗಳು ಹೇರಳವಾಗಿವೆ ಎನ್ನಲಾಗುತ್ತಿದೆ. ಜಗ್ಗೇಶ್ ಸಿನಿಮಾಗಳಲ್ಲಿ ಡಬಲ್ ಮೀನಿಂಗ್ ಡೈಲಾಗ್ಸ್ ಇರುವುದು ಸಾಮಾನ್ಯ. ಈ ಬಾರಿ ಪೋಲಿ ಮಾತುಗಳ ಸರದಾರ ವಿಜಯ ಪ್ರಸಾದ್ ಕೂಡ ಜತೆಯಾಗಿರುವುದರಿಂದ 'ನೀರ್‌ದೋಸೆ' ಮತ್ತಷ್ಟು ಬಿಸಿಯಾಗಿದೆಯಂತೆ. ಹೀಗಾಗಿ ಸಿನಿಮಾ ತಂಡ ಕೂಡ ಇದೇ ಸರ್ಟಿಫಿಕೇಟ್‌ನ ನಿರೀಕ್ಷೆಯಲ್ಲಿತ್ತು ಅನ್ನುವ ಮಾತು ಕೇಳಿಬಂದಿದೆ.

ಇದೇ ಶುಕ್ರವಾರ ಸಿನಿಮಾ ರಿಲೀಸ್ ಆಗುತ್ತಿದೆ. ಮೂರು ವರ್ಷಗಳಿಂದ ಸಾಕಷ್ಟು ತೊಂದರೆಗಳನ್ನು ಅನುಭವಿಸಿರುವ ನಿರ್ದೇಶಕರು, ಸಿನಿಮಾ ರಿಲೀಸ್ ಮಾಡುವ ಮೂಲಕ ನಿರಾಳರಾಗುತ್ತಿದ್ದಾರೆ.

ಈಗಾಗಲೇ ಸೋಷಿಯಲ್ ಮೀಡಿಯಾದಲ್ಲಿ ಸಿನಿಮಾದ ಟ್ರೇಲರ್ ವೈರಲ್ ಆಗಿದೆ. ಇದೇ ಮೊದಲ ಬಾರಿಗೆ ಜಗ್ಗೇಶ್ ಮತ್ತು ಹರಿಪ್ರಿಯಾ ಪ್ರಧಾನ ಭೂಮಿಕೆಯಲ್ಲಿದ್ದಾರೆ. ಹೀಗಾಗಿ ಚಿತ್ರ ನಿರೀಕ್ಷೆ ಮೂಡಿಸಿದೆ.

ರೀಮೇಕ್‌ನಲ್ಲಿ ಶರಣ್

ಸ್ವಮೇಕ್ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತಿದ್ದರೂ, ಶರಣ್ ಮಾತ್ರ ರೀಮೇಕ್‌ನತ್ತ ಮುಖ ಮಾಡಿದ್ದಾರೆ. ಹೀಗಾಗಿ ಇವರ ಸಾಲು ಸಾಲು ರೀಮೇಕ್ ಚಿತ್ರಗಳು ಸೆಟ್ಟೇರುತ್ತಿವೆ. ಈಗಾಗಲೇ ಮೂರು ರೀಮೇಕ್ ಚಿತ್ರಗಳಲ್ಲಿ ನಟಿಸುತ್ತಿರುವ ಶರಣ್, ಈಗ ಮತ್ತೊಂದು ರೀಮೇಕ್ ಸಿನಿಮಾಗೂ ಸಹಿ ಮಾಡಿದ್ದಾರೆ. ತಮಿಳಿನ 'ನಾನುಮ್ ರೌಡಿ ಧಾನ್' ಚಿತ್ರವು ಕನ್ನಡಕ್ಕೆ ರೀಮೇಕ್ ಆಗುತ್ತಿದ್ದು, ಈ ಚಿತ್ರದಲ್ಲಿ ಶರಣ್ ನಾಯಕ. ಈಗಾಗಲೇ ಸೋಲಿನ ಸುಳಿಯಲ್ಲಿ ಮುಳುಗಿರುವ ನಿರ್ದೇಶಕ ಪಿ.ಸಿ.ಶೇಖರ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಸ್ವಮೇಕ್ ಸಿನಿಮಾಗಳ ಮೂಲಕ ಗುರುತಿಸಿಕೊಂಡಿದ್ದ ನಿರ್ದೇಶಕರು, ಗೆಲ್ಲುವುದಕ್ಕಾಗಿ ರೀಮೇಕ್‌ಗೆ ಮಣೆಹಾಕಿದ್ದಾರಂತೆ. 'ನಾನುಮ್ ರೌಡಿ ಧಾನ್' ಕಳೆದ ವರ್ಷ ರಿಲೀಸ್ ಆಗಿರುವ ಸಿನಿಮಾ. ವಿಜಯ್ ಸೇತುಪತಿ ಮತ್ತು ನಯನತಾರಾ ಮುಖ್ಯ ಭೂಮಿಕೆಯಲ್ಲಿದ್ದರು. ಬಾಕ್ಸ್ ಆಫೀಸ್‌ನಲ್ಲೂ ಈ ಸಿನಿಮಾ ಗೆದ್ದಿತ್ತು. ಹೀಗಾಗಿ ಈ ಸಿನಿಮಾವನ್ನು ಕನ್ನಡಕ್ಕೆ ತರುತ್ತಿದ್ದಾರೆ ನಿರ್ದೇಶಕರು.




ಎಂಬತ್ತರ ದಶಕದಲ್ಲಿ ಅಮೂಲ್ಯ

'ಮಾಸ್ತಿಗುಡಿ' ಸಿನಿಮಾದಲ್ಲಿ ಅಮೂಲ್‌ಬೇಬಿ ಅಮೂಲ್ಯ ಎಂಬತ್ತರ ದಶಕದ ಲುಕ್‌ನಲ್ಲಿ ಮಿಂಚಿದ್ದಾರೆ. ಈ ಸ್ಟೈಲ್‌ನಲ್ಲಿ ಅವರು ಕಾಣಿಸಿಕೊಳ್ಳಲು ಸಾಕಷ್ಟು ತಯಾರಿಯನ್ನೂ ಮಾಡಿಕೊಂಡಿದ್ದಾರೆ. 80ರ ದಶಕ ನೆನಪಿಸುವ ಸಾಂಪ್ರದಾಯಿಕ ಉಡುಗೆಯಲ್ಲಿ ಕಾಣಿಸಿಕೊಳ್ಳಬೇಕಾಗಿದ್ದರಿಂದ ತಾಯಿಯ ಸಹಾಯವನ್ನೂ ಅವರು ಪಡೆದಿದ್ದಾರೆ. ಇವರು ಇಷ್ಟೊಂದು ಸರ್ಕಸ್ ಮಾಡಲು ಕಾರಣ, ಚಿತ್ರದ ಪಾತ್ರವಂತೆ. "ಹಿಂದಿನ ಕಾಲದಲ್ಲಿ ಹಾಕಿಕೊಳ್ಳುತ್ತಿದ್ದ ಲಂಗ ದಾವಣಿ ಇಂದು ಟ್ರೆಂಡ್ ಆಗಿ ಬದಲಾಗಿದೆ. ನಾನು ಇತ್ತೀಚಿನ ಸಿನಿಮಾಗಳಲ್ಲಿ ಸಖತ್ ಗ್ಲಾಮರ್ ಆಗಿ ಕಾಣಿಸಿಕೊಳ್ಳುತ್ತಿದ್ದೇನೆ. ಹೀಗಾಗಿ ಎಂಬತ್ತರ ಲುಕ್‌ಗೆ ಬದಲಾಗುವುದು ಕಷ್ಟವಾಗಿತ್ತು, ಹೊಸ ರೀತಿಯಲ್ಲಿ ಕಾಣಬೇಕು ಅನ್ನುವ ದೃಷ್ಟಿಯಿಂದ ಮೂಗುತಿ ಹಾಗೂ ಬಣ್ಣಗಳ ಲಂಗ ದಾವಣಿ ಧರಿಸಿದ್ದೇನೆ. ಅತ್ಯಂತ ಮೃದು ಸ್ವಭಾವದ ಹುಡುಗಿಯಾಗಿದ್ದ ಕಾರಣ, ಕರೆಕ್ಟಾಗಿ ಆ ಲುಕ್ ಮ್ಯಾಚ್ ಆಗಿದೆ" ಅಂತಾರೆ ಅಮೂಲ್ಯ. ಇಷ್ಟೇ ಇಲ್ಲದೇ ಚಿತ್ರಕ್ಕಾಗಿ ಕಣ್ಣಿನ ಲೆನ್ಸ್ ಕೂಡ ಬದಲಾಯಿಸಿದ್ದಾರೆ. ಬೆಕ್ಕಿನ ಕಣ್ಣು ಬೇಕಿದ್ದರಿಂದ ಆ ಬಣ್ಣದ ಲೆನ್ಸ್ ಹಾಕಿದ್ದಾರೆ. ಚಿತ್ರದಲ್ಲಿ ಅಮೂಲ್ಯ ಕಾಲೇಜು ಹುಡುಗಿಯಾಗಿ ನಟಿಸಿದ್ದರೂ, ಪಾತ್ರಕ್ಕೆ ವಿಶೇಷ ಹಿನ್ನೆಲೆ ಇದೆಯಂತೆ. ಇದು ನಾಗಶೇಖರ್ ನಿರ್ದೇಶನದ ಚಿತ್ರ. ಸಾಧುಕೋಕಿಲಾ ಸಂಗೀತ ನೀಡಿದ್ದು, ಡಿಸೆಂಬರ್‌ನಲ್ಲಿ ತೆರೆಗೆ ಬರಲಿದೆ.



'ನಿರುತ್ತರ'ದಲ್ಲಿ ರೆಸೂಲ್ ...



'ಸ್ಲಮ್ ಡಾಗ್ ಮಿಲೇನಿಯರ್' ಸಿನಿಮಾಗಾಗಿ ಆಸ್ಕರ್ ಪ್ರಶಸ್ತಿ ಪಡೆದಿರುವ ರೆಸೂಲ್ ಪೂಕುಟ್ಟಿ ಮೊದಲ ಬಾರಿಗೆ ಕನ್ನಡ ಚಿತ್ರವೊಂದರಲ್ಲಿ ಕೆಲಸ ಮಾಡಿದ್ದಾರೆ. ಅಪೂರ್ವ ಕಾಸರವಳ್ಳಿ ನಿರ್ದೇಶನದ 'ನಿರುತ್ತರ' ಚಿತ್ರಕ್ಕಾಗಿ ಇವರು ಧ್ವನಿ ವಿನ್ಯಾಸ ಮಾಡಿದ್ದಾರೆ. ಸಿನಿಮಾದ ಕತೆಯು ಪ್ರಯಾಣದೊಂದಿಗೆ ಬೆಳೆಯುವುದರಿಂದ ವಿಷುವಲ್ ಜೊತೆಗೆ ಶಬ್ದ ಗ್ರಹಣಕ್ಕೂ ಪ್ರಾಮುಖ್ಯತೆ ಇದೆಯಂತೆ. ಹೀಗಾಗಿ ನಿರ್ದೇ... ರೆಸೂಲ್ ಅವರನ್ನು ಕನ್ನಡಕ್ಕೆ ಕರೆತಂದಿದ್ದಾರೆ.

ಚಿತ್ರವು ಬೆಂಗಳೂರಿನಿಂದ ಹಿಮಾಚಲದವರೆಗೆ ಶೂಟಿಂಗ್ ನ... ಆಯಾ ಸ್ಥಳದ ಸಂಸ್ಕೃತಿಯನ್ನು ದೃಶ್ಯ ಕಾವ್ಯದ ಮೂಲಕ ಕಟ್ಟಿಕೊ... ಎಷ್ಟು ಮುಖ್ಯವೋ ಅಲ್ಲಿನ ಶಬ್ದಗಳೂ, ಧ್ವನಿಗಳೂ ಸಂಸ್ಕೃತಿಯ ಭಾಗವಾ... ಅದನ್ನು ಅರ್ಥ ಮಾಡಿಕೊಂಡು ಪೂಕುಟ್ಟಿ ಅವರು ತಮ್ಮ ಕೆ... ಚೆನ್ನಾಗಿ ನಿರ್ವಹಿಸಿದ್ದಾರೆ ಎನ್ನುವುದು ನಿರ್ದೇಶಕರ ಮಾತು. 'ನಿರು... ಕೆಲಸ ಪೂಕುಟ್ಟಿ ಅವರಿಗೆ ದೊಡ್ಡ ಸವಾಲಾಗಿತ್ತಂತೆ. ಈ ಸಿನಿ... ಸಂಗೀತ ವಿಭಿನ್ನವಾಗಿದೆ. ಅಲ್ಲದೇ, ಶಾಸ್ತ್ರೀಯತೆಗೆ ಹೆಚ್ಚು ಒತ್ತು ನೀಡ... ಈಗಿನ ಗೀತೆಗಳಲ್ಲಿರುವಂತೆ ಹಿಮ್ಮೇಳಗಳ ಅಬ್ಬರವಿಲ್ಲ. ಹೀಗಾಗಿ ... ಮಾಡಲು ಸಿನಿಮಾ ರೆಸೂಲ್ ಅವರಿಗೆ ಸಾಕಷ್ಟು ಪ್ರೇರಣೆ ಆಯಿತ...

ರಾಜಸ್ಥಾನ, ಗೋವಾ, ಹಿಮಾಚಲಪ್ರದೇಶ ಹೀಗೆ ನಾನಾ ಕಡೆ ಸಿನಿ... ಶೂಟಿಂಗ್ ನಡೆದಿದೆ. ಆಯಾ ಪ್ರದೇಶದಲ್ಲಿ ಒಂದೊಂದು ಶಬ್ದಗಳು ಕೇಳಿಬ... ಅವೆಲ್ಲವೂ ವಿಭಿನ್ನ. ಹಾಗಾಗಿ ಇದೊಂದು ಸವಾಲಿನ ಕೆಲಸವಾಗಿತ್ತು ಅಂ... ಪೂಕುಟ್ಟಿ.

ತಾಯಿಯಾದ ಸುಮಲ...

ಸುಮಲತಾ ಅಂಬರೀಷ್ ಮತ್ತೆ ಸಿನಿಮಾ ರಂಗದಲ್ಲಿ ಸಕ್ರಿಯರಾಗು... ಪುನೀತ್ ರಾಜ್‌ಕುಮಾರ್ ನಟನೆಯ 'ದೊಡ್ಮನೆ ಹುಡುಗ' ಸಿನಿ... ಇವರು ಪುನೀತ್‌ಗೆ ತಾಯಿಯಾಗಿ ನಟಿಸುತ್ತಿದ್ದಾರೆ. ಡಾ.ರಾಜ್‌ಕುಮಾರ್... ನಾಯಕಿಯಾಗಿ ನಟಿಸಿದ್ದ ಇವರು, ಈಗ ಪುನೀತ್‌ಗೆ ತಾಯಿ... ಕಾಣಿಸಿಕೊಂಡಿದ್ದು ಸಂಭ್ರಮ ತರುತ್ತಿದೆ ಅಂದಿದ್ದಾರೆ.

ಸುಮಲತಾ ಈ ಸಿನಿಮಾವನ್ನು ಒಪ್ಪಿಕೊಳ್ಳಲು ಕಾರಣ ಪುನೀತ್... ನಿರ್ದೇಶಕ ಸೂರಿಯಂತೆ. ಸೂರಿಯ ಅನೇಕ ಸಿನಿಮಾಗಳನ್ನು ಮೆಚ್ಚಿಕೊಂಡಿರುವ ಸುಮಲತಾ, ಆ ಕಾರಣಕ್ಕಾಗಿ ದೊಡ್ಮನೆಗೆ ಬರಲು ಒಪ್ಪಿದ್ದಾರೆ. ಅಲ್ಲದೇ ಪುನೀತ್ ಜತೆ ಕೆಲಸ ಮಾಡಬೇಕು ಅನ್ನುವ ಆಸೆ ಕೂಡ ಇವರದ್ದಾಗಿತ್ತಂತೆ. 'ದೊಡ್ಮನೆ ಹುಡುಗ' ಸಿನಿಮಾದಲ್ಲಿ ತಾಯಿ ಮತ್ತು ಮಗನ ಸೆಂಟಿಮೆಂಟ್ ದೃಶ್ಯಗಳು ಹೇರಳವಾಗಿವೆ. ಹೀಗಾಗಿಯೇ ಸುಮಲತಾ ಅವರನ್ನು ಈ ಪಾತ್ರ ಹುಡುಕಿಕೊಂಡು ಹೋಗಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com